ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 4 | ಜನವರಿ 17–23, 2022 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಧೀರಜ್ ರಾಜೇಂದ್ರನ್ ಲಾಲ್ ಸಲಾಂ



ಚಂಪಾ ಎಂಬ ಎಚ್ಚರ

ಬಳ್ಳಾರಿ ಸರ್ಕಾರಿ ಭೂಮಿ ರಾಜಕಾರಣಿಗಳ ಪಾಲು!?








ಬ್ರಿಟಿಷರೊಂದಿಗೆ ಕೈಜೋಡಿಸಿದವರನ್ನು ಸ್ವಾತಂತ್ರ್ಯ ವೀರರಾಗಿಸುವ ಹುನ್ನಾರ



CPI(M) 23ನೇ ಮಹಾಧಿವೇಶನ

ಏಪ್ರಿಲ್ 6-10, 2022 ಕಣ್ಣೂರು



ಇನ್ನಷ್ಟು ನಿರ್ಣಯಗಳು

ಸಿಪಿಐ(ಎಂ) 23 ನೇ ಮಹಾಧಿವೇಶನ : ಏಪ್ರಿಲ್ 6-10, 2022

ಸಿಪಿಐ(ಎಂ)ನ 23 ನೇ ಮಹಾಧಿವೇಶನವನ್ನು ಕೇರಳದ ಕಣ್ಣೂರಿನಲ್ಲಿ ನಡೆಸಲು ಈ ಹಿಂದೆ ಕೇಂದ್ರ ಸಮಿತಿ ನಿರ್ಧರಿಸಿದ್ದು, ಜನವರಿ 7 ರಿಂದ 9 ರ ವರೆಗೆ ಹೈದರಾಬಾದಿನಲ್ಲಿ ನಡೆದ ಕೇಂದ್ರ ಸಮಿತಿಯ ಸಭೆ ಮಹಾಧಿವೇಶನವನ್ನು ಎಪ್ರಿಲ್ 6ರಿಂದ 10 ವರೆಗೆ ನಡೆಸಲು ನಿರ್ಧರಿಸಿದೆ. ಸಭೆಯ ನಂತರ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಇದನ್ನು ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಪ್ರಕಟಿಸಿದ್ದಾರೆ.



ಈ ಸಭೆಯಲ್ಲಿ ಕೇಂದ್ರ ಸಮಿತಿ ಮಹಾಧಿವೇಶನದ ಮುಂದೆ ಇಡಲಿರುವ ಕರಡು ರಾಜಕೀಯ ನಿರ್ಣಯದ ಕುರಿತು ಚರ್ಚೆ ನಡೆಸಿ ಸರ್ವಾನುಮತದಿಂದ ಅಂಗೀಕರಿಸಿತು. ಚರ್ಚೆ ಮತ್ತು ಕೇಂದ್ರ ಸಮಿತಿ ಸದಸ್ಯರು ಸೂಚಿಸಿದ ನಿರ್ದಿಷ್ಟ ತಿದ್ದುಪಡಿಗಳ ಆಧಾರದಲ್ಲಿ ಕರಡನ್ನು ಅಂತಿಮಗೊಳಿಸಲು ಪೊಲಿಟ್‌ಬ್ಯುರೊಗೇ ಸಭೆಗೆ ಅಧಿಕಾರ ನೀಡಿತು.

ಈ ವಿಷಯದಲ್ಲಿ ಟಿಪ್ಪಣಿ ಮಾಡುತ್ತ, ಸಿಪಿಐ(ಎಂ) ಒಂದು ಚೈತನ್ಯಪೂರ್ಣ ಆಂತರಿಕ ಪ್ರಜಾಪ್ರಭುತ್ವವನ್ನು ಅನುಸರಿಸುತ್ತದೆ ಎಂದು ಯೆಚುರಿ ನೆನಪಿಸಿದರು. ಪಕ್ಷದ ಸಂವಿಧಾನದ ಪ್ರಕಾರ ಕರಡು ರಾಜಕೀಯ ನಿರ್ಣಯವನ್ನು ಮಹಾಧಿವೇಶನ ಕರೆಯುವ ಎರಡು ತಿಂಗಳ ಮೊದಲು ಪಕ್ಷದ ಸದಸ್ಯರ ನಡುವೆ ವ್ಯಾಪಕ ಚರ್ಚೆಗೆ ಬಿಡುಗಡೆ ಮಾಡಬೇಕು. ಅದರ ಪ್ರಕಾರ ಫೆಬ್ರುವರಿ 2022ರ ಆರಂಭದಲ್ಲಿ ಇದನ್ನು ಬಿಡುಗಡೆ ಮಾಡಲಾಗುವುದು ಎಂದು ಯೆಚುರಿ ಹೇಳಿದರು. ಪಕ್ಷದ ಪ್ರತ್ರಿಯೊಬ್ಬ ಸದಸ್ಯರು ನಿರ್ದಿಷ್ಟ ತಿದ್ದುಪಡಿಗಳನ್ನು ಮತ್ತು ಸೂಚನೆಗಳನ್ನು ನೇರವಾಗಿ ಕೇಂದ್ರ ಸಮಿತಿಗೆ ಕಳಿಸಬಹುದಾಗಿದೆ. ಇವನ್ನೆಲ್ಲ ಕಲೆಹಾಕಿ ಮಹಾಧಿವೇಶನ-ಪೂರ್ವ ತಿದ್ದುಪಡಿಗಳನ್ನು ಕುರಿತ ಒಂದು ವರದಿಯನ್ನು ಕರಡು ನಿರ್ಣಯದ ಜತೆಗೆ ಮಹಾಧಿವೇಶನದಲ್ಲಿ ಮಂಡಿಸಲಾಗುವುದು.

ಮುಂಬರುವ ಚುನಾವಣೆಗಳು: ಬಿಜೆಪಿಯನ್ನು ಸೋಲಿಸುವುದು ಪ್ರಥಮ ಗುರಿ

ಈ ನಡುವೆ ಉತ್ತರಪ್ರದೇಶ, ಪಂಜಾಬ್, ಉತ್ತರಾಖಂಡ, ಗೋವ ಮತ್ತು ಮಣಿಪುರ ವಿಧಾನಸಭೆಗಳಿಗೆ ಚುನಾವಣಾ ವೇಳಾಪಟ್ಟಿ ಪ್ರಕಟವಾಗಿರುವ ಬಗ್ಗೆ ಮಾತಾಡುತ್ತ, ಈ ಚುನಾವಣೆಗಳಲ್ಲಿ ಬಿಜೆಪಿಯನ್ನು ಸೋಲಿಸುವುದು ಪ್ರಥಮ ಗುರಿ ಎಂದು ಯೆಚುರಿ ಹೇಳಿದರು. ಈ ರಾಜ್ಯಗಳಲ್ಲಿ ಬಿಜೆಪಿ-ವಿರೋಧಿ ಮತಗಳನ್ನು ಗರಿಷ್ಟ ಪ್ರಮಾಣದಲ್ಲಿ ಕ್ರೋಡೀಕರಿಸಲು ಸೂಕ್ತ ಕಾರ್ಯತಂತ್ರಗಳನ್ನು ಸಿಪಿಐ(ಎಂ) ಅಂಗೀಕರಿಸುತ್ತದೆ ಎಂದು ಅವರು ಹೇಳಿದರು. ಬಿಜೆಪಿಯನ್ನು ಸೋಲಿಸುವುದಕ್ಕೂ ಮತ್ತು ಜನಸಾಮಾನ್ಯರ ಬದುಕನ್ನು ಉತ್ತಮಪಡಿಸಿವುದಕ್ಕೂ, ಸಂವಿಧಾನಿಕ ವ್ಯವಸ್ಥೆ ಯನ್ನು ಕಾಯ್ದುಕೊಳ್ಳುವುದಕ್ಕೂ ಅವಿಚ್ಛಿನ್ನ ಸಂಬಂಧವಿದೆ ಎಂದು ಅವರು ವಿವರಿಸಿದರು.

ಮೋದಿ ಸರಕಾರ ಅನುಸರಿಸುತ್ತಿರುವ ಆರ್ಥಿಕ ಧೋರಣೆಗಳಿಂದ ಜನರು ಹೆಚ್ಚೆಚ್ಚು ಅಸಂತೃಪ್ತರಾಗಿದ್ದಾರೆ. ಜನಗಳ ಜೀವ ಮತ್ತು ಜೀನಾಧಾರಗಳನ್ನು ರಕ್ಷಿಸುವಲ್ಲಿ ಕೇಂದ್ರ ಸರಕಾರದ ಸಂಪೂರ್ಣ ವಿಫಲತೆ ಕೊವಿಡ್ ಘಟ್ಟದಲ್ಲಿ ಎದ್ದು ಕಂಡಿದೆ ಎಂದ ಯೆಚುರಿಯವರು ಸರಕಾರದ ಲಸಿಕೆ ಧೋರಣೆ ಅತಾರ್ಕಿಕವಾಗಿದೆ ಎಂದು ದೂಷಿಸಿದರು.

ಕೇಂದ್ರ ಸರಕಾರ ಕಳೆದ ಏಳು ವರ್ಷಗಳಲ್ಲಿ ಪೆಟ್ರೋ-ಉತ್ಪನ್ನಗಳ ಮಾರಾಟದ ಮೂಲಕ ಸಂಗ್ರಹಿಸಿದ ಪರೋಕ್ಷ ತೆರಿಗೆಗಳು ಮತ್ತು ಸಬ್ಸಿಡಿಗಳ ಮೇಲೆ ಮಾಡಿದ ವೆಚ್ಚಗಳನ್ನು ಕುರಿತಂತೆ ಒಂದು ಶ್ವೇತಪತ್ರವನ್ನು ಪ್ರಕಟಿಸಬೇಕು ಎಂದು ಯೆಚುರಿ ಆಗ್ರಹಿಸಿದರು.

ಮೋದಿ ಆಳ್ವಿಕೆಯ ನಿರ್ಲಕ್ಷ್ಯಪೂರ್ಣ ಧೋರಣೆಗಳಿಂದಾಗಿ ಬಡತನ, ನಿರುದ್ಯೋಗ ಮತ್ತು ಹಸಿವು ಸ್ವಾತಂತ್ರ್ಯದ 75 ವರ್ಷಗಳಲ್ಲಿ ಹಿಂದೆಂದೂ ಕಾಣದ ಮಟ್ಟವನ್ನು ತಲುಪಿವೆ. ಎಂದು ಅವರು ಹೇಳಿದರು.

ಚುನಾವಣೆಯಲ್ಲಿ ಹಣದ ಪಾತ್ರವನ್ನು ಚುನಾವಣಾ ಆಯೋಗ ನಿಯಂತ್ರಿಸಬೇಕು

ಈ ಚುನಾವಣೆಗಳನ್ನು ನಡೆಸುವಾಗ ಚುನಾವಣಾ ಆಯೋಗ ತನ್ನ ಸಂವಿಧಾನಿಕ ಅಧಿಕಾರಗಳನ್ನು ಚಲಾಯಿಸಬೇಕು, ತನ್ನ ಹಕ್ಕನ್ನು ಎತ್ತಿ ಹಿಡಿಯಬೇಕು ಎಂದು ಯೆಚುರಿ ಆಯೋಗಕ್ಕೆ ಕರೆ ನೀಡಿದರು. ಪ್ರಸಕ್ತ ವ್ಯವಸ್ಥೆ ನೀತಿ ಸಂಹಿತೆಯ ಉಲ್ಲಂಘನೆ ಗಳನ್ನು ತಡೆಯುವಲ್ಲಿ ವಿಫಲವಾಗಿದೆ ಯಾದ್ದರಿಂದ ಚುನಾವಣಾ ಪ್ರಕ್ರಿಯೆಯನ್ನು ಸುಧಾರಿಸುವ ಅಗತ್ಯವಿದೆ. ಈ ಚುನಾವಣೆಗಳಲ್ಲಿ ಹಣದ ಪಾತ್ರವನ್ನು ನಿಯಂತ್ರಿಸಲು ಕ್ರಮಗಳನ್ನು ಅಯೋಗ ಯುದ್ಧೋಪಾದಿಯಲ್ಲಿ ಕೈಗೊಳ್ಳಬೇಕಾಗಿದೆ.

ಬಿಜೆಪಿ ಅಸಂವಿಧಾನಿಕವಾಗಿ ಸ್ಥಾಪಿಸಿರುವ ಚುನಾವಣಾ ಬಾಂಡುಗಳ ಮೂಲಕ ಆಳುವ ಬಿಜೆಪಿ ಅಪಾರ ಸಂಪತ್ತನ್ನು ರಾಶಿ ಹಾಕಿದೆ ಎಂದು ನೆನಪಿಸಿದ ಯೆಚುರಿ, ಚುನಾವಣಾ ಬಾಂಡುಗಳ ಮೂಲಕ ಸಂಗ್ರಹವಾದ ರಾಜಕೀಯ ದೇಣಿಗೆಗಳಲ್ಲಿ 80% ಬಿಜೆಪಿಯ ಪಾಲಾಗಿದೆ ಎಂಬ ವರದಿಗಳನ್ನು ಉಲ್ಲೇಖಿಸುತ್ತ, ಇದರ ಸಹಾಯದಿಂದ ಅದಕ್ಕೆ ಹಣಬಲದ ಪ್ರಯೋಗದ ಮೂಲಕ ಚುನಾವಣಾ ಪ್ರಕ್ರಿಯೆಯನ್ನೇ ಬದಿಗೊತ್ತಲು ಸಾಧ್ಯವಾಗಿದೆ ಎಂದು ಅವರು ಹೇಳಿದರು. ಈ ಚುನಾವಣಾ ಬಾಂಡುಗಳ ಮೂಲಕ ಬಿಜೆಪಿ ರಾಜಕೀಯ ಭ್ರಷ್ಟಾಚಾರಕ್ಕೆ ಸಾಂಸ್ಥಿಕ ಸ್ವರೂಪವನ್ನು ಕೊಟ್ಟಿದೆ, ಅದನ್ನು ಕಾನೂನುಬದ್ಧಗೊಳಿಸಿದೆ ಎಂದು ಯೆಚುರಿ ಖೇದ ವ್ಯಕ್ತಪಡಿಸಿದರು.

ಪರ್ಯಾಯ ರಂಗ ಚುನಾವಣೆಗಳ ಮೊದಲು ಇಲ್ಲ

ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತ, ಸಾರ್ವತ್ರಿಕ ಚುನಾವಣೆಗಳ ಮೊದಲು ಒಂದು ಅಖಿಲ ಭಾರತ ಪರ್ಯಾಯ ರಂಗವನ್ನು ರಚಿಸುವ ಸಾಧ್ಯತೆ ಇಲ್ಲೆಂದು ಯೆಚುರಿ ಸ್ಪಷ್ಟೀಕರಿಸಿದರು. ಈ ಹಿಂದೆ ರಾಷ್ಟ್ರೀಯ ರಂಗವಾಗಲೀ, ಸಂಯುಕ್ತ ರಂಗವಾಗಲೀ, ಎನ್‌ಡಿಎ ಮತ್ತು ಯುಪಿಎ ಯಾಗಲೀ ಎಲ್ಲವೂ ಚುನಾವಣಾ ನಂತರದ ಸನ್ನಿವೇಶದಲ್ಲಿಯೇ ರಚನೆಗೊಂಡವು ಎಂದು ಪತ್ರಕರ್ತರಿಗೆ ಅವರು ನೆನಪಿಸಿದರು.

ಚುನಾವಣಾ ಹೊಂದಾಣಿಕೆಗಳ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತ, ಆಯಾಯ ರಾಜ್ಯದಲ್ಲಿ ಉಂಟಾಗುವ ಮೂರ್ತ ಸನ್ನಿವೇಶಕ್ಕೆ ಅನುಗುಣವಾಗಿ ಈ ಬಗ್ಗೆ ನಿರ್ಧರಿಸಲಾಗುವುದು ಎಂದು ಅವರು ಹೇಳಿದರು.

ಬಿಜೆಪಿಯನ್ನು ಸೋಲಿಸುವುದನ್ನು ತನ್ನ ರಾಜಕೀಯ ಗುರಿಯಾಗಿ ಹೊಂದಿರುವ ಯಾವುದೇ ರಾಜಕೀಯ ಸಂರಚನೆಯನ್ನು ಪಕ್ಷ ಸ್ವಾಗತಿಸುವುದಾಗಿಯೂ ಯೆಚುರಿ ಹೇಳಿದರು. ಸಮಾಜವಾದಿ ಪಾರ್ಟಿ ಬಿಜೆಪಿಯನ್ನು ಸೋಲಿಸುವ ಸಾಮರ್ಥ್ಯ ಇರುವ ಒಂದು ಪಕ್ಷವಾದ್ದರಿಂದ ಉತ್ತರಪ್ರದೇಶದಲ್ಲಿ ಮುಂಬರುವ ಚುನಾವಣೆಗಳಲ್ಲಿ ಸಿಪಿಐ(ಎಂ) ಅದನ್ನು ಬೆಂಬಲಿಸುತ್ತದೆ. ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಎಡಪಕ್ಷಗಳು ಸಮಾನ ನಿಲುವನ್ನು ರೂಪಿಸಲು ಸಮಾಲೋಚನೆಗಳು ನಡೆಯುತ್ತಿವೆ ಎಂದೂ ಅವರು ತಿಳಿಸಿದರು.

ಇನ್ನೊಂದು ಪ್ರಶ್ನೆಗೆ ಉತ್ತರ ನೀಡುತ್ತ, ಬಿಜೆಪಿ ಕುರಿತಂತೆ ತನ್ನ ನಿಲುವನ್ನು ಟಿಆರ್‌ಎಸ್ ಮುಖ್ಯಸ್ಥರು ಪ್ರಕಟಪಡಿಸಬೇಕಾಗಿದೆ ಎಂದು ಯೆಚುರಿ ಹೇಳಿದರು. ಈ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಸಿಪಿಐ(ಎಂ) ತೆಲಂಗಾಣ ರಾಜ್ಯ ಕಾರ್ಯದರ್ಶಿ ತಮ್ಮಿನೇನಿ ವೀರಭದ್ರಂ, ಇದುವರೆಗೆ ಬಿಜೆಪಿಯನ್ನು ಸೋಲಿಸಿಬೇಕೆಂಬ ಯಾವ ಕರೆಯೂ ಟಿಆರ್‌ಎಸ್ ಪಕ್ಷದಿಂದ ಬಂದಿಲ್ಲ ಎಂದರು. ಟಿಆರ್‌ಎಸ್ ಸರಕಾರ ಕೂಡ ಜನ-ವಿರೋಧಿ ನೀತಿಗಳನ್ನೇ ಅನುಸರಿಸುತ್ತದೆ, ಅವುಗಳ ವಿರುದ್ಧ ತೀವ್ರ ಹೋರಾಟ ನಡೆಯುತ್ತಿದೆ ಎಂದೂ ಅವರು ಹೇಳಿದರು.

ಎಸ್‌ಎಫ್‌ಐ ಕಾರ್ಯಕರ್ತ ಧೀರಜ್ ರಾಜೇಂದ್ರನ್ ಭೀಕರ ಕೊಲೆ-ರಾಷ್ಟ್ರವ್ಯಾಪಿ ಪ್ರತಿಭಟನೆ

ಕೇರಳದ ಇಡುಕ್ಕಿಯಲ್ಲಿ ಜನವರಿ 10 ರಂದು ಸರ್ಕಾರೀ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಸ್‌ಎಫ್‌ಐ ಸಕ್ರಿಯ ಕಾರ್ಯಕರ್ತ 21 ವರ್ಷದ ಧೀರಜ್ ರಾಜೇಂದ್ರನ್ ರನ್ನು ಹೊರಗಿನಿಂದ ಬಂದ ಯುವ ಕಾಂಗ್ರೆಸ್-ಕೆಎಸ್‌ಯು ಮಂದಿ ಅಮಾನುಷವಾಗಿ ಇರಿದು ಕೊಂದಿದ್ದಾರೆ ಎಂದು ಎಸ್‌ಎಫ್‌ಐ ಕೇಂದ್ರ ಕಾರ್ಯದರ್ಶಿ ಮಂಡಳಿ ಬಲವಾಗಿ ಖಂಡಿಸಿದೆ.

ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಯ ನಂತರ ನಡೆದಿರುವ ಈ ಕಗ್ಗೊಲೆ ಪೂರ್ವಯೋಜಿತವಾಗಿತ್ತು ಎಂದು ಪೊಲೀಸರೂ ಹೇಳಿದ್ದಾರೆ. ಇದನ್ನು ರಾಜ್ಯದಲ್ಲಿ ವಿದ್ಯಾರ್ಥಿ ಸಮುದಾಯದ ನಡುವೆ ಕಾಂಗ್ರೆಸಿನ ಪ್ರಭಾವ ಇಳಿಯುತ್ತಿರುವ ಹಿನ್ನೆಲೆಯಲ್ಲಿ ಕಾಲೇಜು ಕ್ಯಾಂಪಸ್ಸುಗಳಲ್ಲಿ ಭೀತಿ ಹರಡುವ ಯೋಜನೆಯ ಭಾಗವೆಂದು ಕಾಣಲಾಗುತ್ತಿದೆ. ಕ್ರಿಮಿನಲ್ ಹಿನ್ನೆಲೆಯ ಕೆ. ಸುಧಾಕರನ್ ರಾಜ್ಯದ ಕಾಂಗ್ರೆಸ್ ಅಧ್ಯಕ್ಷರಾದ ಮೇಲೆ ಇಂತಹ ಕಾಂಗ್ರೆಸ್ ಗೂಂಡಾಧಾಳಿಗಳು ಹೆಚ್ಚಿವೆ ಎಂದಿರುವ ಎಸ್‌ಎಫ್‌ಐ, ಕೇಂದ್ರ ಕಾರ್ಯದರ್ಶಿ ಮಂಡಳಿ ವಿದ್ಯಾರ್ಥಿ ಕಾರ್ಯಕರ್ತರನ್ನು ಹತ್ಯೆ ಮಾಡಲು ಕ್ಯಾಂಪಸ್ಸುಗಳೊಳಗೆ ಕ್ರಿಮಿನಲ್‌ಗಳನ್ನು ತಂದು ಭಯೋತ್ಪಾದನೆ ನಡೆಸುವ ಈ ಪ್ರಯತ್ನ ಕಾಂಗ್ರೆಸಿನ ಮಾಫಿಯ ಸಂಸ್ಕೃತಿಯನ್ನು ಬಯಲಿಗೆ ತಂದಿದೆ ಎಂದು ಖಂಡಿಸಿದೆ, ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳು ಕಾಂಗ್ರೆಸ್ ಮುಖಂಡತ್ವದ ಇಂತಹ ಹತ್ಯಾ ರಾಜಕೀಯವನ್ನು ಖಂಡಿಸಬೇಕು, ಎಂದು ಕರೆ ನೀಡಿರುವ ಅದು ಕ್ಯಾಂಪಸ್ಸುಗಳನ್ನು ಹತ್ಯಾತಾಣಗಳಾಗಿ ಮಾಡಬಯಸುವ ಕೊಲೆಗಡುಕರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದೆ.

ಜನವರಿ 11 ರಂದು ಕೇರಳದಲ್ಲಿ ಮತ್ತು ದೇಶದ ಇತರೆಡೆಗಳಲ್ಲೂ ಈ ಹತ್ಯೆಯ ವಿರುದ್ಧ ವ್ಯಾಪಕ ಪ್ರತಿಭಟನೆ ನಡೆದಿದೆ.

"ಪ್ರಧಾನಿಗಳ ಘನತೆಗೆ ತಕ್ಕುದಲ್ಲದ ಹೇಳಿಕೆ: ಬೆದರಿಕೆ ಇರುವುದು ರೈತರ ಜೀವಗಳಿಗೆ"-ಸಂಯುಕ್ತ ಕಿಸಾನ್ ಮೋರ್ಚಾ

ವಿಫಲವಾದ ಒಂದು ರ್‍ಯಾಲಿಗಾಗಿ ಪ್ರಧಾನ ಮಂತ್ರಿ ಮೋದಿಯವರು ಪಂಜಾಬನ್ನು ಮತ್ತು ರೈತರನ್ನು ದೂರುತ್ತಿದ್ದಾರೆ. ಅಜಯ್ ಮಿಶ್ರಾರಂತಹ ಮಂತ್ರಿಗಳು ಆರಾಮವಾಗಿ ತಿರುಗಾಡುತ್ತಿರುವಾಗ ನಿಜವಾದ ಬೆದರಿಕೆ ಇರುವುದು ರೈತರ ಜೀವಗಳಿಗೆ, ಆದರೆ "ಹೇಗೋ ಜೀವ ಉಳಿಸಿಕೊಂಡು ಬಂದೆ" ಎಂದು ಪ್ರಧಾನಿಗಳು ಹೇಳಿದ್ದಾರೆ. ಅವರಿಂದ ಇಂತಹ ಬೇಜವಾಬ್ದಾರಿ ಹೇಳಿಕೆ, ಕನಿಷ್ಟ ಅವರ ಸ್ಥಾನದ ಘನತೆಯ ದೃಷ್ಟಿಯಿಂದಲಾದರೂ ಬರಬಾರದಿತ್ತು ಎಂದು ಸಂಯುಕ್ತ ಕಿಸಾನ್‌ಮೋರ್ಚಾ ಹೇಳಿದೆ.

ಪ್ರಧಾನಿಗಳ ಪಂಜಾಬ್ ಭೇಟಿಯ ಬಗ್ಗೆ ಪ್ರಕಟಿಸಿದಾಗ ಸಂಯುಕ್ತ ಕಿಸಾನ್ ಮೋರ್ಚಾದ ಹತ್ತು ಸಂಘಟನೆಗಳು ಸಾಂಕೇತಿಕ ಪ್ರತಿಭಟನೆಗಳನ್ನು ಸಂಯೋಜಿಸಿದವು. ಅಜಯ್ ಮಿಶ್ರ ಬಂಧನ ಸೇರಿದಂತೆ ರೈತರು ತಮ್ಮ ಬೇಡಿಕೆಗಳನ್ನು ಎತ್ತಿದರು. ಪ್ರಧಾನಿಗಳನ್ನು ಅಡ್ಡಗಟ್ಟುವ ಅಥವ ಅವರ ರ್‍ಯಾಲಿಗೆ ಅಡ್ಡಿಯುಂಟು ಮಾಡುವ ಯೋಜನೆಯೇನೂ ಇರಲಿಲ್ಲ.





ರೈತರು ಈ ಮೊದಲೇ ಯೋಜಿಸಿದಂತೆ ಫಿರೋಜ್‌ಪುರ್ ಜಿಲ್ಲೆಯತ್ತ ಹೊರಟಿದ್ದಾಗ ಪೋಲೀಸರು ಅವರನ್ನು ತಡೆದರು. ಪ್ರತಿಭಟನಾಕಾರರು ಆಗ ಅಲ್ಲೇ ರಸ್ತೆಯಲ್ಲಿ ಕೂತರು. ಇದರಿಂದಾಗಿ ಪ್ಯಾರಾನ ಮೇಲ್ಸೇತುವೆ ಸೇರಿದಂತೆ ಆ ರಸ್ತೆಯಲ್ಲಿ ತಡೆಯುಂಟಾಯ್ತು. ಆದರೆ ಪ್ರತಿಭಟನಾಕಾರರಿಗೆ ಪ್ರಧಾನ ಮಂತ್ರಿಗಳು ಮತ್ತು ಅವರ ಭದ್ರತಾ ತಂಡ ಪ್ಯಾರಾನಾ ಮೇಲ್ಸೇತುವೆಯ ಮೂಲಕ ಹಾದು ಹೋಗುತ್ತಾರೆಂಬ ಯಾವ ಮಾಹಿತಿಯೂ ಇರಲಿಲ್ಲ. ಅಲ್ಲದೆ ರೈತರು ಪ್ರಧಾನಿಗಳ ಮೋಟಾರುಸಾಲಿನತ್ತ ಚಲಿಸಲೇ ಇಲ್ಲ ಎಂದಿರುವ ಸಂಯುಕ್ತ ಕಿಸಾನ್ ಮೋರ್ಚಾ, ಪ್ರಧಾನ ಮಂತ್ರಿಗಳ ಜೀವಕ್ಕೆ ಬೆದರಿಕೆಯಿತ್ತು ಎಂಬುದು ಒಂದು ಹುಸಿ ದಾವೆ ಎಂದಿದೆ.

ವಾಸ್ತವವಾಗಿ ಪ್ರಧಾನಿಗಳ ಮೋಟಾರು ಸಾಲಿನತ್ತ ಸಾಗುತ್ತಿದ್ದವರು ಬಿಜೆಪಿಯ ಬಾವುಟಗಳನ್ನು ಹಿಡಿದಿದ್ದರು, ಮೋದಿ ಜಿಂದಾಬಾದ್ ಎಂದು ಕೂಗುತ್ತಿದ್ದರು ಎಂದು ತೋರಿಸುವ ವೀಡಿಯೋ ಹರಿದಾಡುತ್ತಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಸಂಪಾದಕೀಯ

ಚಂಪಾ: ರಾಜಿ ಇಲ್ಲದ ಬರಹಗಾರ, ರಾಜಿ ಇಲ್ಲದ ಹೋರಾಟಗಾರ

ಕಾವ್ಯವನ್ನು ಖಡ್ಗವಾಗಿಸಿದ ಅಪರೂಪದ ಕನ್ನಡ ಬರಹಗಾರರಲ್ಲಿ ಪ್ರಮುಖರಾದ ಚಂದ್ರಶೇಖರ್ ಪಾಟೀಲ್ ನಮ್ಮನ್ನು ಅಗಲಿದ್ದಾರೆ. ಯಾವ ಕಾಲಘಟ್ಟದಲ್ಲಿ ಅವರಂತಹ ದಿಟ್ಟ ಜನಪರ ಬರಹಗಾರರ ಅಗತ್ಯವಿತ್ತೋ ಅಂತಹ ಸಮಯದಲ್ಲಿ ಅವರು ಕಣ್ಮರೆಯಾಗಿರುವುದು ನಾಡಿಗಾದ ಬಾರೀ ದೊಡ್ಡ ನಷ್ಟವಾಗಿದೆ. ಇಂದಿರಾಗಾಂಧಿಯವರ ಸರ್ವಾಧಿಕಾರವನ್ನು ಅವರು ತಮ್ಮ ಕವನಗಳಲ್ಲಿ ಕಟುವಾಗಿ ಟೀಕಿಸಿದ್ದರು ಮತ್ತು ಅದಕ್ಕಾಗಿ ಜೈಲಿಗೂ ಹೋಗಿದ್ದರು. ದೇಶದಲ್ಲಿ ಇಂದು ಮತ್ತೆ ಭಯಾನಕವಾದ ಸರ್ವಾಧಿಕಾರ ತಲೆ ಎತ್ತುತ್ತಿದೆ. ಸಾಂವಿಧಾನಿಕ ಹಕ್ಕುಗಳಿಗೆ ಅಪಾಯದ ಲಕ್ಷಣಗಳು ಕಾಣತೊಡಗಿವೆ. ಬರಹಗಾರರು, ಸಾಹಿತಿಗಳು ಮೌನಕ್ಕೆ ಜಾರುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳು ಆಳುವವರ ಯಜಮಾನಿಕೆಗೆ ತಲೆ ಹಾಕುತ್ತಿದ್ದಾರೆ. ಪ್ರಶ್ನೆ ಮಾಡುವವರನ್ನು ಜೈಲಿಗಟ್ಟುತ್ತಿದ್ದಾರೆ. ನಾಡಿಗೆ ನಾಡೇ ಬಿಕೋ ಎನ್ನುವಂತೆ ಭಾಸವಾಗುತ್ತದೆ. ಇಂತಹ ಸಮಯದಲ್ಲಿ 'ಚಂಪಾ' ರವರ ನಿರ್ಗಮನ ಒಪ್ಪಲಾಗದ ಆಘಾತ.

ಪ್ರೊಫೆಸರ್ ಚಂದ್ರಶೇಖರ ಪಾಟೀಲ್ ಒಬ್ಬ ಲೋಹಿಯಾವಾದಿ. ಮಾರ್ಕ್ಸ್‌ವಾದ ಮತ್ತು ಲೋಹಿಯಾವಾದದ ನಡುವೆ ಗಂಭೀರ ಚರ್ಚೆ ನಡೆಯುತ್ತಿದ್ದ ಕಾಲವದು. ಪ್ರೊ. ಚಂಪಾ ತಮ್ಮ ನಿಲುಮೆಯನ್ನು ಎಂದೂ ಬದಲಾಯಿಸುತ್ತಿರಲಿಲ್ಲ. ಅವರ ಜತೆಯಲ್ಲಿ ಬಿಟ್ಟು ಬಿಡದ ಚರ್ಚೆಯಲ್ಲಿ ತೊಡಗುವವರು ಮಾರ್ಕ್ಸ್‌ವಾದದ ವಿದ್ಯಾರ್ಥಿಗಳು, ವಿ.ಎನ್. ಹಳಕಟ್ಟೆ, ಸಿದ್ದನಗೌಡ ಪಾಟೀಲ್, ಯಡೆಯೂರು ಮಹಾಬಲ ಮೊದಲಾದವರು ಎರಡೂ ವಿಚಾರಧಾರೆಯ ಈ ಎರಡೂ ತಂಡಗಳು ಆಳವಾದ ಅಧ್ಯಯನದೊಂದಿಗೆ ವಾದ ವಿವಾದಗಳಲ್ಲಿ ತೊಡಗುತ್ತಿದ್ದರು. ಯಾರೊಬ್ಬರು ಸೋಲನ್ನೊಪ್ಪುತ್ತಿರಲಿಲ್ಲ.

ಸಾಂಧರ್ಭಿಕ ವಾದ ಪ್ರತಿಪಾದಗಳು ನಡೆಯುತ್ತಿದ್ದರೂ ಎರಡೂ ಪಂಗಡಗಳ ನಡುವೆ ದ್ವೇಷ ಇರುತ್ತಿರಲಿಲ್ಲ. ಪ್ರೊ. ಚಂಪಾ ಏರ್ಪಡಿಸುತ್ತಿದ್ದ ಎಲ್ಲ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಈ ಯುವ ಕಮ್ಯೂನಿಸ್ಟರು ಸಂಪೂರ್ಣ ಸಹಕಾರ ನೀಡುತ್ತಿದ್ದರು. ಡಾ. ದೇಶಪಾಂಡೆ, ಪ್ರೊ. ಕೃಷ್ಣಮೂರ್ತಿ ಮೊದಲಾದವರ ಮಾರ್ಗದರ್ಶನ ಈ ಯುವಕರಿಗೆ ಸಿಗುತಿತು. ತಾತ್ವಿಕ ಭಿನ್ನಾಭಿಪ್ರಾಯಗಳೇನೇ ಇರಲಿ, ಎಲ್ಲ ಜನಪರ ಚಿಂತನೆ ಮತ್ತು ಹೋರಾಟಗಳಲ್ಲಿ ಅವರು ಒಟ್ಟಿಗೆ ಇರುತ್ತಿದ್ದರು. ಚಂಪಾ ಅವರ ಮಾತುಗಳು, ಅವರ ಸಾಹಿತ್ಯ ಕೃತಿಗಳು ಅಂದಿನ ಧಾರವಾಡದ ವಿದ್ಯಾರ್ಥಿ ಸಮುದಾಯದ ಮೇಲೆ ಗಾಡವಾದ ಪ್ರಭಾವ ಬೀರುತ್ತಿರುತಿತ್ತು. ಪರಸ್ಪರ ಅಭಿಪ್ರಾಯಗಳು ಎಷ್ಟೇ ಭಿನ್ನವಾಗಿದ್ದರೂ ಅವರ ನಡುವೆ ಪರಸ್ಪರ ಗೌರವ ಇರುತಿತ್ತು.

ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರ ಬಗ್ಗೆ ಅವರಿಗೆ ಅಪಾರ ಗೌರವವಿತ್ತು. ಮೊನಚಾದ ಭಾಷೆಯಲ್ಲಿ ಅವರು ಜಾತಿ ಪದ್ಧತಿಯನ್ನು, ಸಾಮಾಜಿಕ ಅಸ್ಪೃಶ್ಯತೆಯನ್ನು ಖಂಡಿಸುತ್ತಿದ್ದರು. ಹೀಗಾಗಿ ದಲಿತ ವಿದ್ಯಾರ್ಥಿಗಳ ದೊಡ್ಡ ಸಮೂಹ ಅವರನ್ನು ಬೆಂಬಲಿಸುತಿತ್ತು. ತಾನೊಂದು ಮೇಲ್ಜಾತಿಯಲ್ಲಿ ಹುಟ್ಟಿದರೂ ಅವರು ಮೇಲ್ಜಾತಿಯವರ ಢೊಂಗಿತನವನ್ನು ಖಂಡಿಸಲು ಹಿಂಜರಿಯುತ್ತಿರಲಿಲ್ಲ. ಅವರ ಸಾವಿನಿಂದ ನಾಡಿನ ಅಮೂಲ್ಯ ದನಿಯೊಂದು ಶಾಶ್ವತವಾಗಿ ಮೌನವಾಗಿದೆ. ಅವರ ಎಲ್ಲ ವಿಚಾರಗಳನ್ನು ಎಲ್ಲರೂ ಒಪ್ಪದಿರಬಹುದು. ಅವರು ತಮ್ಮ ಅಭಿಪ್ರಾಯವನ್ನು ಯಾರ ಮೇಲೂ ಹೇರುತ್ತಿರಲಿಲ್ಲ.

ಇನ್ನೊಂದು ಸರ್ವಾಧಿಕಾರ ತಲೆಎತ್ತುವ ಮುನ್ನ ನಾವು ಅದನ್ನು ಎದುರಿಸಲು ಸಜ್ಜಾಗಬೇಕಾಗಿದೆ. ಪಾಟೀಲರ ವೈಚಾರಿಕ ಸಂಘರ್ಷದ ದಾರಿಯನ್ನು ನಾವು ಉಳಿಸಿಕೊಳ್ಳಬೇಕಾಗಿದೆ.

ಜಲ ವಿವಾದವನ್ನು ಬಗೆಹರಿಸಲು ಎರಡು ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆಸಲು ಪ್ರಧಾನಿ ಮುಂದಾಗಬೇಕು–ಸಿಪಿಐ(ಎಂ) ಆಗ್ರಹ

ಕರ್ನಾಟಕ ರಾಜ್ಯದ ಬೆಂಗಳೂರು ಹಾಗೂ ಹುಬ್ಬಳ್ಳಿ–ಧಾರವಾಡದ ಅವಳಿ ನಗರಗಳ ಕುಡಿಯುವ ನೀರಿಗಾಗಿ ಮತ್ತು ವಿದ್ಯುತ್ ಉತ್ಪಾದನೆಯ ಸಮಸ್ಯೆಯ ಪರಿಹಾರಕ್ಕಾಗಿ ಕರ್ನಾಟಕ ಸರಕಾರ ಕಳಸಾ–ಬಂಡೋರಿ ಹಾಗೂ ಮೇಕೆದಾಟು ಯೋಜನೆ ರೂಪಿಸಿರುವುದೇನು ಸರಿಯೇ, ಆದರೇ, ಆ ಯೋಜನೆಗಳ ಜಾರಿಗೆ ಸಂಬಂಧಿಸಿ ಮಹದಾಯಿ ಹಾಗೂ ಕಾವೇರಿ ನದಿ ಪ್ರದೇಶದ ರಾಜ್ಯಗಳು ಎತ್ತಿರುವ ತಕರಾರುಗಳಿಗೆ ಪರಿಹಾರ ಹುಡುಕದೇ ಅವುಗಳು ಜಾರಿಯಾಗುವ ಸಂಭವಗಳಿಲ್ಲ. ಅಂತಹ ಪರಿಹಾರವೂ ಬೇಗನೆ ದೊರೆಯಬೇಕೆಂದರೆ ಅನ್ಯ ಕ್ರಮಗಳಿಗಿಂತ ರಾಜಕೀಯ ಪರಿಹಾರದ ಕ್ರಮಕ್ಕೆ ಮುಂದಾಗುವುದು ಸೂಕ್ತವಾಗಿದೆ. ಆದ್ದರಿಂದ, ತಕ್ಷಣವೇ ಪ್ರಧಾನ ಮಂತ್ರಿಗಳು, ಮಧ್ಯ ಪ್ರವೇಶಿಸಿ ಮಹದಾಯಿ ಹಾಗೂ ಕಾವೇರಿ ನೀರು ಬಳಕೆಯ ವಿಚಾರದಲ್ಲಿ ಸಂಬಂದಿಸಿದ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಡೆಸಿ ಈ ಸಮಸ್ಯೆಯ ಇತ್ಯರ್ಥಕ್ಕೆ ರಾಜಕೀಯ ಪರಿಹಾರದ ಕ್ರಮವಹಿಸಲು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ), ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸಿದೆ.

ಹೇಳಿಕೆಯನ್ನು ಬಿಡುಗಡೆಗೊಳಿಸಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಅವರು, ಒಕ್ಕೂಟ ಸರಕಾರ ಈ ಕುರಿತಂತೆ ಕ್ರಮವಹಿಸದೇ ಇರುವುದರಿಂದ ಜಲವಿವಾದಗಳು ದೀರ್ಘ ಕಾಲ ವಿವಾದಗಳಾಗಿಯೇ ಉಳಿಯುವಂತಾಗಿದೆ. ಈ ಕುರಿತಂತೆ ಉದಾಸೀನ ಸಲ್ಲದಾಗಿದೆಯೆಂದು ಸಿಪಿಐ(ಎಂ) ಒಕ್ಕೂಟ ಸರಕಾರದ ಕ್ರಮವನ್ನು ಖಂಡಿಸುತ್ತದೆ ಎಂದಿದ್ದಾರೆ.

ಅಂತರರಾಜ್ಯ ವಿವಾದಗಳು ಉದ್ಭವಿಸಿದ ಕೂಡಲೇ ಅದನ್ನು ವಿಳಂಬವಿಲ್ಲದೆ ಸಮ್ಮತ ಪರಿಹಾರ ಕಂಡುಕೊಳ್ಳಲು ಸರ್ವ ಪ್ರಯತ್ನ ಮಾಡುವುದು, ಪರಸ್ಪರ ದ್ವೇಷ ಬೆಳೆಯದಂತೆ ನೋಡಿಕೊಳ್ಳುವುದು ಒಕ್ಕೂಟ ಸರ್ಕಾರದ ಹೊಣೆಗಾರಿಕೆಯಾಗಿದೆ. ಕರ್ನಾಟಕ ರಾಜ್ಯ ಸರಕಾರವೂ ಈ ದಿಶೆಯಲ್ಲಿ ಒಕ್ಕೂಟ ಸರಕಾರದ ಮೇಲೆ ಅಗತ್ಯ ಒತ್ತಡವನ್ನು ಹಾಕಬೇಕು, ತಾನಾಗಿಯೇ ಪರಿಹಾರ ಸಿಗಲಿ ಎಂದು ಕಾದು ಕುಳಿತುಕೊಳ್ಳುವ ನೀತಿಯು, ಜನವಿರೋಧಿ ನೀತಿಯಾಗುತ್ತದೆ. ವಿವಾದಗಳನ್ನು ಸ್ವಾರ್ಥದ ರಾಜಕೀಯಕ್ಕೆ ಬಳಸಿಕೊಳ್ಳುವ ದುರುದ್ದೇಶದಿಂದ ಅದನ್ನು ಬೆಳೆಯಬಿಡಲಾಗುತ್ತದೆ ಎಂದು ಸಿಪಿಐ(ಎಂ) ಟೀಕಿಸಿದೆ.

ಇಂತಹ ಉದಾಸೀನ ಹಾಗೂ ಜನ ವಿರೋಧಿ ನಿಲುಮೆಗಳು, ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳ ಭಾಗವಾಗಿವೆ ಎಂದಿದೆ. ಎಲ್ಲ ಸಾರ್ವಜನಿಕ ರಂಗದ ಕುಡಿಯುವ ಹಾಗೂ ನೀರಾವರಿ ಯೋಜನೆಗಳನ್ನು ಮತ್ತು ಸಾರ್ವಜನಿಕ ರಂಗದ ವಿದ್ಯುತ್ ಉತ್ಪಾದನೆಯನ್ನು ಖಾಸಗೀಕರಣಕ್ಕೆ ಒಳಪಡಿಸುವ ದುರುದ್ದೇಶ ಹೊಂದಿರುವುದರಿಂದ, ಇಂತಹ ಸಾರ್ವಜನಿಕ ರಂಗದ ಕೆಲಸಗಳು ನೆನೆಗುದಿಗೆ ಬೀಳುವಂತಾಗಿವೆ ಎಂದು ಸಿಪಿಐ(ಎಂ) ವಿವರಿಸಿದೆ. ಇಂತಹ ಖಾಸಗೀಕರಣದ ಯೋಚನೆ/ಯೋಜನೆಗಳನ್ನು ಒಕ್ಕೂಟ ಹಾಗು ರಾಜ್ಯ ಸರಕಾರಗಳು ಕೈಬಿಟ್ಟು ಸಾರ್ವಜನಿಕ ರಂಗದ ಯೋಜನೆಗಳು ರೂಪುಗೊಳ್ಳಲು ಅಗತ್ಯ ರಾಜಕೀಯ ಪರಿಹಾರ ಹುಡುಕುವಂತೆ ಒತ್ತಾಯಿಸಿದೆ.

ಸರಕಾರಗಳ ಇಂತಹ ಜನ ವಿರೋದಿ ನಿಲುಮೆಗಳಿಂದಾಗಿ ಕಳಸಾ– ಬಂಡೋರಿ ನಾಲಾ ಹಾಗೂ ಮೇಕೆದಾಟು ಯೋಜನೆಗಳು ದಶಕಗಳಿಂದ ನೆನೆಗುದಿಗೆ ಬೀಳುವಂತಾಗಿವೆ.ಇದರಿಂದಾಗಿ ಹಲವು ದಶಕಗಟ್ಟಲೆ ಕುಡಿವ ನೀರು ಇಲ್ಲದೆ ಜನರು ಒದ್ದಾಡಿ ಸಂಕಟಪಡುವಂತಾದರೇ. ನೀರಾವರಿ, ವಿದ್ಯುತ್‌ಗಳ ಮೂಲಕ ದೇಶದ ಕೃಷಿ, ಕೈಗಾರಿಕೆಯ ಬೆಳವಣಿಗೆಗೆ ನೆರವಾಗಬಹುದಾದ ರಾಷ್ಟ್ರೀಯ ಸಂಪತ್ತು ವ್ಯರ್ಥವಾಗುತ್ತದೆ.

ಇವುಗಳ ಕುರಿತಂತೆ ಮಹದಾಯಿ ವಿಚಾರದಲ್ಲಿ ಮಹಾರಾಷ್ಟ್ರ ಹಾಗೂ ಗೋವಾ ಸರಕಾರಗಳ ಜೊತೆ ಮತ್ತು ಮೇಕೆದಾಟು ವಿಚಾರದಲ್ಲಿ ತಮಿಳ್ನಾಡು ರಾಜ್ಯದ ಜೊತೆಯಲ್ಲಿ ಅವರಿಗಿರುವ ಆತಂಕಗಳಿಗೆ ಸಂಬಂದಿಸಿ ಸೂಕ್ತ ಪರಿಹಾರಗಳನ್ನು ಕಂಡು ಕೊಳ್ಳಲು ಒಕ್ಕೂಟ ಸರಕಾರದ ನೇತೃತ್ವದಲ್ಲಿ ನಡೆಸಲಾಗುವ ಈ ಜಂಟಿ ಸಭೆಗಳು ಅಗತ್ಯ ಕ್ರಮವಹಿಸದೇ, ರಾಜ್ಯದ ನೀರಿನ ಮತ್ತು ವಿದ್ಯುತ್ ಸಮಸ್ಯೆಗಳಿಗೆ ನೈಜ ಪರಿಹಾರವಿಲ್ಲವಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಕರ್ನಾಟಕದ ಎಲ್ಲ ಸಂಸದರು ಪಕ್ಷ ಭೇದ ಮರೆತು ಇವುಗಳ ಇತ್ಯರ್ಥಕ್ಕೆ ಒಕ್ಕೂಟ ಸರಕಾರ ಮತ್ತು ಪ್ರಧಾನ ಮಂತ್ರಿಗಳು ಮಧ್ಯ ಪ್ರವೇಶಿಸುವಂತೆ ಒತ್ತಾಯಿಸಬೇಕೆಂದು ಸಿಪಿಐ(ಎಂ) ಕರೆ ನೀಡಿದೆ.

ಹಿರಿಯ ಸಾಹಿತಿ ಪ್ರೊ. ಚಂದ್ರಶೇಖರ ಪಾಟೀಲ ರ ನಿಧನಕ್ಕೆ ಸಿಪಿಐ(ಎಂ) ಶ್ರದ್ಧಾಂಜಲಿ

ನಾಡಿನ ಹಿರಿಯ ಸಾಹಿತಿ, ಸಮಾಜವಾದಿ ಚಿಂತಕ ಹಾಗೂ ಸಾಹಿತ್ಯಿಕ ಹೋರಾಟಗಾರ ಪ್ರೊ. ಚಂದ್ರಶೇಖರ್ ಪಾಟೀಲ್ (ಚಂಪಾ–82) ಅವರ ನಿಧನಕ್ಕೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಯು ಹೃದಯಾಂತರಾಳದ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ.

ಕೋಮುವಾದ–ಜಾತಿವಾದ ಅಂಧಶ್ರದ್ಧೆ ಹಾಗೂ ಬೇರೆಲ್ಲ ಪ್ರತಿಗಾಮಿ ಶಕ್ತಿಗಳ ವಿರುದ್ಧ ದಿಟ್ಟತನದಲ್ಲಿ ಪರಿಣಾಮಕಾರಿಯಾಗಿ ಧ್ವನಿಯೆತ್ತಿದ ನಾಡಿನ ಸಾಕ್ಷಿಪ್ರಜ್ಞೆ ಪ್ರೊ ಚಂದ್ರಶೇಖರ ಪಾಟೀಲ್ ಅವರ ನಿಧನ ನಾಡಿಗಾದ ಅಪಾರ ನಷ್ಟ ಎಂದು ಸಿಪಿಐ(ಎಂ) ಕಂಬನಿ ಮಿಡಿದಿದೆ. ಅವರ ನಿಧನದಿಂದಾಗಿ ಸಿಪಿಐ(ಎಂ) ಮಾತ್ರವಲ್ಲ ಎಲ್ಲಾ ಪ್ರಗತಿಪರ ಜನತೆಯು ಒಬ್ಬ ನೆಚ್ಚಿನ ಗೆಳೆಯನನ್ನು ಕಳೆದುಕೊಂಡಂತಾಗಿದೆ.

ಚಂಪಾರವರು ನವ್ಯಸಾಹಿತ್ಯದ ಪ್ರಕಾರದಿಂದ ತೊಡಗಿಕೊಂಡು ನವ್ಯ ಸಾಹಿತ್ಯದ ಜನವಿಮುಖತೆಯನ್ನು ವಿರೋಧಿಸಿ ನಂತರ ಬಂಡಾಯ ಸಾಹಿತ್ಯದ ಚಳುವಳಿಯ ಅತ್ಯಂತ ಪ್ರಮುಖ ನಾಯಕರಾಗಿ ಒಂದು ಆಧಾರ ಸ್ಥಂಭವಾದರು. ಪ್ರಜಾಪ್ರಭುತ್ವದ ಪ್ರಬಲ ಸಮರ್ಥಕರಾಗಿದ್ದ ಅವರು ಇಂದಿರಾಗಾಂಧಿಯವರು ಹೇರಿದ ಕರಾಳ ತುರ್ತು ಪರಿಸ್ಥಿತಿಯ ವಿರುದ್ಧ ಸಿಡಿದೆದ್ದು ಹಲವು ವರ್ಷಗಳ ಸೆರೆಮನೆ ವಾಸವನ್ನು ಅನುಭವಿಸಿದರು. ಅವರ ಹರಿತವಾದ, ವ್ಯಂಗ್ಯ ಶೈಲಿಯ ನಿರ್ಭೀತ ಬರಹಗಳ ಮೂಲಕ ಪ್ರತಿಗಾಮಿಗಳತ್ತ ಚಾಟಿ ಬೀಸಿ ಜನತೆಯನ್ನು ಎಚ್ಚರಿಸುತ್ತಿದ್ದುದು ವಿಶಿಷ್ಟವಾಗಿತ್ತು. ಹೀಗಾಗಿ ನಾಲ್ಕು ದಶಕಗಳಿಗೂ ಮೀರಿ ಅವರ ಸೃಜನಶೀಲ ಸಾಹಿತ್ಯಿಕ ಕೃತಿಗಳು, ನಾಟಕ, ಕಾವ್ಯ, ವೈಚಾರಿಕ ಬರಹಗಳು, ಕಿರು ಟಿಪ್ಪಣಿ ಹೀಗೆ ಸಾಹಿತ್ಯದ ಹಲವು ಪ್ರಕಾರಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿ ಸಮಾನತೆ,

ಪುಟ 4 ಕ್ಕೆ

ಸಂಪುಟ–16 ಸಂಚಿಕೆ 2 ರ ಪತ್ರಿಕೆಯನ್ನು ಅನಿವಾರ್ಯ ಕಾರಣಗಳಿಗಾಗಿ ಪೋಸ್ಟ್ ಮುಖಾಂತರ ಕಳುಹಿಸಲು ಸಾಧ್ಯವಾಗಿಲ್ಲ.

ತಿದ್ದುಪಡಿ

ಸಂಪುಟ–16, ಸಂಚಿಕೆ 3 ರ ಮುಖಪುಟದಲ್ಲಿ ಚರ್ಚೆ 180 ನಿಮಿಷ ಎಂದಿದೆ ಅದು 480 ನಿಮಿಷ ಎಂದಾಗಬೇಕು.

ಇದಕ್ಕಾಗಿ ವಿಷಾಧಿಸುತ್ತೇವೆ.

–ಸಂ.

ಹಿರಿಯ ಸಾಹಿತಿ ಪ್ರೊ. ಚಂದ್ರಶೇಖರ ಪಾಟೀಲ ರ ನಿಧನಕ್ಕೆ ಸಿಪಿಐ(ಎಂ) ಶ್ರದ್ಧಾಂಜಲಿ.... ಪುಟ 3 ರಿಂದ

ಸೌಹಾರ್ದತೆ, ಸಾಮಾಜಿಕ ಬದಲಾವಣೆಯ ಆಶಯಗಳನ್ನು ಪ್ರತಿಪಾದಿಸಿದರು.

ಅವರ ಬರಹ, ಮಾತುಗಳ ಶೈಲಿ ಸಾಹಿತ್ಯಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ವಿಶಿಷ್ಟತೆಯೊಂದಿಗೆ ತನ್ನದೇ ಛಾಪು ಮೂಡಿಸಿದೆ. ಅವರ ಸಾಹಿತ್ಯ ಕೃತಿಗಳು ಹಾಗೂ ಸುಮಾರು ಐದು ದಶಕಗಳಿಂದಲೂ ಪ್ರಕಟವಾಗುತ್ತಿರುವ ಸಾಹಿತ್ಯಿಕ ಮಾಸಿಕ 'ಸಂಕ್ರಮಣ' ಪತ್ರಿಕೆ ಓದುಗರನ್ನು ವೈಚಾರಿಕವಾಗಿ ಬೆಳೆಸಿದವಲ್ಲದೇ, ಹಲವಾರು ಬರಹಗಾರರನ್ನು ನಾಡಿಗೆ ಪರಿಚಯಿಸಿದವು. ಕನ್ನಡನಾಡಿನಲ್ಲಿ ಬಂಡಾಯ ಸಾಹಿತ್ಯ ಚಳುವಳಿಯ ಪ್ರಮುಖ ರೂವಾರಿಗಳಲ್ಲಿ ಒಬ್ಬರಾಗಿ ಸಂಕ್ರಮಣ ಪತ್ರಿಕೆಯ ಮೂಲಕವೂ ಈ ಆಶಯಗಳಿಗೆ ಶ್ರಮಿಸಿದ್ದು ಉಲ್ಲೇಖನಾರ್ಹ.

ಪ್ರೊ. ಚಂಪಾ ರವರು ಸಾಹಿತ್ಯ ಮತ್ತು ಜನಚಳುವಳಿಗಳನ್ನು ಬೆಸೆದವರು. ಹಲವಾರು ಶ್ರಮಜೀವಿಗಳ, ರೈತರು, ಕಾರ್ಮಿಕರು, ಕೂಲಿಕಾರರು ಮತ್ತು ವಿದ್ಯಾರ್ಥಿ ಯುವಜನರು, ದಲಿತರು, ಮಹಿಳೆಯರ ಹೋರಾಟಗಳಲ್ಲಿ ಬೆರೆತು ಬೆಂಬಲಿಸಿದವರು. ಭಾಷೆ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಕಟಿಬದ್ಧರಾಗಿದ್ದರು.

ಕೋಮುವಾದ, ಮತೀಯ ಮೂಲಭೂತವಾದ, ಭಯೋತ್ಪಾದನೆ ಅಂತಹ ಶಕ್ತಿಗಳ ದಾಳಿಗಳನ್ನು ದಿಟ್ಟತನದಿಂದ ಬಯಲಿಗೆಳೆದು ಶಾಂತಿ–ಸಾಮರಸ್ಯ, ಕೋಮು ಸೌಹಾರ್ದತೆಗಾಗಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡವರು. ಕೋಮುವಾದಿಗಳ ಕೊಲೆ ಬೆದರಿಕೆಯನ್ನೂ ಲೆಕ್ಕಿಸಲಿಲ್ಲ.

2019 ಜನವರಿ 30 ರಂದು ಮಹಾತ್ಮಗಾಂಧಿ ಹುತಾತ್ಮರಾದ ದಿನದಂದು 'ಸೌಹಾರ್ದತೆಗಾಗಿ ಕರ್ನಾಟಕ' ದಿಂದ ಸಂಘಟಿಸಲಾದ ಲಕ್ಷಾಂತರ ಜನರು ಭಾಗವಹಿಸಿದ ಯಶಸ್ವಿ ಬೃಹತ್ ಮಾನವ ಸರಪಳಿ ಕಾರ್ಯಕ್ರಮ ಸಂಘಟಿಸುವಲ್ಲಿ ಮುಂಚೂಣಿಯಲ್ಲಿದ್ದುದನ್ನು ಸಿಪಿಐ(ಎಂ) ಸ್ಮರಿಸಿಕೊಂಡಿದೆ.

ಕಮ್ಯೂನಿಸ್ಟರ ಜೊತೆಗೆ ಕೆಲವು ಬಿನ್ನಾಭಿಪ್ರಾಯದೊಡನೆಯೂ ಒಟ್ಟಾಗಿ ಚಳುವಳಿ ಮಾಡಲು ಮೀನಾಮೇಷ ಎಣಿಸುತ್ತಿರಲಿಲ್ಲ ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ.

ಪ್ರೊ ಚಂಪಾರವರು ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಿಗಬೇಕೆಂದು ಹೋರಾಟವನ್ನು ನಡೆಸಿದವರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವಾಗ ಭಾಷೆ ಮತ್ತು ನಾಡಿನ ಹಿತಾಸಕ್ತಿಗಳಿಗೆ ಶ್ರಮಿಸಿದರು. ನಾಡಿನ ಸಾಹಿತ್ಯಿಕ, ಸಾಂಸ್ಕೃತಿಕ, ಭಾಷೆ, ಸಾಮಾಜಿಕ ಸ್ವಾಸ್ಥ್ಯದ ಸಂರಕ್ಷಣೆಗೆ ಮತ್ತು ಜನತೆಯ ಬದುಕಿನ ಬದಲಾವಣೆ ಹಾಗೂ ಸಮಾನತೆಗಾಗಿ ಪ್ರೊ. ಚಂಪಾ ರವರ ಕೊಡುಗೆಗಳನ್ನು ಗೌರವದಿಂದ ಸ್ಮರಿಸಿ ಕೊಂಡಿರುವ ಸಿಪಿಐ(ಎಂ) ಅಂತರಾಳದ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ.

ಅವರ ದುಃಖಿತಪ್ತ ಕುಟುಂಬಕ್ಕೆ, ಬಂಧು ಬಳಗ, ಹಿತೈಷಿಗಳು ದುಃಖ ಭರಿಸುವ ಶಕ್ತಿಯನ್ನು ಪಡೆಯಲಿ ಎಂದು ಸಂತಾಪವನ್ನು ತಿಳಿಸಿದೆ.



ಬಂಡಾಯ ಸಾಹಿತಿ, ಕವಿ, ನಾಟಕಕಾರ ಹಾಗೂ ಚಳವಳಿಯ ಒಡನಾಡಿ ಪ್ರೊ. ಚಂದ್ರಶೇಖರ ಪಾಟೀಲ ಅವರಿಗೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ರಾಜ್ಯ ಸಮಿತಿ ಮುಖಂಡರು ಚಂಪಾ ಅವರ ನಿವಾಸಕ್ಕೆ ತೆರಳಿ ಭಾವಪೂರ್ಣ ನಮನ ಸಲ್ಲಿಸಿದರು.

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೀನಾಕ್ಷಿ ಸುಂದರಂ, ಎಸ್. ವರಲಕ್ಷ್ಮಿ, ರಾಜ್ಯ ಸಮಿತಿ ಸದಸ್ಯರಾದ ಕೆ.ಎಸ್. ವಿಮಲ ಹಾಗೂ ಕೆ. ಮಹಾಂತೇಶ ಹಾಗೂ ಹಿರಿಯ ಸಂಗಾತಿ ಟಿ. ಸುರೇಂದ್ರರಾವ್ ಹಾಜರಿದ್ದು ರಾಜ್ಯ ದುಡಿಯುವ ಜನರ ಪರವಾಗಿ ಶ್ರದ್ಧಾಂಜಲಿ ಸಲ್ಲಿಸಿದರು.

ಮದುಮಗನ ವೇಷವನ್ನು ಕೋಮುದ್ವೇಷಕ್ಕೆ ಬಳಸುವ ಷಡ್ಯಂತ್ರ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಖಂಡನೆ

ಬಂಟ್ವಾಳ ತಾಲೂಕು ಸಾಲೆತ್ತೂರು ಸಮೀಪ ಮುಸ್ಲಿಮರ ಮದುವೆಯ 'ತಾಲ' ಎಂಬ ಸಂಭ್ರಮದಲ್ಲಿ ಮದುಮಗ ತಲೆಗೆ ಮುಟ್ಟಾಳೆ ಧರಿಸಿ, ಮುಖಕ್ಕೆ ಕಪ್ಪು ಮಸಿ ಹಚ್ಚಿ, ಕೋಲು ಹಿಡಿದು ವೇಷ ಧರಿಸಿದ ಸನ್ನಿವೇಶವನ್ನು 'ಕೊರಗಜ್ಜ' ದೈವಕ್ಕೆ ಮಾಡಿದ ಅಪಮಾನ ಎಂದು ನಿರೂಪಿಸಿ, ಕೋಮುದ್ವೇಷ ಹರಡಲು ಸಂಘಪರಿವಾರ ಮಾಡುತ್ತಿರುವ ಷಡ್ಯಂತ್ರವನ್ನು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಸಹ ಸಂಚಾಲಕ ಡಾ.ಕೃಷ್ಣಪ್ಪ ಕೊಂಚಾಡಿ ಖಂಡಿಸಿದ್ದಾರೆ.

ವರದಿ: ವಾ. ಉ.

ದಿನನಿತ್ಯ ಕೊರಗ ಸಮುದಾಯವನ್ನು ಅಮಾನವೀಯವಾಗಿ ನಡೆಸುತ್ತಿರುವ ದೌರ್ಜನ್ಯ ಘಟನೆಗಳು ನಡೆದರೂ ಯಾವುದೇ ಪ್ರತಿರೋಧ ತೋರದೆ ಸಂಘಪರಿವಾರ ಬೆಂಬಲಿಸುತ್ತದೆ. ಮುಟ್ಟಾಳೆ, ಕೋಲು– ಇವು ಮಾನವ ವಿಕಾಸದ ಪ್ರಥಮ ಹಂತದ ಪರಿಕರಗಳಾಗಿದ್ದು, ಅವು ಇಡೀ ಮಾನವ ಜನಾಂಗದ ಆಸ್ತಿಯಾಗಿವೆ. ಆದುದರಿಂದ ಅವುಗಳ ಬಗ್ಗೆ ಜಾತಿ, ಮತೀಯ ಬಣ್ಣ ಹಚ್ಚುವುದು ನಿಜವಾದ ಮೂಲನಿವಾಸಿ ಕೊರಗ ಸಮುದಾಯಕ್ಕೆ ಮಾಡುವ ಅನ್ಯಾಯ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ದ.ಕ.ಜಿಲ್ಲೆಯಲ್ಲಿದ್ವೇಷಹುಟ್ಟಿಸುವಹುನ್ನಾರಗಳನ್ನು ಅರಿತು, ವಿಫಲಗೊಳಿಸಬೇಕು, ಅಲ್ಲದೆ ಶಾಂತಿ ಸೌಹಾರ್ದ ಕಾಪಾಡಲು ಮುಂದಾಗಬೇಕು ಎಂದು ಡಾ.ಕೃಷ್ಣಪ್ಪ ಕೊಂಚಾಡಿ ಮನವಿ ಮಾಡಿದ್ದಾರೆ.

ಮದುಮಗ ಹಾಕಿದ ವೇಷ ದಸರಾ ವೇಳೆ ಈಗ ಹಾಕಬಾರದೆಂದು ನಿರ್ಬಂಧಿಸಿರುವ ಕೊರಗ ವೇಷದ ಹೋಲಿಕೆಯದ್ದಾಗಿದ್ದೇ ಹೊರತು, ಆರಾಧಿಸುವ ಕೊರಗಜ್ಜ ದೈವದ ಅಲಂಕೃತ ರೂಪೀ ವೇಷವಾಗಿರಲಿಲ್ಲ ಎಂದು ತಿಳಿದು ಬರುತ್ತದೆ.

ಬೈಂದೂರು ತಾಲೂಕು ಕಟ್ಟಡ ಕಾರ್ಮಿಕ ಪಿಂಚಣಿದಾರರ ಸಂಘ ಸ್ಥಾಪನೆ

ಅಖಿಲ ಭಾರತ ನಿರ್ಮಾಣ ಕಾರ್ಮಿಕರ ಫೆಡರೇಶನ್(CWFI) ಗೆ ಸಂಯೋಜಿಸಲ್ಪಟ್ಟ ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ(ರಿ), ಸಿಐಟಿಯು ಇದರ ನೇತೃತ್ವದಲ್ಲಿ ಬೈಂದೂರು ತಾಲೂಕು ಕಟ್ಟಡ ಕಾರ್ಮಿಕ ಪಿಂಚಣಿದಾರರ ಬೃಹತ್ ಸಮಾವೇಶ 13 ಜನವರಿ 2022 ರಂದು ಬೈಂದೂರು ಸಿಐಟಿಯು ಕಚೇರಿ ಸಭಾಂಗಣದಲ್ಲಿ ಯಶಸ್ವಿಯಾಗಿ ಜರಗಿತು. ಕಟ್ಟಡ ಕಾರ್ಮಿಕ ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಸೆಸ್ಸ್ ರೂಪದಲ್ಲಿ ಸಹಸ್ರಾರು ಕೋಟಿ ಹಣ ಸಂಗ್ರಹಿಸಿದೆ. ಕಾರ್ಮಿಕರ ಹಕ್ಕಿನ ಈ ಹಣದ ನೆರವಿನಿಂದ ಕಾಯಕ ಜೀವಿ ಕಟ್ಟಡ ಕಾರ್ಮಿಕರಿಗೆ ವೃದ್ಧಾಪ್ಯದಲ್ಲಿ ನಿವೃತ್ತಿ ವೇತನವನ್ನು ಕನಿಷ್ಟ ಮಾಸಿಕ ರೂಪಾಯಿ ಐದು ಸಾವಿರಕ್ಕೆ ಹೆಚ್ಚಿಸಲು ಕ್ರಮವಹಿಸಬೇಕು ಎಂದು ಸರಕಾರವನ್ನು ಒತ್ತಾಯಿಸಿದರು.

ಕಟ್ಟಡ ಕಾರ್ಮಿಕ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಗಣೇಶ ತೊಂಡೆಮಕ್ಕಿ, ಸಭೆಯನ್ನುದ್ದೇಶಿಸಿ ಮಾತನಾಡಿ, ಕಟ್ಟಡ ಕಾರ್ಮಿಕರು ನಿವೃತ್ತಿ ವೇತನ ಕೋರಿ ಸಲ್ಲಿಸಿದ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಬೇಕು, ಜೀವಿತ ಪ್ರಮಾಣಪತ್ರ ಇತ್ಯಾದಿ ನೆಪ ಹೇಳಿ ಮಂಜೂರಾತಿ ಆದೇಶಕ್ಕೆ ತಡೆ ಮಾಡುವುದು ಸಲ್ಲದು ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಬೈಂದೂರು ತಾಲೂಕು ಕಟ್ಟಡ ಕಾರ್ಮಿಕ ಪಿಂಚಣಿದಾರರ ಸಂಘ ರಚಿಸಲಾಯಿತು. ಹೆರಿಯ ಪೂಜಾರಿ ಕಂಭದಕೋಣೆ (ಅಧ್ಯಕ್ಷ), ಮುಡೂರ ಪೂಜಾರಿ ಬಿಜೂರು (ಕಾರ್ಯದರ್ಶಿ) ಯವರನ್ನೊಳಗೊಂಡ 16 ಮಂದಿಯ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. ನಾಗರತ್ನ ಪಡುವರಿ ಸ್ವಾಗತಿಸಿದರು, ರೊನಾಲ್ಡ್ ರಾಜೇಶ್ ಕ್ವಾಡ್ರಸ್ ವಂದಿಸಿದರು.



ಕಾರ್ಪೋರೇಟ್ ಕಂಪೆನಿಗಳ ಹಿತ ಕಾಯುವ ನರೇಂದ್ರ ಮೋದಿ ಸರಕಾರದಿಂದ ಕಾರ್ಮಿಕ ವರ್ಗ ಬೀದಿಪಾಲು – ಜೆ. ಬಾಲಕೃಷ್ಣ ಶೆಟ್ಟಿ

ಕಳೆದ 7 ವರ್ಷಗಳಿಂದ ದೇಶದ ಅಧಿಕಾರದ ಚುಕ್ಕಾಣಿ ಹಿಡಿದ ನರೇಂದ್ರ ಮೋದಿ ಸರಕಾರ ಹೆಜ್ಜೆ ಹೆಜ್ಜೆಗೂ ಕಾರ್ಪೋರೇಟ್ ಕಂಪನಿಗಳ ಹಿತಾಸಕ್ತಿಯನ್ನು ಕಾಪಾಡುವ ಮೂಲಕ ತನ್ನ ಋಣ ಸಂದಾಯ ಮಾಡುತ್ತಿದೆ. ಜನತೆಗೆ ಒಳ್ಳೆಯ ದಿನಗಳನ್ನು ತರುವುದಾಗಿ ಆಶ್ವಾಸನೆ ನೀಡಿದ ಇದೇ ಸರಕಾರ ಜನರ ಬದುಕುವ ಹಕ್ಕನ್ನೇ ಕಸಿದುಕೊಳ್ಳುತ್ತಿದೆ. ಮಾತ್ರವಲ್ಲದೆ ಕಾರ್ಮಿಕ ವರ್ಗದ ಕಾನೂನುಗಳನ್ನು ಮಾಲಕರ, ಬಂಡವಾಳಶಾಹಿಗಳ ಪರವಾಗಿ ತಿದ್ದುಪಡಿ ಮಾಡಿ ಮತ್ತೆ ಕಾರ್ಮಿಕ ವರ್ಗವನ್ನು ಜೀತದಾಳುಗಳನ್ನಾಗಿ ಪರಿವರ್ತಿಸುವ ಹುನ್ನಾರ ನಡೆಸುತ್ತಿದೆ. ಇಂತಹ ಕಾರ್ಮಿಕ ವಿರೋಧಿ ಸರಕಾರವನ್ನು ಕಿತ್ತೊಗೆಯುವವರೆಗೂ ದುಡಿಯುವ ವರ್ಗ ಒಂದು ಕ್ಷಣವೂ ವಿರಮಿಸಬಾರದು. ಐಕ್ಯತೆಯಿಂದ ಮುನ್ನುಗ್ಗಿ ಸಮರಶೀಲ ಹೋರಾಟದತ್ತ ದಾಪುಗಾಲನ್ನು ಇಡಬೇಕಾಗಿದೆ ಎಂದು ಸಿಐಟಿಯು ದ.ಕ. ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಸಿಐಟಿಯು ಮಂಗಳೂರು ನಗರ ಮಟ್ಟದ ಪ್ರಮುಖ ಕಾರ್ಯಕರ್ತರಿಗಾಗಿ ಆಯೋಜಿಸಲಾದ ಸಂಘಟನಾ ಕಾರ್ಯಾಗಾರವನ್ನು ಉದ್ಘಾಟಿಸುತ್ತಾ ಈ ಮಾತನ್ನು ಹೇಳಿದರು.


ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡಿ, ಕೇಂದ್ರದ ನರೇಂದ್ರ ಮೋದಿ ಸರಕಾರ ಕೊರೋನಾ ಹೆಸರಿನಲ್ಲಿ ದೇಶದ ಜನರನ್ನು ಭಯಭೀತಿಗೊಳಿಸಿದ್ದು ಮಾತ್ರವಲ್ಲದೆ ಕಾರ್ಮಿಕ ವಿರೋಧಿ ನೀತಿಗಳನ್ನು ಸಂಸತ್ತಿನಲ್ಲಿ ಅಂಗೀಕಾರ ಮಾಡಿ ದುಡಿಯುವ ವರ್ಗಕ್ಕೆ ಪಂಗನಾಮ ಹಾಕಿತು. ಈಗಾಗಲೇ ದೇಶದ ಜನತೆ ಕೇಂದ್ರ ಸರಕಾರದ ವಿರುದ್ಧ ತಿರುಗಿ ಬಿದ್ದಿದ್ದು, ದೇಶಾದ್ಯಂತ ಕಾರ್ಮಿಕರ ಹೋರಾಟ, ಆಕ್ರೋಶಗಳು ಮುಗಿಲು ಮುಟ್ಟುತ್ತಿದೆ. ಫೆಬ್ರವರಿ 23, 24 ರ ಅಖಿಲ ಭಾರತ ಮಹಾಮುಷ್ಕರವು ಭವಿಷ್ಯದ ಭಾರತಕ್ಕೆ ಹೊಸ ದಿಕ್ಸೂಚಿಯನ್ನು ನೀಡಲಿದೆ ಎಂದರು.




ಸಿಐಟಿಯು ಮಂಗಳೂರು ನಗರ ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರುರವರು ಮಾತನಾಡಿ, ಮಂಗಳೂರು ನಗರದಾದ್ಯಂತ ಅಖಿಲ ಭಾರತ ಮಹಾಮುಷ್ಕರದ ಸಂದೇಶವನ್ನು ಸಾರಲು ವಿವಿಧ ವಿಭಾಗದ ಕಾರ್ಮಿಕರ ಪ್ರದೇಶ ಮಟ್ಟದ ಸಮಾವೇಶ, ಪಾದಯಾತ್ರೆ, ವಾಹನ ಪ್ರಚಾರ ಜಾಥಾ, ಜಿಲ್ಲಾ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ಮುಂತಾದ ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಸಿಐಟಿಯು ಮಂಗಳೂರು ನಗರಾಧ್ಯಕ್ಷರಾದ ರವಿಚಂದ್ರ ಕೊಂಚಾಡಿಯವರು ವಹಿಸಿದ್ದರು.

ಕಾರ್ಯಾಗಾರದಲ್ಲಿ ಸಿಐಟಿಯು ಜಿಲ್ಲಾ ನಾಯಕರಾದ ಜಯಂತಿ ಶೆಟ್ಟಿ, ಬಾಬು ದೇವಾಡಿಗ, ಭಾರತಿ ಬೋಳಾರ, ಜಯಲಕ್ಷ್ಮಿ ಜಪ್ಪಿನಮೊಗರು, ಸಂತೋಷ್ ಆರ್.ಎಸ್, ಸಿಐಟಿಯು ನಗರ ಮುಖಂಡರಾದ ವಿಲ್ಲಿ ವಿಲ್ಸನ್, ಹರೀಶ್ ಕೆರೆಬೈಲ್, ಪುಷ್ಪಾ ಶಕ್ತಿನಗರ, ಅಹಮ್ಮದ್ ಭಾವ ಹಾಗೂ ಬೀಡಿ, ಕಟ್ಟಡ, ಬೀದಿಬದಿ, ಹಮಾಲಿ, ಆಟೋರಿಕ್ಷಾ, ಬಿಸಿಯೂಟ ಸಂಘಟನೆಗಳ ಪ್ರಮುಖ ಮುಖಂಡರು ಹಾಜರಿದ್ದರು.







ಬಳ್ಳಾರಿಯ ಸರಕಾರಿ ಭೂಮಿ ರಾಜಕಾರಣಿಗಳ ಪಾಲು?! ಇದರಲ್ಲಿ ಸಂತೋಷ್ ಲಾಡ್ ಪಾಲು ಬಹುಪಾಲು

ಗುರುರಾಜ ದೇಸಾಯಿ

ಬಳ್ಳಾರಿ ಜಿಲ್ಲೆ ಎಂದಾಕ್ಷಣ ನಮಗೆ ಥಟ್ಟನೆ ನೆನಪಾಗುವುದು ಗಣಿ ಮಾಫಿಯಾ, ಭೂ ಮಾಫೀಯಾ, ಹೌದು, ಮಾಫೀಯಾಗಳನ್ನೆ ಹೊದ್ದು ಮಲಗಿರುವ ಬಳ್ಳಾರಿ ಜಿಲ್ಲೆಗೆ ಇಂತಹದ್ದೊಂದು ಕೆಟ್ಟ ಹೆಸರು ಬಂದಿದ್ದು ರಾಜಕಾರಣಿಗಳಿಂದ. ಅದರಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ಮುಖಂಡರ ಕೊಡುಗೆ ಬೃಹದಾಕಾರವಾಗಿದೆ.

ಬಳ್ಳಾರಿಯಲ್ಲಿ ರೆಡ್ಡಿ ಮತ್ತು ಲಾಡ್ ಕುಟಂಬದ ಅಕ್ರಮಗಳು ಇಡೀ ದೇಶಕ್ಕೆ ಗೊತ್ತಿರುವ ವಿಚಾರ. "ಇವರ ತಂಟೆಗೆ ಯಾರೂ ಹೊಗಂಗಿಲ್ಲ, ಹೋದವರು ಉಳಿಯುವುದು ಇಲ್ಲ" ಎಂಬ ಕಾರಣಕ್ಕೆ ಬಾಯಿಗೆ ಬೀಗಹಾಕಿಕೊಂಡು ಕಡತಕ್ಕೆ ಸಹಿಮಾಡಿದ್ದ ಅಧಿಕಾರಿಗಳೆ ಹೆಚ್ಚು. ಆದರೆ ಬೆಳಗಾವಿಯಲ್ಲಿ ನಡೆದ ವಿಧಾನ ಮಂಡಲ ಅಧಿವೇಶನದಲ್ಲಿ ಶಾಸಕರಿಗೆ ಅವಮಾನ ಮಾಡಿದರು ಎಂದು ಸಂಡೂರು ತಾಲ್ಲೂಕ ತಹಶೀಲ್ದಾರ್ ವಿರುದ್ಧ ಹಕ್ಕುಚ್ಯುತಿ ಮಂಡಿಸಲಾಯಿತು. ಅದಕ್ಕೆ ಅಲ್ಲಿದ್ದ ಘಟಾನುಘಟಿಗಳು ಹೌದೌದು ಎಂದು ಹಕ್ಕುಚ್ಯುತಿಗೆ ಒಪ್ಪಿಗೆ ನೀಡದರು. ಆದರೆ ಅಸಲಿ ಕಥೆ ಬೇರೆಯೇ ಇದೆ.

ಮಾಜಿ ಸಚಿವ ಸಂತೋಷ್ ಲಾಡ್ ವಿರುದ್ಧ ಅಕ್ರಮ ಭೂಕಬಳಿಕೆ ಆರೋಪ ಕೇಳಿಬಂದಿದೆ. ಇದರ ತನಿಖೆಗೆ ತಹಶೀಲ್ದಾರ ಮುಂದಾಗಿದ್ದು ಶಾಸಕರಿಗೆ ಹಕ್ಕುಚ್ಯುತಿಯಾಗಿ ಕಂಡಿದೆ. ಹಾಗಾಗಿ ಅಲ್ಲಿನ ತಹಶೀಲ್ದಾರ ನಡೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ನಾಯಕರ ಕಣ್ಣನ್ನು ಕೆಂಪಾಗಿಸಿತ್ತು. ಅಕ್ರಮ ಭೂಕಬಳಿಕೆಯ ತನಿಖೆಯನ್ನು ನಿಲ್ಲಿಸಲು ಈ ತಂತ್ರವನ್ನು ಹೂಡಿದ್ದು ಎಂಬುದು ಪ್ರಮುಖ ವಿಷಯ.

47.63 ಎಕರೆ ಸರಕಾರಿ ಭೂಮಿ ಸಂತೋಷ್ ಕೈಯಲ್ಲಿ:

ತೋರಣಗಲ್ಲು ಹೋಬಳಿ ವ್ಯಾಪ್ತಿಯ ಮಾಳಾಪುರ ಗ್ರಾಮದ ಸರ್ವೆ ನಂ 123, ರಲ್ಲಿ 47.63 ಎಕರೆ ಸರ್ಕಾರಿ ಭೂಮಿಯನ್ನು ಮಾಜಿ ಸಚಿವ ಸಂತೋಷ್ ಲಾಡ್ ಮತ್ತು ಅವರ ಕುಟುಂಬ ಅಕ್ರಮವಾಗಿ ಕಬಳಿಕೆ ಮಾಡಿದೆ. ಪಹಣಿಯಲ್ಲಿ ಅಕ್ರಮ ತಿದ್ದುಪಡಿ ಮೂಲಕ ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ. ತಿದ್ದುಪಡಿ ಮಾಡಿರುವುದನ್ನು ಸಂಡೂರಿನ ತಹಶೀಲ್ದಾರ ಆಗಿದ್ದ ರಶ್ಮಿ ಸರಕಾರಕ್ಕೆ ಹಾಗೂ ತಾಲ್ಲೂಕ, ಜಿಲ್ಲಾಡಳಿತಕ್ಕೆ ವರದಿ ನೀಡಿದ್ದಾರೆ. ತಾಲೂಕು ಮ್ಯಾಜಿಸ್ಟ್ರೇಟ್ ರವರು ದಾಖಲೆ ಪರಿಶೀಲಿಸಿ ಮೊಟೇಶನ್ ಮಾಡದೇ ನೋಂದಣಿ ಮಾಡಲಾಗಿದೆ ಎಂದು ಲಿಖಿತವಾಗಿ ಸ್ಪಷ್ಟನೆ ನೀಡಿದ್ದಾರೆ.

ಆದರೆ ಬುದ್ದಿವಂತ ಲಾಡ್ ಕುಟುಂಬ ನಕಲಿ ಸರ್ಕಾರದ ದಾಖಲೆಗಳನ್ನು ಸೃಷ್ಟಿಸಿ ನೊಂದಾವಣೆ ಮಾಡಿಕೊಂಡಿದೆ. ತಮ್ಮ ಸಹಚರನಿಂದ ದಾವೆ ಹೂಡಿಸಿ ನ್ಯಾಯಾಲಯಕ್ಕೂ ನಕಲಿ ದಾಖಲೆ ನೀಡುವ ಮೂಲಕ ಕ್ರಮಬದ್ಧ ಮಾಡಿ ಕೊಳ್ಳಲು ನ್ಯಾಯಾಲಯಕ್ಕೆ ವಂಚಿಸುವ ಕೆಲಸ ಮಾಡಿದ್ದಾರೆ. ಇದು ಭೂಗಳ್ಳರು ಸರ್ಕಾರದ ಭೂಮಿಯನ್ನು ಅಕ್ರಮವಾಗಿ ವಶಪಡಿಸಿಕೊಳ್ಳುವ ಮತ್ತೊಂದು ಕುಟಿಲ ತಂತ್ರ ಎಂಬುದು ಪ್ರಮುಖ ಸಂಗತಿ.

ದಾಖಲೆ ಏನು ಹೇಳುತ್ತವೆ?:

ಬಳ್ಳಾರಿಯಲ್ಲಿ ಭೂಗಳ್ಳರ ಹಾವಳಿ ಹೆಚ್ಚಳವಾಗುತ್ತಿದೆ ಎಂಬುದಕ್ಕೆ ಜೀವಂತ ಉದಾಹರಣೆ ಈ ಮಾಳಾಪುರ ಭೂ ಹಗರಣವಾಗಿದೆ. 1996 ರವರೆಗೆ ಸರ್ಕಾರಿ ಒಫ಼ ಭೂಮಿ ಎಂದು ಇದ್ದಿದ್ದನ್ನು 1996, 1997 ರಲ್ಲಿ ಹನುಮನ ಮಗ ಹೊನ್ನೂರ ಎಂದು ಪಹಣಿ ಪತ್ರದಲ್ಲಿ ಅಸ್ಪಷ್ಟವಾಗಿ ಬರವಣಿಗೆಯ ಮೂಲಕ ಅಮಾಯಕ ವ್ಯಕ್ತಿ ಹೆಸರಿನಲ್ಲಿ ತಿದ್ದುಪಡಿ ಮಾಡಿ ನಮೂದಿಸಲಾಗಿದೆ. ನಂತರ ಲಾಡ್ ಕುಟುಂಬ 13.10.1996 ನಿಂದ 1998 ರಲ್ಲಿ ರೂ. 96000ಕ್ಕೆ ಪ್ರಯಾ ಮಾಡಿಕೊಂಡಿದೆ. ಸರ್ಕಾರಿ ಒಫ಼ ಭೂಮಿಯನ್ನು ಸಾಗುವಳಿದಾರನಲ್ಲದ ಒಬ್ಬ ಅಮಾಯಕ ವ್ಯಕ್ತಿಗೆ ಕಾನೂನು ಬಾಹಿರವಾಗಿ 47.63 ಎಕರೆ ಮಂಜೂರು ಮಾಡಿ ಲಾಡ್ ಕುಟುಂಬ ವರ್ಗಾಯಿಸಿಕೊಂಡಿರುವುದು 'ಆಡಳಿತ' ಅವರ ಕಾಲಲ್ಲಿ ಬಿದ್ದಿದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ.

ಇನ್ನೂ ಅವರೇ ಹೇಳುವಂತೆ ಅದು ಹೊನ್ನೂರನಿಗೆ ಸರಕಾರ ಮಂಜೂರು ಮಾಡಿದ್ದ ಭೂಮಿಯೆ ಅಂತಾ ಅಂದು ಕೊಂಡರು, ಮೂಂಜೂರಾದ ಸರ್ಕಾರಿ ಭೂಮಿ 15 ವರ್ಷ ಮಾರಾಟ ಮಾಡಲು ಬರುವುದಿಲ್ಲ. ಆದರೆ ಅದೇ ವರ್ಷ ಖರೀದಿ ಮಾಡಿದ್ದು ಹೇಗೆ? ಹಾಗದರೆ ಇದು ನಕಲಿ ದಾಖಲೆ ಸೃಷ್ಟಿಸಿದ್ದು ಎಂಬುದು ಸ್ಪಷ್ಟ.

ತೋರಣಗಲ್ಲು ನಾಡ ಕಚೇರಿ ಉಪ ತಹಶೀಲ್ದಾರ ದಿನಾಂಕ 17.07.2019 ರಂದು ತಹಶೀಲ್ದಾರ ಸಂಡೂರು ದಿನಾಂಕ 29.07.2019 ಹಿಂಬರಹ ನೀಡಿ ಹೊನ್ನುರನ ಹೆಸರಿನಲ್ಲಿ ಅಥವಾ ಲಾಡ್ ಕುಟುಂಬದ ಮೋಟೇಶನ್ ದಾಖಲೆ ಇಲ್ಲದಿರುವ ಕುರಿತು ನೋಟಿಸ್ ನೀಡಲಾಗಿದೆ. ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಮಾಹಿತಿ ಪಡೆದಿದ್ದು, ಅವುಗಳ ಉಲ್ಲೇಖದ ಪ್ರಕಾರ "ಕಚೇರಿಯಲ್ಲಿ ಸುಳ್ಳು ದಾಖಲೆ ಸೃಷ್ಟಿಸಿ" ಅದೇ ವರ್ಷ 1998 ಭೂಮಿಯನ್ನು ಲಾಡ್ ಕುಟುಂಬ ನೊಂದಾವಣೆ ಮಾಡಿಕೊಂಡಿದೆ.

ಯಾರು ಈ ಹೊನ್ನೂರ?:

ಹೊನ್ನೂರ ಯಾರು ಎಂಬುದೆ ಇಲ್ಲಿರುವ ರೋಚಕ ಕಥೆ. ಮೂಲತ: ಹುಬ್ಬಳಿಯವನಾದ ಹೊನ್ನೂರನಿಗೆ ಬಳ್ಳಾರಿಯಲ್ಲಿ ಸರಕಾರಿ ಭೂಮಿಹೇಗೆ ಸಿಕ್ಕಿತು ಅನ್ನೋದು ಇನ್ನೊಂದು ಟ್ವಿಸ್ಟ್ ಪ್ರಶ್ನೆಯಾಗಿದೆ.

ಮೊಟೇಶನ್ ಮಾಡಿಕೊಳ್ಳಲು ಭೂ ದಾಖಲೆಯಲ್ಲಿ ಸರ್ಕಾರ ಹಾಗೂ ಸಾಗುವಳಿದಾರನಲ್ಲದ ಹೊನ್ನುರಗೆ ಭೂ ಮಂಜೂರು ದಾಖಲೆಗಳೇ ಇಲ್ಲ. ಸುಳ್ಳು ದಾಖಲೆ ಸೃಷ್ಟಿಸಲು ಮೂರನೇ ಅನಾಮೇದಯ ವ್ಯಕ್ತಿ ಹುಬ್ಬಳ್ಳಿಯ ಹೊನ್ನುರಪ್ಪ ಎಂಬುವರ ಮೂಲಕ ಕೂಡ್ಲಿಗಿ ಕೋರ್ಟ್ ನಲ್ಲಿ ಕೇಸ್ ಹಾಕಿ ತಮ್ಮ ಪರವಾಗಿ ಆಗಿದೆ ಎಂದು ಲಾಡ್ ಕುಟುಂಬ ಹೇಳುತ್ತಿದೆ.

ಶಾಸಕರ ಶ್ರೀರಕ್ಷೆ:

ರಾಜಕಾರಣಿಗಳ ಅಕ್ರಮ ಭೂಕಬಳಿಕೆಗೆ ಶೀರಕ್ಷೆಯಾಗಿ ನಿಂತದ್ದು ಬೇರೆ ಯಾರೂ ಅಲ್ಲ, ಸಂಡೂರು ಕ್ಷೇತ್ರದಿಂದ ಆಯ್ಕೆಯಾಗಿರುವ ಶಾಸಕ ಈ. ತುಕರಾಮ. ಬಡವರು, ದಲಿತರು ಉಳಿಮೆ ಮಾಡಬೇಕಿದ್ದ ಜಾಗ ಲಾಡ್, ರೆಡ್ಡಿ, ಹಾಗೂ ತುಕಾರಂ ರಂತವರು ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಭೂಮಿಯನ್ನು ನುಂಗುತ್ತಿರುವುದು ಸರಕಾರಕ್ಕೆ ಗೊತ್ತಿಲ್ಲ ಅಂತಾ ಅಲ್ಲ. ಅವರಿಗೂ ಗೊತ್ತಿದೆ. ತಲುಪಬೇಕಾದವರಿಗೆ ಕಮಿಷನ್ ತಲುಪುತ್ತಿರುವ ಕಾರಣ ಯಾರೂ ಕ್ರಮಕ್ಕೆ ಮುಂದಾಗುತ್ತಿಲ್ಲ. ಇವರ ವಿರುದ್ಧ ವರದಿ ಸಲ್ಲಿಸಿದ್ದ ರಶ್ಮಿಯವರ ವಿರುದ್ಧ ಹಕ್ಕುಚ್ಯುತಿ ಮಂಡಿಸಿ ಸಂಡೂರಿನಿಂದ ಎತ್ತಂಗಡಿ ಮಾಡಿಸಿಯೇ ಬಿಟ್ಟರು.

ಅತಂತ್ರ ಸ್ಥಿತಿಯಲ್ಲಿ ಭೂರಹಿತರು:

ಭೂರಹಿತ ಬಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಹಿಂದುಳಿದ ದಲಿತ ಕುಟುಂಬಗಳಿಗೆ ಭೂಮಿಯನ್ನು ನೀಡಲು ಸಾಧ್ಯವಾಗುತ್ತಿಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964, ಕಲಂ 94 (ಎ) 4 ಅಡಿಯಲ್ಲಿ ಸರ್ಕಾರಿ ಭೂಮಿಯಲ್ಲಿ ಉಳುಮೆಗಾರರು ಫಾರಂ 57 ಅರ್ಜಿ ಸಲ್ಲಿಸಿ ಸಾಗುವಳಿ ಪತ್ರಕ್ಕಾಗಿ ಅನೇಕ ವರ್ಷಗಳಿಂದ ಕಾಯುತ್ತಿದ್ದಾರೆ. ಅನಾಧೀನ, ಬಗರಹುಕಂ, ಇತ್ಯಾದಿ ಹೆಸರಿನ ಸಾಗುವಳಿ ಭೂಮಿಯಲ್ಲಿನ 43,971 ಉಳುಮೆಗಾರರು ಅರ್ಜಿ ಸಲ್ಲಿಸಿದ್ದಾರೆ. ಅದರಲ್ಲಿ 27,649 ಅರ್ಜಿ ಆನ್ ಲೈನ್ ನೋಂದಾವಣೆ ಆಗಿದ್ದು ಇನ್ನೂ 16,322 ಅರ್ಜಿ ಆನ್ ಲೈನ್ ನೊಂದಾವಣೆ ಬಾಕಿ ಉಳಿದಿದೆ. ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಅರ್ಜಿ ಸಲ್ಲಿಸಿದ 5272 ಅರಣ್ಯ ಭೂಮಿ ಸಾಗುವಳಿದಾರರಲ್ಲಿ ಇದುವರೆಗೂ ಹಕ್ಕು ಪತ್ರ ನೀಡಿಲ್ಲ. ಸುಮಾರು 50 ಸಾವಿರ ಬಡ ದಲಿತ ಭೂರಹಿತ ಕುಟುಂಬಗಳು ತಲೆತಲಾಂತರಗಳಿಂದ ಸಾಗುವಳಿ ಮಾಡಿಕೊಂಡು ಬಂದ ಕುಟುಂಬಕ್ಕೆ ತುಂಡು ಭೂಮಿ ಪಟ್ಟ ನೀಡಲು ಸಾಧ್ಯವಾಗಿಲ್ಲ. ಸಂಡೂರು ತಾಲೂಕಿನ ಒಂದರಲ್ಲೇ 3689 ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಸಂಡೂರು ತಾಲೂಕು, ತೋರಣಗಲ್ಲು ಹೋಬಳಿ ಮಾಳಾಪುರ ಗ್ರಾಮದ ಭೂರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ದಲಿತ 16 ಕುಟುಂಬಗಳು ಕಳೆದ ಏಳು ದಶಕಗಳಿಂದ ಸರ್ವೆ ನಂಬರ್ 123, ಸರ್ಕಾರಿ ಭೂಮಿ 47.63 ರಲ್ಲಿ ಸಾಗುವಳಿ ಮಾಡಿ ಕೊಂಡು ಬಂದಿದ್ದಾರೆ. ಸಾಗುವಳಿದಾರರ ಸ್ವಾದೀನದಲ್ಲಿ ಇದುವರೆಗೂ ಭೂಮಿ ಇದ್ದು ಸರ್ಕಾರದಿಂದ ಪಟ್ಟ ನಿರೀಕ್ಷೆಯಲ್ಲಿ ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ.

ಭೂಮಿ ಸಾಗುವಳಿದಾರರ ಕಬ್ಜದಲ್ಲಿದ್ದರೂ ದಿನಾಂಕ 18.06.2021 ರಂದು ಸಿ.ವಿ. ನಾಗರಾಜ ಎಂಬ ವ್ಯಕ್ತಿ ಪೋಲೀಸ್ ರ ಬೆಂಗಾವಲಿನಿಂದ ಭೂಮಿ ನಮ್ಮ "ಸಂತೋಷ ಲಾಡ್ ಧಣಿಗಳದ್ದು" ಎಂದು ಹದ್ದುಬಸ್ತು ಹಾಕಲು ಬಂದಿದ್ದಾರೆ. ಉಳುಮೆಗಾರರ ದೌರ್ಜನ್ಯ ನಡೆಸುದನ್ನು ಪ್ರಶ್ನೆ ಮಾಡಿದರೆ ಜಿಲ್ಲಾ ಪಂಚಾಯಿತಿ ಸದಸ್ಯ ಅಕ್ಷಯ್ ಎ ಲಾಡ್ ಗಾಧಿಗನೂರು ಪೋಲೀಸ್ ಠಾಣೆಯಲ್ಲಿ ದೂರು ನೀಡಿ ಅಧಿಕಾರ ದುರೋಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂಬುದು ಆ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ಭೂರಹಿತರ ಆರೋಪವಾಗಿದೆ.

ಸಿಕ್ಕ ದಾಖಲೆಗಳಿಂದ ಲಾಡ್ ಕುಟುಂಬ ಸರಕಾರಿ ಭೂಮಿಯನ್ನು ಅಕ್ರಮವಾಗಿ ಪಡೆದದ್ದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇನ್ನೂ ಸಿಗದೆ ಇರುವ ದಾಖಲೆಗಳ ಪ್ರಕಾರ ಅದೆಷ್ಟು ಭೂಮಿಯನ್ನು ಪೀಕಿದ್ದಾರೋ ಅವರಿಗೆ ಗೊತ್ತು. ಜಿಲ್ಲಾಡಳಿತ ಸ್ವಯಂ ದೂರು ದಾಖಲಿಸಿಕೊಂಡು ಉನ್ನತ ಮಟ್ಟದ ತನಿಖೆ ನಡೆಸಿದಾಗ ಮಾತ್ರ ಇನ್ನಷ್ಟು ಹಗರಣ ಬಯಲಿಗೆ ಬರಬಹುದು.

ಲಾಡ್ ಕುಟುಂಬ ಈ ಭೂಮಿಯಲ್ಲಿ ಕಲ್ಲು ಗಣಿ ಪ್ರಾರಂಭ ಮಾಡಲು ಹೊಂಚು ಹಾಕಿದೆ. ಈಗಾಗಲೆ ರೆಡ್ಡಿಗಳ ಗಣಿ ಧೂಳಿನಿಂದ ನಲುಗಿ ಹೋಗಿರುವ ಬಳ್ಳಾರಿಯ ಜನ ಈಗ ಮತ್ತಷ್ಟು ಕಷ್ಟಗಳನ್ನು ಎದುರಿಸವ ಸ್ಥಿತಿ ನಿರ್ಮಾಣವಾಗಬಹುದು ಹಾಗಾಗಿ ಸರ್ಕಾರ ಕೂಡಲೇ ಅಕ್ರಮ ಪಹಣಿಯನ್ನು ರದ್ದು ಮಾಡಿ ಆ ಭೂಮಿ ಸಾಗುವಳಿ ಮಾಡುತ್ತಿರುವ ಭೂರಹಿತ ದಲಿತ ಕುಟುಂಬಗಳಿಗೆ ಪಟ್ಟ ನೀಡಲು ಮುಂದಾಗಬೇಕು.


–ವಿ.ಎಸ್. ಶಿವಶಂಕರ್
(ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ)

ಸಂಪೂರ್ಣವಾಗಿ ನಕಲಿ ದಾಖಲೆ ಸೃಷ್ಟಿಸಿ ಸರ್ಕಾರದ ಭೂಮಿಯನ್ನು ಕಬಳಿಕೆ ಮಾಡಿರುವ ಹಗರಣ ಇದಾಗಿದ್ದು, ಭೂಗಳ್ಳರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಎಲ್ಲಾ ಭೂಹಗರಣಗಳನ್ನು ತನಿಖೆ ನಡೆಸಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು.

–ಚನ್ನಬಸಯ್ಯ ಸ್ವಾಮಿ
(ಭೂ ಸಂತ್ರಸ್ತರ ಹೋರಾಟ ಸಮಿತಿ ಮುಖಂಡ)

ಸರ್ಕಾರದ ನಿರ್ಲಕ್ಷ್ಯತೆಯಿಂದಾಗಿ ಜಿಲ್ಲೆಯಲ್ಲಿ ಹೇರಳವಾಗಿ ಭೂಹಗರಣಗಳು ನಡೆಯುತ್ತಿವೆ. ತಲೆ ತಲಾಂದರದಿಂದ ಸಾಗುವಳಿ ಮಾಡಿಕೊಂಡು ಬಂದಿರುವ ಭೂರಹಿತ ಬಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಹಿಂದುಳಿದ ದಲಿತ ಕುಟುಂಬಗಳಿಗೆ ಭೂಮಿಯನ್ನು ನೀಡಲು ಸಾಧ್ಯವಾಗುತ್ತಿಲ್ಲ. ಪಟ್ಟಭದ್ರ ಹಿತಾಸಕ್ತಿಗಳ ಕುತಂತ್ರದಿಂದ ಭೂ ಮಾಲೀಕರ, ಶ್ರೀಮಂತರ ಪಾಲಾಗುತ್ತಿದೆ.

–ಎ ಸ್ವಾಮಿ – (ಜಿಲ್ಲಾ ಕಾರ್ಯದರ್ಶಿ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಬಳ್ಳಾರಿ.)



ಕವಿ, ಬಂಡಾಯಗಾರ ಪ್ರೊ. ಚಂದ್ರಶೇಖರ ಪಾಟಿಲರ ಒಂದು ನುಡಿನಮನ

ವಾಸುದೇವ ಉಚ್ಚಿಲ

ಕನ್ನಡ ಕಾವ್ಯದ ಭೂತ ಭವಿಷ್ಯವ ಬಣ್ಣಿಸಿ ಹೇಳೋ ಗಾಂಪಾ;
ನಮ್ಮ ಆದಿ ಕವಿ ಪಂಪಾ, ನಮ್ಮ ಅಂತ್ಯ ಕವಿ ಚಂಪಾ

ಜನವರಿ 9 ರಂದು ನಿಧನರಾದ (ಜನನ: 18 ಜೂನ್ 1939) ಹೋರಾಟಗಾರ ಸಾಹಿತಿ ಪ್ರೊ.ಚಂದ್ರಶೇಖರ ಪಾಟೀಲರು ತಮ್ಮ ಬರವಣಿಗೆ, ಮಾತು ಕವಿತೆಗಳಲ್ಲಿಯೂ ವ್ಯಂಗ್ಯ ವಿನೋದಗಳನ್ನು ಉಳಿಸಿಕೊಂಡವರು. ಅವರು ಬರವಣಿಗೆ ಶುರು ಮಾಡಿದ ಹಂತದಿಂದಲೇ ಒಬ್ಬ ಬಂಡಾಯಗಾರನಾಗಿ ಗುರುತಿಸಿಕೊಂಡವರು. 1960 ರಲ್ಲಿ ಮೂಡಿ ಬಂದ ಅವರ ಮೊದಲ ಕವನ ಸಂಕಲನ 'ಬಾನುಲಿ' ಹಾಗೂ ಬಳಿಕದ ಮಧ್ಯಬಿಂದು (1964) ನಲ್ಲೇ ಅವರು ಅಂದಿನ ನವೋದಯ ಕಾವ್ಯಕ್ಕೆ ಬಂಡೆದ್ದುದು ಎದ್ದು ಕಾಣುತ್ತಿತ್ತು. 'ಹೋಗಿ ಬರ್‍ತೇನಜ್ಜ' ಎಂಬ ಅವರ ಕವನದಲ್ಲಿ ಹೇಳುತ್ತಾರೆ.

ನಿನ್ನ ಪಾದದ ಧೂಳಿ ನನ್ನ ಹಣೆ ಮೇಲಿರಲಿ
ಕಣ್ಣೊಳಗೆ ಮಾತ್ರ ಅದು ಬೀಳದಿರಲಿ

1964 ರಲ್ಲಿ ಚಂದ್ರಶೇಖರ ಪಾಟೀಲ (ಚಂಪಾ) 'ಸಂಕ್ರಮಣ' ದ್ವೈಮಾಸಿಕ ಸಾಹಿತ್ಯ ಪತ್ರಿಕೆಯನ್ನು ಗಿರಡ್ಡಿ ಗೋವಿಂದ ರಾಜ, ಸಿದ್ಧಲಿಂಗ ಪಟ್ಟಣಶೆಟ್ಟಿ ಇವರಿಬ್ಬರ ಸಹ ಸಂಪಾದಕತ್ವದಲ್ಲಿ ಪ್ರಾರಂಭಿಸಿದ್ದರು. ಅವರಿಬ್ಬರು ಮುಂದೆ ಪತ್ರಿಕೆಯ ಸಂಪಾದಕತ್ವವನ್ನು ಬಿಟ್ಟು ಹೋದರೂ, 2 ವರ್ಷಗಳ ಹಿಂದೆ ಪಾಟೀಲರು ವಯೋಸಹಜ ನಿಶ್ಶಕ್ತಿಯಿಂದ ಕ್ರಿಯಾಶೀಲತೆ ಕಳೆದುಕೊಳ್ಳುವವರೆಗೂ–ಅಂದರೆ 50 ವರ್ಷಗಳಿಗೂ ಮೀರಿ 'ಸಂಕ್ರಮಣ' ಪತ್ರಿಕೆಯನ್ನು ತಪ್ಪದೆ ಪ್ರಕಟಿಸುತ್ತಾ ಬಂದುದು ಕನ್ನಡ ಸಣ್ಣ ಸಾಂಸ್ಕೃತಿಕ ಪತ್ರಿಕೆಗಳ ಇತಿಹಾಸದಲ್ಲಿ ಒಂದು ದಾಖಲೆಯಾಗಿದೆ. ಅವರು ಪತ್ರಿಕೆ ಆರಂಭಿಸುವಾಗ ಕನ್ನಡ ಸಾಹಿತ್ಯದಲ್ಲಿ ನವ್ಯಪಂಥ ಪ್ರವರ್ಧಮಾನಕ್ಕೆ ಬರುತ್ತಿತ್ತು. ಮಧ್ಯಮ ವರ್ಗದ ಇಂಗ್ಲಿಷ್ ಆಕರ್ಷಣೆಯ ವ್ಯಕ್ತಿ ಕೇಂದ್ರಿತ ಸಾಹಿತ್ಯ ನವ್ಯದ ಕೇಂದ್ರಬಿಂದುವಾಗಿತ್ತು. ಸಮಾಜವಾದಿ ಚಿಂತನೆಗಳು ಕೆಲವು ಬರಹಗಾರರಲ್ಲಿ ಪ್ರಮುಖವಾಗಿ ಇದ್ದಿತ್ತಾದರೂ, ಗೋಪಾಲಕೃಷ್ಣ ಅಡಿಗರು ಮುಂಚೂಣಿಯಲ್ಲಿ ಇದ್ದುದರಿಂದಲೋ ಏನೋ, ನವ್ಯ ಸಾಹಿತ್ಯ ಚಳುವಳಿ ವ್ಯಕ್ತಿ ಕೇಂದ್ರಿತ ಸಾಹಿತ್ಯವಾಗಿ ಪ್ರಧಾನವಾಗಿ ಗುರುತಿಸಲ್ಪಟ್ಟಿತು. ಅಡಿಗರ ನೇತೃತ್ವದಲ್ಲಿ ಸಾಕ್ಷಿ ಪತ್ರಿಕೆ ಅದಾಗಲೇ ನಿಯಮಿತವಾಗಿ ಪ್ರಕಟವಾಗುತ್ತಿತ್ತು. ಅದಾದ ಸ್ವಲ್ಪ ವರ್ಷಗಳಲ್ಲೇ ಪ್ರಕಟವಾಗುತ್ತಿದ್ದ 'ಸಂಕ್ರಮಣ' ಕ್ರಮೇಣವಾಗಿ ನವೋದಯ ಸಾಹಿತ್ಯಕ್ಕೆ ಮಾತ್ರವಲ್ಲ, ನವ್ಯ ಸಾಹಿತ್ಯಕ್ಕೂ ಸವಾಲಾಗಿ ಮೂಡಿ ಬಂತು. ದೇಶದ ತುರ್ತುಪರಿಸ್ಥಿತಿಯ ಪೂರ್ವದ ದಿನಗಳಲ್ಲೂ ತುರ್ತು ಪರಿಸ್ಥಿತಿಯ ದಿನಗಳಲ್ಲೂ 'ಚಂಪಾ' ಮತ್ತು 'ಸಂಕ್ರಮಣ' ಮುಂಬರಲಿರುವ ಸಮಾಜಮುಖಿ ಸಾಹಿತ್ಯದ ಸೂಚನೆಗಳನ್ನು ಮುಂದಿಟ್ಟಿತು.

1970ರ ದಶಕದ ಕರ್ನಾಟಕದ ಸಾಂಸ್ಕೃತಿಕ ಬೆಳವಣಿಗೆಗಳನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. 1973 ರಲ್ಲಿ ಚಂಪಾ, ತೇಜಸ್ವಿ ನೇತೃತ್ವಕೊಟ್ಟ ಬರಹಗಾರರ ಮತ್ತು ಕಲಾವಿದರ ಒಕ್ಕೂಟ ಮತ್ತು ಜಾತಿ ವಿನಾಶ ಸಮ್ಮೇಳನ 1974ರ ಬೂಸಾ ಪ್ರಕರಣ ಮತ್ತು ಅದರ ಪರಿಣಾಮವಾಗಿ ಹುಟ್ಟಿದ ದಲಿತ ಸಂಘರ್ಷ ಸಮಿತಿ, ಇಂದಿರಾಗಾಂಧಿಯವರ ಸರ್ವಾಧಿಕಾರಿ ಧೋರಣೆಗೆ ವಿರುದ್ಧವಾಗಿ ಮೂಡಿ ಬಂದ ನವ ನಿರ್ಮಾಣ ಚಳವಳಿ, 1975ರ ಸಮುದಾಯ ಸಂಘಟನೆ–ಈ ಎಲ್ಲಾ ಬೆಳವಣಿಗೆಗಳು ಕರ್ನಾಟಕದಲ್ಲಿ ಒಂದು ಸಂಘರ್ಷ ಪೂರ್ವಕ ಸಾಂಸ್ಕೃತಿಕ ಸನ್ನಿವೇಶವನ್ನು ಮೂಡಿಸಿತು.

ಈ ಸಂದರ್ಭದಲ್ಲಿ ಕವಿಯೂ ಸಂಪಾದಕರೂ ಆಗಿದ್ದ ಚಂಪಾ ಅವರ ಗಾಂಧಿಸ್ಮರಣೆ (1976) ಸಂಕಲನ ಅವರದೇ ಕಾವ್ಯಕ್ಕೆ ಒಂದು ಹೊಸ ಆಯಾಮವನ್ನು ಒದಗಿಸಿತು. ಜನರ ಬದುಕಿನೊಂದಿಗೆ ಮತ್ತು ರಾಜಕಾರಣದೊಂದಿಗೆ ಕನ್ನಡ ಕಾವ್ಯವನ್ನು ಬೆಸೆದ ಮುಖ್ಯ ಕವನಸಂಕಲನ ಇದಾಗಿದೆ. ಅಲ್ಲಿನ ಸರ್ವಜ್ಞನ ಮ್ಯಾಲ ಒಂದು ಕವಿತಾದ ಸಾಲುಗಳು ಹೀಗಿವೆ.

ಜೀವ ಹಿಂಡಿ ಮಾತ ಮಾಡಿ
ಡಬ್ಬಿಣದಾಂಗ ಚೂಪ ಮಾಡಿ
ಕಬ್ಬಿಣದಾಂಗ ಕಾಸಿ ಕಾಸಿ
ದಪ್ಪ ತೊಗಲಿನ ನಮ್ಮ ಜನಕ್ಕ
ನಮ್ಮ ಮನಕ್ಕ
ಹೆಂಗರ ಮಾಡಿ ಹೆಚ್ಚಬೇಕು.

ಕಾವ್ಯ ಖಡ್ಗವಾಗಬೇಕೆನ್ನುವ ಆವೇಶ ಇಲ್ಲಿ ಧುಮುಗುಟ್ಟಿದೆ. ಚಂಪಾ ಆ ದಶಕದಲ್ಲಿ ವ್ಯವಸ್ಥಾ ವಿರೋಧಿಯಾದ ಹಲವು ಕೃತಿಗಳನ್ನು ಬರೆದರು. ಕೊಡೆಗಳು, ಅಪ್ಪ, ಕುಂಟಾ ಕುಂಟಾ ಕುರವತ್ತಿ, ಗುರ್ತಿನವರು, ಟಿಂಗರ ಬುಡ್ಡಣ್ಣ ಇತ್ಯಾದಿ ಉತ್ತಮ ಅಮೂರ್ತ ನಾಟಕಗಳಿಂದ ಅವರು ಆಗಲೇ ಪ್ರಸಿದ್ಧರಾಗಿದ್ದರು. ವಿಚಾರವಾದೀ ಚಳವಳಿಯಲ್ಲಿ ಸಕ್ರಿಯರಾಗಿರುತ್ತಾ, ಬುರುಡೆ ಬಾಬಾನ ವಸ್ತ್ರಾಪಹರಣ ಪವಾಡ, ನವ್ಯಪಂಥವನ್ನು ಲೇವಡಿ ಮಾಡುವ ನಳಕವಿಯ ಮಸ್ತಕಾಭಿಷೇಕ, ಸರ್ವಾಧಿಕಾರವನ್ನು ವಿಡಂಬಿಸುವ ಜಗದಂಬೆಯ ಬೀದಿ ನಾಟಕ, ಗೋಕರ್ಣದ ಗೌಡಸಾನಿ ಇತ್ಯಾದಿ ನಾಟಕಗಳನ್ನು ಬರೆದು ಆಡಿಸುವ ಮೂಲಕ ತಮ್ಮ ವ್ಯವಸ್ಥಾ ವಿರೋಧಿ ಬಂಡಾಯ ಪ್ರವೃತ್ತಿಯನ್ನು ಪ್ರಕಟಿಸಿದರು. ತುರ್ತುಪರಿಸ್ಥಿಯಲ್ಲಿ ಇದರಿಂದಾಗಿ ಅವರು 26 ದಿನಗಳ ಜೈಲುವಾಸವನ್ನು ಅನುಭವಿಸಿದರು. ತುರ್ತು ಪರಿಸ್ಥಿತಿ ವಿರೋಧಿಸಿ ಜೈಲುವಾಸ ಅನುಭವಿಸಿದ ಕನ್ನಡ ಸಾಹಿತಿ ಇವರೊಬ್ಬರೇ. ತಮ್ಮ ಜೈಲುವಾಸದ ಅನುಭವವನ್ನು ಅವರ ಪುಸ್ತಕವೊಂದರಲ್ಲಿ ಪ್ರಕಟಿಸಿದ್ದಾರೆ.

1979 ರಲ್ಲಿ ರಾಜ್ಯ ಮಟ್ಟದಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಿಕೊಂಡುದು ಕನ್ನಡ ಸಾಹಿತ್ಯ ಚಳವಳಿಯಲ್ಲಿ ಒಂದು ಮೈಲುಗಲ್ಲು. ತುರ್ತು ಪರಿಸ್ಥಿತಿ ಅನಂತರವೂ ಕನ್ನಡ ಸಾಹಿತ್ಯ ಪರಿಷತ್ತು ಒಂದು ಯಥಾಸ್ಥಿತಿವಾದಿ ನಿಲುವಿನಲ್ಲಿ ಧರ್ಮಸ್ಥಳದಲ್ಲಿ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಂಡಿದ್ದನ್ನು ವಿರೋಧಿಸಿ ಬಂಡಾಯ ಸಂಘಟನೆ ಪ್ರಥಮ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಸಿತು. ಚಂಪಾ, ಬರಗೂರು ರಾಮಚಂದ್ರಪ್ಪ, ದೇವನೂರು ಮಹಾದೇವ, ಕವಿ ಸಿದ್ಧಲಿಂಗಯ್ಯ ಇವರು ಮುಂಚೂಣಿಯಲ್ಲಿ ನಿಂತು ಸಮ್ಮೇಳನವನ್ನು ಏರ್ಪಡಿಸಿದರು. ಕರ್ನಾಟಕದ ದಲಿತ ಚಳುವಳಿ, ಸಮಾಜವಾದಿ, ಕಮ್ಯೂನಿಸ್ಟ್, ವಿಚಾರವಾದಿ ಚಳವಳಿಗಳು ಬೆನ್ನುತಟ್ಟಿ ಮೂಡಿಬಂದ ಸಾಹಿತ್ಯ ಚಳವಳಿ ಅದಾಗಿತ್ತು. ಸಂಘಟನೆಯನ್ನು ಕಟ್ಟುವಲ್ಲಿಯೂ ಚಂಪಾ ಅವರ ಪಾತ್ರ ಪ್ರಮುಖವಾದುದಾಗಿದೆ.


1980ರ ದಶಕದ ಆರಂಭದಲ್ಲಿ ಪ್ರೌಢಶಾಲೆಗಳಲ್ಲಿ ಕನ್ನಡದ ಅಸ್ಮಿತೆಗೆ ತೊಂದರೆಯಾದಾಗ ಗೋಕಾಕ ಚಳವಳಿ ಹುಟ್ಟಿದ್ದು. ಅದರಲ್ಲೂ ಚಂಪಾ ಪ್ರಧಾನ ಪಾತ್ರ ವಹಿಸಿದರು. ಪ್ರಾಥಮಿಕ 5ನೇ ತರಗತಿವರೆಗೆ ರಾಜ್ಯದಲ್ಲಿ ಕನ್ನಡ ಮಾಧ್ಯಮವೇ ಇರಬೇಕು, ಕನ್ನಡೇತರರಿಗೂ ಒಂದು ಭಾಷೆಯಾಗಿ ಕನ್ನಡ ಕಡ್ಡಾಯವಿರಬೇಕು ಎಂದು ಚಂಪಾ ಕೊನೆಯವರೆಗೂ ಹೋರಾಡುತ್ತಿದ್ದರು. ಗೋಕಾಕ ಚಳವಳಿಗೆ ನಟ ರಾಜಕುಮಾರರನ್ನು ಬರಮಾಡಿದವರೂ ಚಂಪಾ ಅವರೇ. ಈ ಚಳವಳಿಯಿಂದ ಸಂಸ್ಕೃತಕ್ಕೆ ಶಾಲಾ ಶಿಕ್ಷಣದಲ್ಲಿ ಇದ್ದ ಪ್ರಾಶಸ್ತ್ಯ ತಪ್ಪಿ, ಅದು ಕನ್ನಡಕ್ಕೆ ಒದಗಿ ಬಂತು.

ಅಲ್ಲಿಂದೀಚೆಗೆ ಚಂಪಾ ಅವರು ನಾಡಿನ ಹಲವು ಸಾಂಸ್ಕೃತಿಕ ಹಾಗೂ ಭಾಷಾ ಹೋರಾಟಗಳಲ್ಲಿ ಮುಂಚೂಣಿಯಲ್ಲಿ ಯಾವಾಗಲೂ ಕಾಣಿಸಿಕೊಂಡಿದ್ದಾರೆ. ಕರ್ನಾಟಕ ಸರಕಾರದ ಅಕಾಡೆಮಿಗಳಲ್ಲಾಗಲೀ, ಸಾಹಿತ್ಯ ಪರಿಷತ್ತಿನ ಅಧಿಕಾರದಲ್ಲಾಗಲೀ ಇರಲೇ ಕೂಡದೆಂಬ ಬಂಡಾಯದ ನಿಲುವನ್ನು ಮುಂದೆ ಸಂಘಟನೆ ತಿದ್ದಿಕೊಂಡಿತು. ಇದಕ್ಕಾಗಿ ಚಂಪಾ ಟೀಕೆಗೆ ಒಳಗಾದರೂ ಅವರು ಆಡಳಿತದಲ್ಲಿ ಪಾಲುದಾರರಾಗಿ ಬಂದಾಗ ತಮ್ಮ ಜನಪರ ನಿಲುವುಗಳನ್ನು ಬಿಟ್ಟುಕೊಡಲಿಲ್ಲ ಮಾತ್ರವಲ್ಲ ಅನೇಕವನ್ನು ಕಾರ್ಯರೂಪಕ್ಕೆ ತಂದರು ಕೂಡಾ. 1996 ರಿಂದ 1999ರ ವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿ ಕನ್ನಡ ಮಾಧ್ಯಮ ಶಾಲೆಗೆ ಅನುಮತಿ ಪಡೆದು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ನಡೆಸುತ್ತಿದ್ದ 2,215 ಶಾಲೆಗಳ ಮಾನ್ಯತೆಯನ್ನು ರದ್ದುಗೊಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೂ ಸ್ಪರ್ಧಿಸಿ 2004 ರಿಂದ 2008ರ ವರೆಗೆ ಅದರ ಅಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿ ಪರಿಷತ್ತಿನ ಅಂಗಳದಲ್ಲಿ ಪುಸ್ತಕ ಸಂತೆಗಳನ್ನು ಏರ್ಪಡಿಸಿದರು. 2006 ರಲ್ಲಿ ಶಿವಮೊಗ್ಗದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಆಹ್ವಾನಿತ ಬರಹಗಾರರೂ ಹೋರಾಟಗಾರರೂ ಆಗಿದ್ದ ಗೌರಿ ಲಂಕೇಶ್ ಮತ್ತು ವಿಠಲ ಕಲ್ಲುಡಿಯವರನ್ನು ವೇದಿಕೆ ಹತ್ತಿಸಬಾರದೆಂದು ಹಿಂದುತ್ವವಾದಿ ಸಂಘಟನೆಗಳು ಕೂಗಾಡುತ್ತಿದ್ದರೂ, ಅಲ್ಲದೆ ರಾಜ್ಯದಲ್ಲಿ ಹಿಂದುತ್ವವನ್ನು ಪೋಷಿಸುವ ಸರಕಾರವೇ ಆಡಳಿತದಲ್ಲಿ ಇದ್ದರೂ, ಚಂಪಾ ಅವರು ಅವುಗಳನ್ನು ಎದುರಿಸಿ, ಅವರಿಬ್ಬರೂ ಸಮ್ಮೇಳನದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟರು.

ಡಾ. ಎಂ.ಎಂ. ಕಲ್ಬುರ್ಗಿಯವರನ್ನು ಹಿಂದುತ್ವ ಗೂಂಡಾಗಳು ಹತ್ಯೆ ಮಾಡಿದಾಗ, ರಾಜ್ಯ ಸರಕಾರದ ನಿಷ್ಕ್ರಿಯತೆಯನ್ನು ವಿರೋಧಿಸಿ ಅವರು ಸರಕಾರ ತನಗೆ ನೀಡಿದ್ದ ಪಂಪ ಪ್ರಶಸ್ತಿಯನ್ನು (ಸಪ್ಟೆಂಬರ್ 2015) ಸರಕಾರಕ್ಕೆ ಹಿಂತಿರುಗಿಸಿದರು. 2017 ರಲ್ಲಿ ಮೈಸೂರಿನಲ್ಲಿ ನಡೆದ ಪರಿಷತ್ತಿನ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಅವರು ವಹಿಸಿದ್ದರು. ನಮಗೆ ಅಷ್ಟೊಂದು ಸಮ್ಮತಿ ಇಲ್ಲವಾದರೂ, ಕರ್ನಾಟಕಕ್ಕೆ ಬಂದು ಪ್ರಾದೇಶಿಕ ಪಕ್ಷದ ಅಗತ್ಯವನ್ನು ಆ ಸಮ್ಮೇಳನದಲ್ಲಿ ಪ್ರಸ್ತಾಪಿಸಿದರು.

ಬಂಡಾಯ ಸಾಹಿತ್ಯ ಸಮ್ಮೇಳನ ಕಳೆದ ಕೆಲವು ವರ್ಷಗಳಲ್ಲಿ ಸಕ್ರಿಯವಾಗಿಲ್ಲವಾದರೂ ಚಂದ್ರಶೇಖರ ಪಾಟೀಲರು ಬೇರೆ ವೇದಿಕೆಗಳನ್ನು ಬಳಸಿಕೊಂಡು ಒಬ್ಬ ಜವಾಬ್ದಾರಿಯುತ ಬಂಡಾಯಗಾರನ ವ್ಯವಸ್ಥಾ-ವಿರೋಧೀ ಹೋರಾಟವನ್ನು ನಡೆಸುತ್ತಾ ಬಂದಿದ್ದಾರೆ. ಕಳೆದ ಮೂರು ದಶಕಗಳಲ್ಲಿ ಬೆಳೆಯುತ್ತಿರುವ ಹಿಂದುತ್ವ ಕೋಮುವಾದ ಅವರಿಗೆ ಹೆಚ್ಚಿನ ಕಳವಳ ಉಂಟುಮಾಡಿದೆ. 2017 ಸಪ್ಟೆಂಬರದಲ್ಲಿ ಬೆಂಗಳೂರಿನಲ್ಲಿ ಎಡಪಕ್ಷಗಳು, ದಲಿತ ಹಾಗೂ ರೈತ ಸಂಘಟನೆಗಳು ಹಾಗೂ ಪ್ರಗತಿಪರರು ಒಟ್ಟುಗೂಡಿ ಏರ್ಪಡಿಸಿದ ಸೌಹಾರ್ದ ಸಮಾವೇಶದಲ್ಲಿ ಹಿಂದುತ್ವ ಇಂದು ನಮ್ಮ ಪ್ರಥಮ ಶತ್ರು ಎಂದು ಗುರುತಿಸಬೇಕು ಎಂದು ಖಚಿತವಾಗಿ ಹೇಳಿದರು. ನಮ್ಮ ನಮ್ಮ ಸಂಘಟನೆಗಳ ಸೈದ್ಧಾಂತಿಕ ಬದ್ಧತೆ ಚಟುವಟಿಕೆಗಳನ್ನು ಉಳಿಸಿಕೊಂಡೂ, ನಮ್ಮ ಶತ್ರುವನ್ನು ಎದುರಿಸಲು ಬುದ್ಧ, ಬಸವ, ಅಂಬೇಡ್ಕರ್ ದಾರಿಯಲ್ಲಿ ಮುನ್ನಡೆಯುತ್ತಿರುವ ಏಕತೆಯ ಬೆಳವಣಿಗೆಯನ್ನು ಶ್ಲಾಘಿಸಿದರು.


ಚಂಪಾ ಸ್ನೇಹ ಜೀವಿ. ಧಾರವಾಡದ ಭಾಷೆಯ ಬನಿ ಅವರ ಮಾತು ಬರವಣಿಗೆಯಲ್ಲಿತ್ತು. ಸಂಕ್ರಮಣ ಮೂಲಕ ನೂರಾರು ಯುವಕರಿಗೆ ಬರೆಯಲು ಪ್ರೋತ್ಸಾಹ ನೀಡಿದರು. ಸಾವಿರಾರು ಜನರನ್ನು ಕನ್ನಡ ಹಾಗೂ ಜನಪರ ಸಾಹಿತ್ಯಕ ಚಳುವಳಿಗೆ ಎಳೆದು ತಂದರು. ಅವರ ಬರವಣಿಗೆಗಾಗಿ ಪಂಪಪ್ರಶಸ್ತಿ, ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳು ಅವರಿಗೆ ಲಭಿಸಿವೆ. ಹೋರಾಟಗಾರರಾದರೂ ಅಧಿಕಾರ ಸ್ಥಾನ ಪಡೆದು ಅದನ್ನು ಜನಪರವಾಗಿ ನಿರ್ಭಿಡೆಯಿಂದ ಚಲಾಯಿಸಿದ್ದಾರೆ. ಅವರು ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡರೆಂದು ಒಪ್ಪುವುದು ಕಷ್ಟ.




ಇಷ್ಟೆಲ್ಲಾ ಆಗಿಯೂ ಅವರು ಕೊನೆಯವರೆಗೂ ಕವಿಗಳೇ ಆಗಿದ್ದರು. ಹೂವು ಹಣ್ಣು ತಾರೆ, ಅರ್ಧಸತ್ಯದ ಹುಡುಗಿ, ಶಾಲ್ಮಲಾ ನನ್ನ ಶಾಲ್ಮಲಾ – ಹೀಗೆ ಅವರ ಈಚೆಗಿನ ಕವನಸಂಕಲಗಳಲ್ಲೂ ಅವರ ಪ್ರೀತಿ–ಪ್ರೇಮಗಳ ಆರ್ದ್ರತೆಯನ್ನು ಅನುಭವಿಸಬಹುದು.

ನಾವು ಹೂವಿನ ಬಗ್ಗೆ
ನಾವು ಹೆಣ್ಣಿನ ಬಗ್ಗೆ
ನಾವು ತಾರೆಯ ಬಗ್ಗೆ
ಹಾಡುವುದು ಬೇಡ –
ಅಂತ ಗೆಳೆಯ,
ನಾವು ಹೇಳುವುದು ಬೇಡ.
ಮರೆಯಲಾಗದ ಅವರ ಸಾಲುಗಳು ಇವು.

ಪ್ರೀತಿ ಇಲ್ಲದೆ
ನಾನು ಏನನ್ನೂ ಮಾಡಲಾರೆ
ದ್ವೇಷವನ್ನು ಕೂಡಾ.




Amrit Yatra of New India | Cover Story

Inspiration from History

Like spinning wheel and salt, the anniversaries and special occasions are becoming new symbols of the development journey

There has been great participation of the common man in the freedom movement. But many of them have been forgotten. With the purpose to shift the spotlight on these anonymous freedom fighters Amrit Mahotsav celebrations have been started.

Amrit Year

- Special occasions and birth anniversaries of great men were made an occasion for encouraging public participation.
- By linking the cleanliness movement with the 150th birth anniversary of Mahatma Gandhi, a people's movement was started with the resolve to make the country clean.
- 75 years of independence was named Amrit Mahotsav and a special committee was formed for organizing various events associated with it.
- Youth were motivated to write stories of unsung heroes.
- Bhagvan Birsa Munda's birth anniversary on 15th November was declared as Tribal Pride Day.
- The 125th birth anniversary of Netaji Subhas Chandra Bose was celebrated on a mass level.
- Special initiatives to remember the contribution of many great freedom fighters like Raja Suheldev, Raja Mahendra Pratap.

Golden Period...

- Like 1947, the year of independence, its 75th anniversary in 2022 is equally significant which builds a roadmap for the next 25 years to 2047 for achieving India's high ambitions and resolves.
- The freedom movement is not limited only to British rule, even before that India has gone through a period of servitude. An initiative to highlight the contribution of all those great men is on the radar.
- The contribution of every corner of the country, every section has to be highlighted. There are many people who ... country will be connected with their efforts.
- The Bhakti movement heralded the freedom struggle in India. During the Bhakti Yuga, the saints and mahants of this country, from every part of the country whether it is Swami Vivekananda, Chaitanya Mahaprabhu, Ramana Maharishi, were concerned about its spiritual consciousness. It served as the precursor to the revolt of 1857.
- ... awakening in the country. This spiritual consciousness is working to become the foundation for the reconstruction of the nation.

generation to inspire them. Taking forward this thinking, Prime Minister Modi has turned the celebrations of the 75 years of independence into a great devotion. The Prime Minister has raised the enthusiasm of the common man in the glorious saga of our freedom movement by attracting their mass participation. Just as Mahatma Gandhi made the spinning wheel and salt the symbol of the movement, in the same way, in the new India, there is emphasis on reviving history and legacy through associating with the great personalities of past. Whether it is

LOCALIZATION IS BEING PROMOTED IN THE MANAGEMENT OF THE OIL AND GAS SECTOR TO PROMOTE A SELF-RELIANT INDIA.

a resolve to make India clean by the 150th birth anniversary of Mahatma Gandhi or celebrating the birth anniversary of Lord Birsa Munda as Tribal Pride Day or commemorating 125th birth anniversary of Netaji Subhash Chandra Bose ...

1863ರಲ್ಲಿ ಸ್ವಾಮಿ ವಿವೇಕಾನಂದ ಹಾಗೂ 1879ರಲ್ಲಿ ಜನಿಸಿದ ರಮಣ ಮಹರ್ಷಿ ಇವರಿಬ್ಬರೂ 1857ರ ಬಂಡಾಯಕ್ಕೆ ಸ್ಫೂರ್ತಿದಾತರು ಎಂಬ ತೀರಾ ಹಾಸ್ಯಾಸ್ಪದ ಹೇಳಿಕೆ ನೀಡಿರುವ ಕೇಂದ್ರ ವಾರ್ತೆ ಮತ್ತು ಪ್ರಸಾರ ಸಚಿವಾಲಯ 'ಅನಾಮಿಕ ಸ್ವಾತಂತ್ರ್ಯ ಹೋರಾಟಗಾರರತ್ತ ಬೆಳಕು ಹರಿಸುವ ಉದ್ದೇಶದಿಂದ ಅಮೃತ ಮಹೋತ್ಸವ ಆಚರಣೆಗಳ್ನು ಆರಂಭಿಸಲಾಗಿದೆ' ಎಂದು ಪ್ರಕಟಿಸಿರುವುದು, ವಾಸ್ತವವಾಗಿ, ಬ್ರಿಟಿಷರೊಂದಿಗೆ ಶಾಮೀಲಾಗಿದ್ದ ಆರ್‌ಎಸ್‌ಎಸ್/ಹಿಂದುತ್ವ ಶಕ್ತಿಗಳನ್ನು ಸ್ವಾತಂತ್ರ್ಯ ಸಂಗ್ರಾಮದ 'ಹೀರೊ'ಗಳಂತೆ ಬಿಂಬಿಸುವ ಕಳ್ಳ ಮಾರ್ಗ. ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಪರಂಪರೆಯನ್ನು ಮುಂದೊಯ್ಯುತ್ತ ಎಲ್ಲ ಭಾರತೀಯರು ಹೆಚ್ಚು ಸಮಾನತೆ, ನ್ಯಾಯ ಮತ್ತು ಭಾರತೀಯ ಸಂವಿಧಾನ ಖಾತರಿಪಡಿಸಿರುವ ಭ್ರಾತೃತ್ವದತ್ತ ಮುಂದೆ ಸಾಗಬೇಕಾದರೆ ಭಾರತೀಯ ಗಣರಾಜ್ಯದ ಸ್ವರೂಪವನ್ನು ಬದಲಾಯಿಸುವ ಇಂತಹ ಕುಟಿಲ ಅಜೆಂಡಾವನ್ನು ಸೋಲಿಸಲೇಬೇಕು.

ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದ ವಿಕೃತ ಮರು-ಬರವಣಿಗೆಯ ಹುನ್ನಾರ

('ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ) ಅನು: ವಿಶ್ವ

ಭಾರತದ ಸ್ವಾತಂತ್ರ್ಯದ 75ನೇ ವರ್ಷಾಚರಣೆ–ಆಝಾದೀ ಕಾ ಅಮೃತ ಮಹೋತ್ಸವ್ ಆಚರಣೆ ಸಂಬಂಧ ಕೇಂದ್ರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಪ್ರಕಟಣೆಯನ್ನು ಪ್ರೆಸ್ ಇನ್‌ಫರ್ಮೇಶನ್ ಬ್ಯೂರೊ (ಪಿಐಬಿ) ಜನವರಿ 11ರಂದು ಬಿಡುಗಡೆ ಮಾಡಿದೆ. ಬ್ರಿಟಿಷ್ ಆಡಳಿತದಿಂದ ಸ್ವಾತಂತ್ರ್ಯಕ್ಕಾಗಿ ಭಾರತದ ಜನರು ಮಾಡಿದ ಮಹಾನ್ ಹೋರಾಟದ ಇತಿಹಾಸವನ್ನು ವಿರೂಪಗೊಳಿಸುವ ಹಾಗೂ ಅದರ ಮರು-ಬರವಣಿಗೆ ಮಾಡುವ ಮೋದಿ ಸರ್ಕಾರದ ಉದ್ದೇಶವನ್ನು ಈ ಪ್ರಕಟಣೆ ಬಟಾಬಯಲುಗೊಳಿಸುತ್ತದೆ.

'ಸ್ವಾತಂತ್ರ್ಯ ಹೋರಾಟವು ಬ್ರಿಟಿಷ್ ಆಡಳಿತದ ವಿರುದ್ಧ ಮಾತ್ರ ಸೀಮಿತವಾಗಿರಲಿಲ್ಲ. ಅದಕ್ಕೂ ಮುಂಚೆಯೂ ಭಾರತ ದಾಸ್ಯವನ್ನು ಅನುಭವಿಸಿತ್ತು' ಎಂದು ಪ್ರಕಟಣೆ ಹೇಳಿದೆ. ಈಗ ಸ್ಥಾಪಿತವಾಗಿರುವಂತೆ, ಭಾರತೀಯ ಉಪಖಂಡದ ಭೌಗೋಳಿಕ ನಕಾಶೆಯು ನಾನಾ ಅರಸೊತ್ತಿಗೆಗಳು ಹಾಗೂ ಬ್ರಿಟಿಷರು ಕರೆಯುತ್ತಿದ್ದಂತೆ 'ಪ್ರಿನ್ಸ್‌ಲಿ ಸ್ಟೇಟ್ಸ್' (ರಾಜ ಸಂಸ್ಥಾನ)ಗಳಾಗಿ ವಿಭಜನೆಗೊಂಡಿತ್ತು. ಬ್ರಿಟಿಷರನ್ನು ಒದ್ದೋಡಿಸಲು ಸ್ವಾತಂತ್ರ್ಯ ಚಳವಳಿ ಯಶಸ್ವಿಯಾದ ನಂತರ, ಇಂಥ 650ಕ್ಕೂ ಹೆಚ್ಚು ರಾಜ ಸಂಸ್ಥಾನಗಳನ್ನು ಭಾರತ ಒಕ್ಕೂಟದಲ್ಲಿ ತರಬೇಕಿತ್ತು. ಇದರ ಆಧಾರದಲ್ಲಿ ಸಂವಿಧಾನ ರಚನಾಸಭೆಯು ಭಾರತೀಯ ಸಂವಿಧಾನವನ್ನು ರಚಿಸಿತು. ದೇಶ 1947 ಆಗಸ್ಟ್ 15ರಂದು ಸ್ವಾತಂತ್ರ್ಯ ಗಳಿಸಿದ ಎರಡುವರೆ ವರ್ಷದ ನಂತರ, 1950ರಲ್ಲಿ ಅಂಗೀಕರಿಸಿದ ಸಂವಿಧಾನದ ಮೂಲಕ ಜಾತ್ಯತೀತ-ಪ್ರಜಾಸತ್ತಾತ್ಮಕ ಭಾರತ ಗಣರಾಜ್ಯ ರಚನೆಯನ್ನು ಘೋಷಿಸಲಾಯಿತು. ಬ್ರಿಟಿಷ್ ವಸಾಹತುಶಾಹಿಯನ್ನು ಯಶಸ್ವಿಯಾಗಿ ಸೋಲಿಸಿದ ನಂತರ ಭಾರತ ಸ್ವತಂತ್ರ ದೇಶವಾಯಿತು.

ಈ ಮಹಾನ್ ಸ್ವಾತಂತ್ರ್ಯ ಸಂಗ್ರಾಮದ ಭಾಗವಾಗಿರದಿದ್ದ ಆರ್‌ಎಸ್‌ಎಸ್ ಮತ್ತು ಹಿಂದುತ್ವ ಸಿದ್ಧಾಂತದ ಪೂರ್ವಜರು ನಮ್ಮ ಸ್ವಾತಂತ್ರ್ಯ ಸಾಧನೆಗೆ ಹಾಗೂ ಜಾತ್ಯತೀತ-ಜನತಾಂತ್ರಿಕ ಗಣರಾಜ್ಯ ನೀಡುವಲ್ಲಿ ಧರ್ಮ ತಾರತಮ್ಯವಿಲ್ಲದೆ ಎಲ್ಲ ಭಾರತೀಯರು ಮಾಡಿದ್ದ ಅಪಾರ ತ್ಯಾಗಬಲಿದಾನಗಳ ಬಗ್ಗೆ ಅಜ್ಞಾನಿಗಳಾಗಿದ್ದಾರೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಸ್ವಾಮಿ ವಿವೇಕಾನಂದ ಮತ್ತು ರಮಣ ಮಹರ್ಷಿ 1857ರ ಬಂಡಾಯ, ಅಂದರೆ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿಯಾಗಿದ್ದರು ಎಂದು ವಾರ್ತೆ ಮತ್ತು ಪ್ರಸಾರ ಸಚಿವಾಲಯ ಹೇಳಿದೆ. ಸ್ವಾಮಿ ವಿವೇಕಾನಂದ ಜನಿಸಿದ್ದು 1863ರಲ್ಲಿ ಹಾಗೂ ರಮಣ ಮಹರ್ಷಿ ಜನನವಾಗಿದ್ದು 1879ರಲ್ಲಿ. ಆದ್ದರಿಂದ ಇವರಿಬ್ಬರೂ 1857ರ ಬಂಡಾಯಕ್ಕೆ ಸ್ಫೂರ್ತಿದಾತರು ಎನ್ನುವುದು ತೀರಾ ಹಾಸ್ಯಾಸ್ಪದ ಎಂದು ಬೇರೆ ಹೇಳಬೇಕಾಗಿಲ್ಲ.

ಕುತ್ಸಿತ ಉದ್ದೇಶ-ಅಪಪ್ರಚಾರ

1857ರ 'ಘದರ್', ಭಾರತೀಯ ಜನತೆಯ ಒಂದು ಐಕ್ಯ ಬಂಡಾಯವಾಗಿತ್ತು. ಹಿಂದೂಗಳು ಮತ್ತು ಮುಸ್ಲಿಮರಿಬ್ಬರೂ ಅದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ತಾಂತ್ಯಾ ಟೋಪೆ ಮತ್ತಿತರ 1857ರ ಬಂಡಾಯದ ನಾಯಕರೊಂದಿಗೆ ಝಾನ್ಸಿ ರಾಣಿ ಲಕ್ಷ್ಮಿಬಾಯಿ, ಭಾರತವು ಬ್ರಿಟಿಷ್ ಆಡಳಿತದಿಂದ ಸ್ವತಂತ್ರವಾಗಿದೆ ಎಂದು ದೆಹಲಿಯ ಕೆಂಪು ಕೋಟೆಯಿಂದ ಘೋಷಿಸಿದ್ದರು. ಮೊಘಲ್ ಆಡಳಿತಗಾರ ಬಹಾದುರ್ ಷಾ ಝಫರ್‌ರನ್ನು ಸ್ವತಂತ್ರ ಭಾರತದ ಸಾರ್ವಭೌಮ ಎಂದು ಹೆಸರಿಸಿದ್ದರು. ಬಹಾದುರ್ ಷಾ ಝಫರ್‌ರನ್ನು ಆರ್‌ಎಸ್‌ಎಸ್ ಶಬ್ದಭಂಡಾರದಲ್ಲಿ ಅಪಹಾಸ್ಯದಿಂದ 'ಬಾಬರ್ ಕೀ ಔಲಾದ್' (ಬಾಬರ್‌ನ ಸಂತಾನ) ಎಂದು ಕರೆಯಲಾಗುತ್ತದೆ.

ಮುಸ್ಲಿಮರ ನರಹತ್ಯೆಗೆ ಧರ್ಮ ಸಂಸದ್‌ಗಳಲ್ಲಿ ಕರೆ ನೀಡುವುದು, ಮುಸ್ಲಿಂ ಮಹಿಳೆಯರನ್ನು ಗುರಿ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಅಶ್ಲೀಲ ಆ್ಯಪ್‌ಗಳನ್ನು ಹರಿಯಬಿಡುವುದು ಮತ್ತು ಮುಂಬರುವ ಅಸೆಂಬ್ಲಿ ಚುನಾವಣೆ 80% ಹಾಗೂ 20% ನಡುವಣ ಹೋರಾಟ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಹೇಳುವುದು (ಉತ್ತರ ಪ್ರದೇಶದಲ್ಲಿ ಮುಸ್ಲಿಂ ಜನಸಂಖ್ಯೆ ಸುಮಾರು 19% ಇದೆ) –ಇವೇ ಮೊದಲಾದವುಗಳ ಹಿನ್ನೆಲೆಯಲ್ಲಿ ನೋಡಿದರೆ ಈ ಎಲ್ಲ ಅಪಪ್ರಚಾರಗಳು ಭಾರತೀಯ ಗಣರಾಜ್ಯದ ಜಾತ್ಯತೀತ ಪ್ರಜಾತಾಂತ್ರಿಕ ಸ್ವರೂಪವನ್ನು ಬದಲಾಯಿಸುವ ಆರ್‌ಎಸ್‌ಎಸ್ ಮತ್ತು ಮೋದಿ ಸರ್ಕಾರದ ಕುತ್ಸಿತ ಉದ್ದೇಶವನ್ನು ಬಹಿರಂಗಪಡಿಸುತ್ತದೆ.

ಭಾರತೀಯ ಸಂವಿಧಾನ ಹೇಳಿರುವಂಥ ಜಾತ್ಯತೀತ ಪ್ರಜಾಸತ್ತಾತ್ಮಕ ಭಾರತ ಗಣರಾಜ್ಯದ ಸ್ಥಾನದಲ್ಲಿ ಉನ್ಮತ್ತ ಅಸಹನೆಯೇ ಜೀವಾಳವಾದ ಧರ್ಮಾಧಾರಿತ ಫ್ಯಾಸಿಸ್ಟ್ 'ಹಿಂದುತ್ವ ರಾಷ್ಟ್ರ' ಸ್ಥಾಪಿಸುವುದೇ ಈ ಹುನ್ನಾರವಾಗಿದೆ. ಇದು ಸ್ವಾತಂತ್ರ್ಯಕ್ಕಾಗಿ ಭಾರತೀಯ ಜನತೆ ಮಾಡಿದ ಮಹಾನ್ ಹೋರಾಟದ ಸಿದ್ಧಾಂತಕ್ಕೇ ತದ್ವಿರುದ್ಧವಾದುದಾಗಿದೆ.

'ಅನಾಮಿಕ ಸ್ವಾತಂತ್ರ್ಯ ಹೋರಾಟಗಾರರತ್ತ ಬೆಳಕು ಹರಿಸುವ ಉದ್ದೇಶದಿಂದ ಅಮೃತ ಮಹೋತ್ಸವ ಆಚರಣೆಗಳ್ನು ಆರಂಭಿಸಲಾಗಿದೆ' ಎಂದು ಪಿಐಬಿ ಪ್ರಕಟಣೆ ಹೇಳಿದೆ. ಆರ್‌ಎಸ್‌ಎಸ್/ಹಿಂದುತ್ವ ಶಕ್ತಿಗಳನ್ನು ಸ್ವಾತಂತ್ರ್ಯ ಸಂಗ್ರಾಮದ 'ಹೀರೊ'ಗಳಂತೆ ಬಿಂಬಿಸುವುದಕ್ಕಾಗಿ ಕಳ್ಳ ಮಾರ್ಗವಿದು. ವಾಸ್ತವವಾಗಿ ಈ ಶಕ್ತಿಗಳು ಬ್ರಿಟಿಷರೊಂದಿಗೆ ಶಾಮೀಲಾಗಿದ್ದರೆನ್ನುವುದು ಕಟು ಸತ್ಯ. ಆರ್‌ಎಸ್‌ಎಸ್‌ಗೆ ಸಹಾನುಭೂತಿ ಹೊಂದಿದವರು ಕೂಡ (ವಾಲ್ಟರ್ ಕೆ ಆ್ಯಂಡರ್‌ಸನ್ ಮತ್ತು ಶ್ರೀಧರ್ ಡಿ ದ್ಯಾಮ್ಲೆ 1987ರಲ್ಲಿ ಬರೆದ 'ಬ್ರದರ್‌ಹುಡ್ ಇನ್ ಸ್ಯಾಫ್ರನ್' ಕೃತಿ ಮುಂತಾದವು ಅವುಗಳಲ್ಲಿ ಪ್ರಮುಖವಾದವುಗಳು) ವಿಮೋಚನಾ ಸಮರದಲ್ಲಿ ಆರ್‌ಎಸ್‌ಎಸ್ ಹಾಜರಿ ಶೂನ್ಯವಾಗಿತ್ತು ಹಾಗೂ ಅದರ ಫಲವಾಗಿ ಅವರು ಬ್ರಿಟಿಷರಿಂದ ಲಾಭ ಪಡೆದುಕೊಂಡಿದ್ದರು ಎಂದು ಸವಿವರವಾಗಿ ಬರೆದಿದ್ದಾರೆ. 'ಸಂಘವು ಏನಿದ್ದರೂ ಕಾನೂನು ಚೌಕಟ್ಟಿನಲ್ಲೇ ಇತ್ತು. ವಿಶೇಷವಾಗಿ ಹೇಳಬೇಕೆಂದರೆ 1942 ಆಗಸ್ಟ್‌ನಲ್ಲಿ ಸ್ಫೋಟಗೊಂಡ ಗಲಭೆಗಳಲ್ಲಿ ಭಾಗವಹಿಸುವುದರಿಂದ ದೂರವೇ ಉಳಿದಿತ್ತು' ಎಂದು ಬಾಂಬೆ ಪ್ರಾಂತ್ಯದ ಗೃಹ ಇಲಾಖೆ 1942ರ ಕ್ವಿಟ್ ಇಂಡಿಯಾ ಚಳವಳಿ ವೇಳೆ ಹೀಗೆ ಟಿಪ್ಪಣಿ ಮಾಡಿತ್ತು (ಆ್ಯಂಡರ್‌ಸನ್ ಮತ್ತು ದ್ಯಾಮ್ಲೆ ಉಲ್ಲೇಖ; ಪುಟ 44). 'ಹಿಂದುತ್ವ ರಾಷ್ಟ್ರ' ಸ್ಥಾಪನೆಯ ತುಡಿತವೇ ಆರ್‌ಎಸ್‌ಎಸ್ ಬ್ರಿಟಿಷರ ಮಿತ್ರನೇ ಆಗಿ ಬಿಡುವಂತೆ ಮಾಡಿತ್ತು.

ಕುಟಿಲ ಅಜೆಂಡಾ


ಬ್ರಿಟಿಷರೊಂದಿಗೆ ತಾನು ಕೈ ಜೋಡಿಸಿದ ಬಗ್ಗೆ ಇಂಥ ಸ್ಥಾಪಿತ ದಾಖಲೆಗಳಿದ್ದರೂ ಆರ್‌ಎಸ್‌ಎಸ್ ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯೂನಿಸ್ಟರ ಪಾತ್ರದ ಬಗ್ಗೆ ಅವಿರತ ಅಪಪ್ರಚಾರ ನಡೆಸುತ್ತಿದೆ. ಕ್ವಿಟ್ ಇಂಡಿಯಾ ಆಂದೋಲನದಲ್ಲಿ ಕಮ್ಯೂನಿಸ್ಟರ 'ಪಾತ್ರ' ಏನೆಂಬುದನ್ನು ಸಾರಲು 1992 ಆಗಸ್ಟ್ 9ರಂದು ಆ ಚಳವಳಿಯ 50ನೇ ವಾರ್ಷಿಕೋತ್ಸವದ ಸಂದರ್ಭ ಭಾರತದ ಅಂದಿನ ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮಾ ಸಂಸತ್ತಿನ ಮಧ್ಯ ರಾತ್ರಿ ಅಧಿವೇಶನದಲ್ಲಿ ಹೇಳಿರುವುದೇ ದೊಡ್ಡ ಸಾಕ್ಷಿಯಾಗಿದೆ. 'ಕಾನ್ಪುರ, ಜಮ್ಷೆಡ್‌ಪುರ ಮತ್ತು ಅಹಮದಾಬಾದ್‌ನ ಗಿರಣಿಗಳಲ್ಲಿ ನಡೆದ ದೊಡ್ಡ ಪ್ರಮಾಣದ ಮುಷ್ಕರಗಳ ನಂತರ ಲಂಡನ್‌ನಲ್ಲಿರುವ ವಿದೇಶಾಂಗ ಸಚಿವರಿಗೆ (ಸೆಕ್ರಟರಿ ಆಫ್ ಸ್ಟೇಟ್) ದೆಹಲಿಯಿಂದ ಹೋದ 1942 ಸೆಪ್ಟೆಂಬರ್ 5ನೇ ದಿನಾಂಕದ ಪತ್ರವು ಭಾರತ ಕಮ್ಯೂನಿಸ್ಟ್ ಪಕ್ಷದ ಧೋರಣೆ ಬಗ್ಗೆ ವರದಿ ಮಾಡಿತ್ತು. ಅದು, ಅಂದರೆ ಕಮ್ಯೂನಿಸ್ಟ್ ಪಕ್ಷವು ಬ್ರಿಟಿಷ್-ವಿರೋಧಿ ಕ್ರಾಂತಿಕಾರಿಗಳನ್ನು ಹೊಂದಿದೆ ಎನ್ನುವುದು ಅದರ ಅನೇಕ ಸದಸ್ಯರ ವರ್ತನೆಯಿಂದ ಸ್ಪಷ್ಟವಾಗುತ್ತದೆ ಎಂದು ಆ ಪತ್ರದಲ್ಲಿ ಹೇಳಲಾಗಿತ್ತು' ಎಂದು ರಾಷ್ಟ್ರಪತಿ ಶರ್ಮಾ ನೆನಪಿಸಿದ್ದರು.

ಇದಕ್ಕಿಂತ ಹೆಚ್ಚಿಗೆ ಏನಾದರೂ ಹೇಳಬೇಕೇ?. ಸ್ವತಂತ್ರ ಭಾರತದ ಒಬ್ಬ ಚುನಾಯಿತ ರಾಷ್ಟ್ರಪತಿಯುವರು ಭಾರತೀಯ ಸಂಸತ್ತಿನಲ್ಲಿ ಅಧಿಕೃತ ಸಮಾರಂಭವೊಂದರಲ್ಲಿ ಮಾತನಾಡುವಾಗ 'ಕಮ್ಯೂನಿಸ್ಟರು ಸದಾ ಬ್ರಿಟಿಷ್-ವಿರೋಧಿ ಕ್ರಾಂತಿಕಾರಿಗಳಾಗಿದ್ದರು' ಎನ್ನುವ ಮೂಲಕ ವಿಚಾರವನ್ನು ಸುಸ್ಪಷ್ಟಪಡಿಸಿದ್ದಾರೆ.


ಭಾರತೀಯ ಗಣರಾಜ್ಯದ ಸ್ವರೂಪವನ್ನು ಬದಲಾಯಿಸುವ ಕುಟಿಲ ಅಜೆಂಡಾವನ್ನು ಸೋಲಿಸಲೇಬೇಕು. ಇದು ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಪರಂಪರೆಯನ್ನು ಮುಂದೊಯ್ಯುತ್ತ ಎಲ್ಲ ಭಾರತೀಯರು ಹೆಚ್ಚು ಸಮಾನತೆ, ನ್ಯಾಯ ಮತ್ತು ಭಾರತೀಯ ಸಂವಿಧಾನ ಖಾತರಿಪಡಿಸಿರುವ ಭ್ರಾತೃತ್ವದತ್ತ ಮುಂದೆ ಸಾಗಬೇಕಾದರೆ ಅತ್ಯಗತ್ಯ.

ಸ್ವತಂತ್ರ ಭಾರತದ ಸ್ವರೂಪವನ್ನು ಬದಲಾಯಿಸಲು ಪ್ರಯತ್ನಿಸುವ ಈ ಶಕ್ತಿಗಳನ್ನು 'ಇಂಡಿಯಾ, ಅಂದರೆ ಭಾರತ' ಕ್ಕಾಗಿ ಸೋಲಿಸಲೇಬೇಕು.

"ಧರ್ಮಸಂಸದ್"ಗಳು ಬೂಸ್ಟರ್ ಡೋಸ್‌ಗಳನ್ನು ಕಳಿಸಲು ಪ್ರಯತ್ನಿಸುತ್ತಿವೆ..



ವ್ಯಂಗ್ಯಚಿತ್ರ: ಅಲೋಕ್ ನಿರಂತರ್



ಉ.ಪ್ರ.: 80-20 ಮ್ಯಾಜಿಕ್ ಟ್ರಿಕ್

ಒಡೆದು ಆಳು

ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟ ಮತ್ತು ಚುನಾವಣಾ ಪರ್ಯಾಯ

ಚಿತ್ರ ಕೃಪೆ: ದಾನಿಶ್ ಸಿದ್ಧಿಕಿ



ಸಾಮ್ರಾಜ್ಯಶಾಹಿ ಮತ್ತು ಮೂರನೇ ಜಗತ್ತಿನ ರಾಷ್ಟ್ರಗಳ ಜನರ ನಡುವೆ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ತೀವ್ರಗೊಳ್ಳುತ್ತಿರುವ ವೈರುಧ್ಯಗಳ ಸಂದರ್ಭದಲ್ಲಿ ಭಾರತದಲ್ಲಿನ ಈ ಹೋರಾಟವು ವಿಶೇಷ ಮಹತ್ವವನ್ನು ಹೊಂದಿದೆ. ಸಂಪತ್ತನ್ನು ಸೃಷ್ಟಿಸುವ ಶಕ್ತಿಗಳ ಬೆಳೆಯುತ್ತಿರುವ ಹೋರಾಟಗಳ ಆಧಾರದಲ್ಲಿ ಬಿಜೆಪಿ ವಿರುದ್ಧದ ಪರ್ಯಾಯವೊಂದು ರಾಷ್ಟ್ರ ಮಟ್ಟದಲ್ಲಿ ರೂಪುಗೊಳ್ಳಲಿದೆ. ಆದ್ದರಿಂದ ರಾಷ್ಟ್ರೀಯ ರಾಜಕಾರಣದಲ್ಲಿ ಬಿಜೆಪಿಗೊಂದು ಪರ್ಯಾಯವನ್ನು ಚುನಾವಣಾ ಸಮರಕ್ಕಿಂತಲೂ ಹೆಚ್ಚಾಗಿ ಸಂಸದಿಯೇತರ ಹೋರಾಟಗಳಿಂದ ಕಟ್ಟಲು ಸಾಧ್ಯವಾಗುತ್ತದೆ. ಇದು, ಭಾರತವನ್ನು ಸಾಮ್ರಾಜಶಾಹಿ-ನಿರ್ದೇಶಿತ ನವ-ಉದಾರವಾದಿ ವ್ಯವಸ್ಥೆಗೆ ವಿರುದ್ಧದ ಪ್ರಮುಖ ಹೋರಾಟದ ಕೇಂದ್ರವನ್ನಾಗಿ ಮಾರ್ಪಡಿಸಲಿದೆ. ಈಗ ಮುಂದುವರಿಯುತ್ತಿರುವ ಆಂದೋಲನವು ಸಾಮ್ರಾಜ್ಯಶಾಹಿ ಶೋಷಣೆಯ ವಿರುದ್ಧ ಕಾರ್ಪೊರೇಟ್-ನಿರ್ದೇಶಿತ ನವ-ಉದಾರವಾದಿ ವ್ಯವಸ್ಥೆಯ ವಿರುದ್ಧ ಭಾರತದ ಒಂದು ಮಹತ್ವದ ಹೊಸ ಘಟ್ಟವಾಗಿ ಪರಿಣಮಿಸಲಿದೆ.

ಪಿ. ಕೃಷ್ಣಪ್ರಸಾದ್ ಎಐಕೆಎಸ್ ಹಣಕಾಸು ಕಾರ್ಯದರ್ಶಿಗಳು

ಅನು: ಟಿ. ಸುರೇಂದ್ರ ರಾವ್

ಭಾರತದಲ್ಲಿ ಈಗ ನಡೆಯುತ್ತಿರುವ ರೈತರ ಐಕ್ಯ ಹೋರಾಟವು ಭಾರತದ ಮತ್ತು ಜಾಗತಿಕವಾಗಿ ಕೂಡ ರಾಜಕೀಯ ವ್ಯಾಖ್ಯಾನವನ್ನೇ ಬದಲಾಯಿಸಿದೆ. ದೆಹಲಿ ಗಡಿಗಳಲ್ಲಿಯ ರೈತ ಹೋರಾಟದ ಗೆಲುವು ಭಾರತದಲ್ಲಿನ ಸಾಮ್ರಾಜ್ಯಶಾಹೀ ಜಾಗತೀಕರಣದ ಪ್ರಕ್ರಿಯೆಗೆ ಒಂದು ಗಮನಾರ್ಹವಾದ ಹಿನ್ನಡೆ ಉಂಟುಮಾಡಿದೆ. ಆದಕಾರಣ ಪ್ರಮುಖ ಆಳುವ ಪಕ್ಷವಾದ ಬಿಜೆಪಿ ಮತ್ತು ಅದರ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರೈತರ ಐಕ್ಯ ಹೋರಾಟಕ್ಕೆ ಮಣಿದಿರುವುದನ್ನು ಸಾಮ್ರಾಜ್ಯಶಾಹಿ– ಪರ ಮಾಧ್ಯಮಗಳು ತೀಕ್ಷ್ಣ ಟೀಕೆಗೆ ಒಳಪಡಿಸಿವೆ.

ರೈತರ ಐಕ್ಯ ಹೋರಾಟವು ತಾನೇ ತಾನಾಗಿ ಮೂಡಿ ಬಂದಿಲ್ಲ. ನವ–ಉದಾರವಾದಿ ನೀತಿಗಳ ವಿರುದ್ಧ ಭಾರತದಲ್ಲಿ ಮತ್ತು ಇಡೀ ವಿಶ್ವದಲ್ಲಿ ಕಾರ್ಮಿಕ ವರ್ಗ ಹಾಗೂ ರೈತಾಪಿ ವರ್ಗಗಳು ನಿರಂತರವಾಗಿ ಹಾಗೂ ಪ್ರಜ್ಞಾಪೂರ್ವಕವಾಗಿ ನಡೆಸಿದ ಹೋರಾಟಗಳ ಫಲದಿಂದ ಈ ಐಕ್ಯತೆ ಸಾಧ್ಯವಾಗಿದೆ. ಈ ಆರ್ಥಿಕ ಸುಧಾರಣೆಗಳನ್ನು ಭಾರತದಲ್ಲಿ 1991 ರಲ್ಲಿ ನರಸಿಂಹ ರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿತು. 1994 ರಲ್ಲಿ ವಿಶ್ವ ವ್ಯಾಪಾರ ಒಪ್ಪಂದ (ಡಬ್ಲ್ಯುಟಿಒ)ವು ಏರ್ಪಟ್ಟಿತು. ಈ ನವ–ಉದಾರವಾದಿ ನೀತಿಗಳ ವಿರುದ್ಧ ಕಾರ್ಮಿಕ ವರ್ಗ ಹಾಗೂ ಕಾರ್ಮಿಕ ಸಂಘಗಳ ಜಂಟೀ ವೇದಿಕೆಯು ಕಳೆದ ಮೂರು ದಶಕಗಳಿಂದ ದೃಢತೆಯಿಂದ ಹೋರಾಟಗಳನ್ನು ನಡೆಸಿದೆ. ಆ ನಾಯಕತ್ವದಲ್ಲಿ ಸುಮಾರು 20 ಅಖಿಲ ಭಾರತ ಮುಷ್ಕರಗಳನ್ನು ಸಂಘಟಿಸಲಾಗಿದೆ ಮತ್ತು ಇತ್ತೀಚಿನ ಮುಷ್ಕರಗಳನ್ನೂ ಒಳಗೊಂಡಂತೆ ಆ ಹೋರಾಟಗಳಿಗೆ ರೈತ ಚಳುವಳಿ ಅನೇಕ ಬಾರಿ ಸಕ್ರಿಯವಾಗಿ ಬೆಂಬಲ ನೀಡಿದೆ.

ತೀರ ಇತ್ತೀಚಿನವರೆಗೂ, ಒಂದು ವಿಭಾಗದ ರೈತಾಪಿ ಜನರಲ್ಲಿ, ಬಹಳ ಮುಖ್ಯವಾಗಿ ಶ್ರೀಮಂತ ರೈತರಲ್ಲಿ ಈ ಸುಧಾರಣೆಗಳು ತಮಗೆ ಭಾರಿ ಲಾಭ ತಂದುಕೊಡಬಹುದು ಎಂಬ ಒಂದು ಭ್ರಮೆ ಇತ್ತು. ಕಳೆದ ಮೂರು ದಶಕಗಳ ಅನುಭವಗಳು ಆ ಭ್ರಮೆಯನ್ನು ಹೋಗಲಾಡಿಸಿವೆ. ಈ ಹೊಸ ಜ್ಞಾನೋದಯವು ಐಕ್ಯ ಹೋರಾಟ ನಡೆಸಲು ಪ್ರೇರಣೆ ನೀಡಿದೆ ಮತ್ತು ಕಾರ್ಮಿಕ ವರ್ಗದ ಐಕ್ಯ ಚಳುವಳಿಯ ಬೆಂಬಲದಿಂದಾಗಿ ನವ–ಉದಾರವಾದಿ ಶಕ್ತಿಗಳ ವಿರುದ್ಧ ಅಸಾಧಾರಣವಾದ ಗೆಲುವನ್ನು ಸಾಧಿಸಲು ಶಕ್ಯವಾಗಿದೆ. ಇದೊಂದು ನಿರ್ಣಾಯಕವಾದ ಸಾಧನೆಯೇ ಸರಿ.

ಅಂತರ್ರಾಷ್ಟ್ರೀಯ ಮಟ್ಟದಲ್ಲಿ ವೈರುಧ್ಯಗಳು ತೀವ್ರಗೊಳ್ಳುತ್ತಿರುವ ಸಂದರ್ಭದಲ್ಲಿ

ಸಾಮ್ರಾಜ್ಯಶಾಹಿ ಮತ್ತು ಮೂರನೇ ಜಗತ್ತಿನ ರಾಷ್ಟ್ರಗಳ ಜನರ ನಡುವೆ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ತೀವ್ರಗೊಳ್ಳುತ್ತಿರುವ ವೈರುಧ್ಯಗಳ ಸಂದರ್ಭದಲ್ಲಿ ಭಾರತದಲ್ಲಿನ ಈ ಹೋರಾಟವು ವಿಶೇಷ ಮಹತ್ವವನ್ನು ಹೊಂದಿದೆ. ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯು ಒಂದು ವ್ಯವಸ್ಥೆಯಾಗಿ ದೊಡ್ಡ ಬಿಕ್ಕಟ್ಟನ್ನು ಎದುರಿಸುತ್ತಿದೆ ಮತ್ತು 2008 ರ ಜಾಗತಿಕ ಆರ್ಥಿಕ ಮಹಾ ಪತನದ ನಂತರ ಇನ್ನೂ ಹೆಚ್ಚಿನ ಆರ್ಥಿಕ ಹಿಂಜರಿತದಲ್ಲಿ ಸಿಲುಕಿದೆ. ಈ ಹಿಂಜರಿತವು ಇನ್ನೂ ತೀವ್ರಗೊಳ್ಳುತ್ತಿದೆ ಮತ್ತು ಇದು ಭಾರತದ ಮೇಲೂ ವಿಪರೀತ ಪರಿಣಾಮ ಬೀರಲಿದೆ. ಆರ್ಥಿಕ ವ್ಯವಸ್ಥೆಯ ಮೇಲೆ ಬಹಳ ಕೆಟ್ಟ ಪರಿಣಾಮ ಬೀರಿದೆ ಮತ್ತು ಆಳುವ ವರ್ಗಗಳ ಮೈತ್ರಿಕೂಟವು ಹೆಚ್ಚಿನ ಬಿಕ್ಕಟ್ಟನ್ನು ಎದುರಿಸುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಗಂಭೀರ ಹಣಕಾಸು ಸಂಪನ್ಮೂಲದ ಕೊರತೆಯನ್ನು ಎದುರಿಸುತ್ತಿದ್ದು, ಜನರ ಗಂಭೀರ ಸಮಸ್ಯೆಗಳಾದ ಹೆಚ್ಚುತ್ತಿರುವ ನಿರುದ್ಯೋಗ, ಲಂಗುಲಗಾಮಿಲ್ಲದ ಬೆಲೆ ಏರಿಕೆ, ಆಹಾರದ ಭದ್ರತೆಗೇ ಸಂಚಕಾರ ತರುತ್ತಿರುವ ಸಾರ್ವಜನಿಕ ಪಡಿತರ ವ್ಯವಸ್ಥೆ, ಸಾರ್ವತ್ರಿಕ ಆರೋಗ್ಯ ಹಾಗೂ ಶಿಕ್ಷಣ ಸೇವೆಗಳ ಅವ್ಯವಸ್ಥೆಗಳನ್ನು ಪರಿಹರಿಸಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಹಲವಾರು ರಾಜ್ಯ ಸರ್ಕಾರಗಳಿಗೆ ತಮ್ಮ ನೌಕರರಿಗೆ ಸರಿಯಾದ ಸಮಯಕ್ಕೆ ಸಂಬಳ ಮತ್ತು ನಿವೃತ್ತಿ ವೇತನ ನೀಡಲೂ ಕಷ್ಟವಾಗುತ್ತಿದೆ.

ರೈತ–ಕಾರ್ಮಿಕ ಐಕ್ಯತೆ ಮತ್ತು ವರ್ಗ ಹೋರಾಟ

ಈ ಹೋರಾಟದ ಅತ್ಯಂತ ಮಹತ್ವದ ಸಾಧನೆ ಏನೆಂದರೆ ಕಾರ್ಮಿಕ–ರೈತರ ಐಕ್ಯತೆ, ಬಹಳ ಮುಖ್ಯವಾಗಿ ಸ್ವಾತಂತ್ರ್ಯೋತ್ತರ ಭಾರತ ಎದುರಿಸುತ್ತಿರುವ ಕೃಷಿ ಸಮಸ್ಯೆಗಳಿಗೆ ಪರಿಹಾರ ಕಾಣುವಲ್ಲಿ ಉಂಟಾಗಿರುವ ಈ ಐಕ್ಯತೆಯು ಭಾರತದಲ್ಲಿ ಇನ್ನೂ ಗಟ್ಟಿಯಾಗುತ್ತಿದೆ. ಆದ್ದರಿಂದ ಸ್ವಾತಂತ್ರ್ಯಾನಂತರ ಮೊಟ್ಟ ಮೊದಲ ಬಾರಿಗೆ ರಾಷ್ಟ್ರೀಯ ರಾಜಕಾರಣದಲ್ಲಿ ಆಳುವ ವರ್ಗದ ಮೈತ್ರಿಕೂಟ ಮತ್ತು ಕಾರ್ಮಿಕರು ಹಾಗೂ ರೈತರ ಒಗ್ಗೂಡಿದ ಶಕ್ತಿಯ ನಡುವೆ ನೇರ ತಿಕ್ಕಾಟವನ್ನು ಕಾಣುತ್ತಿದ್ದೇವೆ. ಈ ತಿಕ್ಕಾಟವು ಅಥವಾ ವೈರುಧ್ಯವು ಭಾರತದ ಮುಂದಿನ ರಾಷ್ಟ್ರೀಯ ರಾಜಕಾರಣದ ದಿಕ್ಕನ್ನು ನಿರ್ಧರಿಸಲಿದೆ.

ಬಂಡವಾಳಶಾಹಿ ಅಭಿವೃದ್ಧಿ ಹಂತದಲ್ಲಿನ ಕಾರ್ಷಿಕ ಸುಧಾರಣೆಗಳನ್ನು ಈಡೇರಿಸದ ಕಾರಣದಿಂದಾಗಿ ಭಾರತದ ಕಾರ್ಷಿಕ ಬಿಕ್ಕಟ್ಟು ಪ್ರಮುಖವಾಗಿ ಮೂರು ಅಂಶಗಳಿಂದ ಉದ್ಭವಿಸಿದೆ. ಒಂದನೆಯದಾಗಿ, ಭೂಸುಧಾರಣೆಯ ಮೂಲಕ ಜಮೀನನ್ನು ವಿತರಣೆ ಮಾಡದಿರುವುದು; ಎರಡನೆಯದಾಗಿ, ಆಹಾರ ಸಂಸ್ಕರಣೆ ಮತ್ತು ಮೌಲ್ಯ ವರ್ಧನೆಗಾಗಿ ಕೃಷಿ ಆಧಾರಿತ ಉದ್ದಿಮೆಗಳನ್ನು ಸ್ಥಾಪನೆ ಮಾಡದಿರುವುದು; ಮತ್ತು ಮೂರನೆಯದಾಗಿ ಕೃಷಿ ಉತ್ಪನ್ನಗಳಿಗೆ ಪ್ರತಿಫಲದಾಯಕ ಬೆಲೆ, ಕೃಷಿ ಕೂಲಿಕಾರರಿಗೆ ಸುಸ್ಥಿರ ಉದ್ಯೋಗ ಹಾಗೂ ಕನಿಷ್ಠ ಕೂಲಿ ಖಾತ್ರಿಪಡಿಸುವ ಮೂಲಕ ಆಂತರಿಕ ಮಾರುಕಟ್ಟೆಯನ್ನು ಸೃಷ್ಟಿಮಾಡದಿರುವುದು.

ಭೂಸುಧಾರಣೆಯನ್ನು ಜಾರಿ ಮಾಡಿರುವಂತಹ ರಾಜ್ಯಗಳಲ್ಲಿ ಕೂಡ ಇನ್ನುಳಿದ ಎರಡು ಕಾರ್ಯಗಳನ್ನು ಸಮಗ್ರವಾಗಿ ಕೈಗೊಳ್ಳುವ ಕಾರ್ಯ ಹಾಗೆಯೇ ಉಳಿದಿದೆ. ಈ ಕಾರಣಗಳಿಂದಾಗಿ ಸ್ವದೇಶಿ ಹಾಗೂ ವಿದೇಶಿ ಕಾರ್ಪೊರೇಟ್ ಶಕ್ತಿಗಳು ಕೃಷಿ ವ್ಯಾಪಾರ ಹಾಗೂ ಕೃಷಿ ಸಂಸ್ಕರಣೆಯ ಕಾರ್ಯದಲ್ಲಿ ಪ್ರಾಬಲ್ಯ ಸಾಧಿಸಿವೆ ಮತ್ತು ನ್ಯಾಯಯುತ ಬೆಲೆ ಹಾಗೂ ಕನಿಷ್ಠ ಕೂಲಿಯನ್ನು ವಂಚಿಸುವ ಮೂಲಕ ರೈತರನ್ನು ಶೋಷಣೆ ಮಾಡುತ್ತಿವೆ. ರೈತರು ದಿವಾಳಿಯಾಗಲು, ಮೈತುಂಬಾ ಸಾಲ, ರೈತರ ಆತ್ಮಹತ್ಯೆ ಮತ್ತು ಗ್ರಾಮಗಳಿಂದ ಪಟ್ಟಣಗಳಿಗೆ ಕೂಲಿಗಾರರ ವಲಸೆ ಮುಂತಾದವುಗಳಿಗೆ ಇದು ಬಹು ಮುಖ್ಯ ಕಾರಣವಾಗಿದೆ.

ಕೋಮುವಾದಿ, ವಿಚ್ಛಿದ್ರಕಾರಿ ರಾಜಕೀಯಕ್ಕೆ ಸವಾಲು

ಕೃಷಿ ಸುಧಾರಣೆಗಳ ಮೂಲಕ ಕಾರ್ಪೊರೇಟ್ ಸುಲಿಗೆಯನ್ನು ತಡೆಯುವ ಬದಲು ಬಿಜೆಪಿ–ಆರ್.ಎಸ್.ಎಸ್ ನೇತೃತ್ವದ ಮೋದಿ ಸರ್ಕಾರವು ನವ–ಉದಾರವಾದಿ ಹಾಗೂ ಸಾಮ್ರಾಜ್ಯಶಾಹೀ ಶಕ್ತಿಗಳಿಗೆ ಶರಣಾಗಿದೆ ಮತ್ತು ಭಾರತದ ಕೃಷಿಯನ್ನು ಹೆಚ್ಚಿನ ಕಾರ್ಪೊರೇಟೀಕರಣದತ್ತ ನೂಕುತ್ತಿದೆ. ಬಿಜೆಪಿ–ಆರ್.ಎಸ್.ಎಸ್ ಕೂಟವು ತಮ್ಮ ಚರಿತ್ರೆಯಲ್ಲಿ ಎಂದೂ ಭೂಸುಧಾರಣೆ ಹಾಗೂ ಕೃಷಿ ಭೂಮಿಯನ್ನು ರೈತರಿಗೆ ಹಂಚುವುದರ ಪರ ಇರಲಿಲ್ಲ. ಬಿಜೆಪಿ ನೇತೃತ್ವದ ಯಾವ ರಾಜ್ಯ ಸರ್ಕಾರಗಳೂ ಈ ಸಮಸ್ಯೆಗಳನ್ನು ಪರಿಹರಿಸಿಲ್ಲ. ಇವತ್ತು, ರೈತರ ಬೆಳೆಗೆ ಪ್ರತಿಫಲದಾಯಕ ಬೆಲೆ ಹಾಗೂ ಕೃಷಿ ಕೂಲಿಕಾರರಿಗೆ ಸುಸ್ಥಿರ ಉದ್ಯೋಗದ ಜತೆ ಕನಿಷ್ಠ ಕೂಲಿಯನ್ನು ಖಾತ್ರಿಪಡಿಸುವುದು ಇಡೀ ರೈತಾಪಿ ಜನರ ಹಾಗೂ ಕಾರ್ಮಿಕ ವರ್ಗದ ಚಳುವಳಿಯ ಪ್ರಮುಖ ಬೇಡಿಕೆಗಳಾಗಿವೆ; ಜತೆಯಲ್ಲೇ, ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣಕ್ಕೆ ಎಡೆಮಾಡಿಕೊಡುವ ರಾಷ್ಟ್ರೀಯ ಆಸ್ತಿಗಳ ನಗದೀಕರಣ ಯೋಜನೆ (ನ್ಯಾಷನಲ್ ಮಾನಟೈಸೇಷನ್ ಪೈಪ್‌ಲೈನ್ ಪ್ರಾಜೆಕ್ಟ್) ತಡೆಯಬೇಕು ಎನ್ನುವುದೂ ಕೂಡ ಈ ಚಳುವಳಿಯ ಮುಖ್ಯ ಬೇಡಿಕೆಗಳಾಗಿವೆ. ಸಂಪತ್ತನ್ನು ಸೃಷ್ಟಿ ಮಾಡುವ ಮೂರು ಪ್ರಮುಖ ವರ್ಗಗಳಾದ ಕಾರ್ಮಿಕರು, ರೈತರು ಹಾಗೂ ಕೃಷಿ ಕೂಲಿಕಾರರರು ನವ–ಉದಾರವಾದಿ ಶಕ್ತಿಗಳ ವಿರುದ್ಧ ಹೋರಾಟವನ್ನು ಕೈಗೆತ್ತಿಕೊಳ್ಳಲು ಇಂದು ಒಗ್ಗೂಡಿದ್ದಾರೆ.

ಈ ರೈತರ ಒಗ್ಗಟ್ಟಿನ ಹೋರಾಟವು ಬಿಜೆಪಿ–ಆರ್.ಎಸ್.ಎಸ್.ನ ಕೋಮುವಾದಿ ಹಾಗೂ ವಿಚ್ಛಿದ್ರಕಾರಿ ರಾಜಕೀಯವನ್ನು ಪ್ರತಿರೋಧಿಸುವಲ್ಲಿ ಪರಿಣಾಮಕಾರಿ ಪ್ರಭಾವವನ್ನು ಬೀರುವುದರ ಮೂಲಕ ಮತ್ತೊಂದು ಮಹತ್ವಪೂರ್ಣ ಸಾಧನೆ ಮಾಡಿದೆ. ರೈತರು ಹಾಗೂ ಕಾರ್ಮಿಕರ ಒಗ್ಗಟ್ಟಿನ ಹೋರಾಟವು ನಿಜವಾದ ವರ್ಗ ಹಾಗೂ ಬದುಕಿನ ಸಮಸ್ಯೆಗಳನ್ನು ರಾಷ್ಟ್ರೀಯ ರಾಜಕಾರಣದ ಮುನ್ನೆಲೆಗೆ ತರುವಲ್ಲಿ ಯಶಸ್ವಿಯಾಗಿದೆ. ಈ ಹೋರಾಟವು ಕೆಲವು ಪ್ರದೇಶಗಳಲ್ಲಿ ಉತ್ಪಾದಕ ಶಕ್ತಿಗಳ ನಡುವೆ ಇರುವ ಜಾತಿ ಹಾಗೂ ಮತಧರ್ಮಗಳ ಬೇಧವನ್ನು ಮರೆಸಿ ಐಕ್ಯತೆಯನ್ನು ತರುವಲ್ಲಿ ಯಶಸ್ಸನ್ನು ಗಳಿಸಿದೆ. ಇದು ನಿಜಕ್ಕೂ ಯಾವುದೇ ಕಾರಣಕ್ಕೂ ಸಣ್ಣ ಸಾಧನೆಯೇನಲ್ಲ. ಇದರಿಂದ ನಾವು ಕಲಿಯುವ ಪಾಠವೇನೆಂದರೆ ಜನರ ಬದುಕಿನ ಸಮಸ್ಯೆಗಳ ಆಧಾರದಲ್ಲಿ ನಡೆಯುವ ವರ್ಗ ಹೋರಾಟಗಳು ಮಾತ್ರವೇ ಕೋಮುವಾದಿ ಹಾಗೂ ವಿಚ್ಛಿದ್ರಕಾರಿ ರಾಜಕೀಯವನ್ನು ಮಣಿಸಬಹುದು ಎಂಬುದೇ ಆಗಿದೆ.

ಬಿಜೆಪಿ ರಾಜಕಾರಣದ ಪ್ರಮುಖ ಅಂಶವಾದ

ಪುಟ 14 ನೋಡಿ









ದಲಿತರ ಮೇಲೆ ನಡೆಯುವ ಅಸ್ಪೃಶ್ಯತಾ ದೌರ್ಜನ್ಯ ಮತ್ತು ಜಾತಿ ತಾರತಮ್ಯದ ವಿರುದ್ಧ ಜಾಗೃತಿ ಮೂಡಿಸಲು ರಾಜ್ಯಾದ್ಯಂತ ಮಿಷನ್

ರಾಜ್ಯ ಸರ್ಕಾರಕ್ಕೆ ಸಿಪಿಐ(ಎಂ) 23ನೇ ರಾಜ್ಯ ಸಮ್ಮೇಳನದ ಒತ್ತಾಯ

ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತಾ ದೌರ್ಜನ್ಯಗಳು, ಜಾತಿಯ ಹೆಸರಿನಲ್ಲಿ ದೇಶದಾದ್ಯಂತ ದಲಿತರ ಮೇಲೆ ವ್ಯಾಪಕವಾಗಿ ನಡೆಯುತ್ತಿವೆ. ಹಾಗೆಯೇ ಕರ್ನಾಟಕ ರಾಜ್ಯದಲ್ಲಿಯೂ ಇಂತಹ ದೌರ್ಜನ್ಯಗಳು ಹೆಚ್ಚು ಕೆಟ್ಟದಾಗಿ ಆಚರಣೆಯಲ್ಲಿವೆ.

ಶೀಘ್ರದಲ್ಲೇ ಭಾರತದ 75 ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ವನ್ನು ಆಚರಿಸಲು ದೇಶದಲ್ಲಿ ಸಿದ್ಧತೆ ನಡೆಯುತ್ತಿದೆ.

ಈ ಸಂದರ್ಭದಲಿ, ಸಂವಿಧಾನದ ಅನುಚ್ಛೇದ 15 ರಲ್ಲಿ ನಮೂದಿಸಿರುವ ಅಸ್ಪೃಶ್ಯತಾ ಆಚರಣೆ ಮತ್ತು ಜಾತಿ ತಾರತಮ್ಯದ ರದ್ದತಿ ಕುರಿತಂತೆ ಜನ ಜಾಗೃತಿ ಗೊಳಿಸುವ ಸಲುವಾಗಿ, ತಕ್ಷಣವೇ ಜಾತಿ ಪದ್ದತಿಯ ಭಾಗವಾಗಿರುವ ಅಸ್ಪೃಶ್ಯತೆ ದೌರ್ಜನ್ಯ ಹಾಗೂ ಜಾತಿ ತಾರತಮ್ಯ ನಿರ್ಮೂಲನಾ ಅಭಿಯಾನದ ಮಿಷನ್ ಅನ್ನು ರಚಿಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ 23 ನೇ ಸಮ್ಮೇಳನವು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ.

ನಮ್ಮ ದೇಶದಲ್ಲಿ ಜಾತಿ ಎನ್ನುವುದು ವಾಸ್ತವ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಭಾರತೀಯ ಸಂವಿಧಾನವು ಅಸ್ಪೃಶ್ಯತೆಯನ್ನು ಆಚರಿಸುವುದು, ಇದರ ಹೆಸರಿನಲ್ಲಿ ದೌರ್ಜನ್ಯ ವೆಸಗುವುದು, ಅಪರಾಧ ಮತ್ತು ಕಾನೂನಿನಡಿಯಲ್ಲಿ ಶಿಕ್ಷಾರ್ಹ ಎಂದು ಘೋಷಿಸಿತು. ಹಾಗೆಯೇ, ಸಂವಿಧಾನವು ಎಲ್ಲಾ ನಾಗರಿಕರಿಗೆ ಅವರ ಜಾತಿ, ಧರ್ಮ, ಲಿಂಗ ಮತ್ತು ಜನಾಂಗೀಯತೆಯ ಹೊರತಾಗಿಯೂ ಸಮಾನತೆಯ ಹಕ್ಕನ್ನು ಖಾತರಿಪಡಿಸಿತು. ಈ ಎಲ್ಲಾ ಹಕ್ಕುಗಳು ಸಮಾಜದಲ್ಲಿನ ದಲಿತರು ಮತ್ತು ಇತರ ಹಿಂದುಳಿದ ವರ್ಗಗಳಲ್ಲಿ ಬಹಳಷ್ಟು ಭರವಸೆಯನ್ನು ಹುಟ್ಟು ಹಾಕಿದ್ದವು.

ಶತಮಾನಗಳ ಹಿಂದಿನ ಜಾತಿ ತಾರತಮ್ಯ, ಅಸ್ಪೃಶ್ಯತೆ ಮತ್ತು ಜಾತಿ ಆಧಾರಿತ ದೌರ್ಜನ್ಯಗಳು, ಸ್ವಾತಂತ್ರ್ಯ ಬಂದ ನಂತರದ ವರ್ಷಗಳಲ್ಲಿ ಕೊನೆಗೊಳ್ಳುತ್ತವೆ ಎಂದು ದಲಿತರು ದೇಶದ ಪ್ರಗತಿಪರರು ಭಾವಿಸಿದ್ದರು. ಆದರೆ ಅವರೆಲ್ಲರ ನಿರೀಕ್ಷೆ ಕನಸಾಗಿಯೇ ಉಳಿದಿದೆ ಎಂಬುದು ವಿಪರ್ಯಾಸ.

ಎನ್.ಸಿ.ಆರ್.ಬಿ.– ರಾಷ್ಟ್ರೀಯ ಅಪರಾಧ ದಾಖಲಾತಿ ಬ್ಯೂರೋ ಪ್ರಕಾರ, ಕಳೆದ 2017 ರಿಂದೀಚೆಗೆ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ದೇಶಾದ್ಯಂತ ಸುಮಾರು 1,92,900 ಪ್ರಕರಣಗಳಲ್ಲಿ, ಕರ್ನಾಟಕ ದಲ್ಲಿಯೇ 9512 ಪ್ರಕರಣಗಳು ದಾಖಲಾಗಿದೆ. ಕೋವಿಡ್–19 ರ ಲಾಕ್ ಡೌನ್ ಸಮಯದಲ್ಲಿ ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ಅಂದರೆ, ಸುಮಾರು ಶೇ.9.7 ರಷ್ಟು ಅಸ್ಪೃಶ್ಯತೆ ದೌರ್ಜನ್ಯಗಳು ಹೆಚ್ಚಳವಾಗಿರುವುದು ಅಧಿಕೃತ ವಾಗಿ ದಾಖಲಾಗಿವೆ. ಇದರಲ್ಲಿ ಅಖಿಲ ಭಾರತ ಮಟ್ಟದಲ್ಲಿ ಶಿಕ್ಷೆಯ ಪ್ರಮಾಣ ಶೇ 5.4 ರಷ್ಟಿದ್ದರೆ, ಕರ್ನಾಟಕದಲ್ಲಿ ಕೇವಲ ಶೇ.4.4 ರಷ್ಟು ಮಾತ್ರ. ದಕ್ಷಿಣ ಭಾರತದಲ್ಲಿಯೇ ಅತಿ ಕಡಿಮೆ ಇದಾಗಿದೆ.

ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ – ಅಮೃತ ಮಹೋತ್ಸವ ಆಚರಣೆ ಮಾಡುತ್ತಿರುವ ನಮ್ಮ ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲೂ ಜಾತಿ ತಾರತಮ್ಯವನ್ನು ವಿವಿಧ ರೀತಿಯಲ್ಲಿ ಅನುಸರಿಸಲಾಗುತ್ತಿರುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತ ಪರಿಸ್ಥಿತಿ. ಇದು ನಮ್ಮ ದೇಶದ ಗ್ರಾಮೀಣ

ಪುಟ 10 ನೋಡಿ

ಜಾತಿ ತಾರತಮ್ಯ, ಅಸ್ಪೃಶ್ಯತೆ ಮತ್ತು ದಲಿತರ ಮೇಲಿನ ದೌರ್ಜನ್ಯಗಳ ನಿರ್ಮೂಲನೆಗಾಗಿ ರಾಜ್ಯ ಮಟ್ಟದ ಮಿಷನ್ ರಚಿಸುವುದು ಜಾತಿ ತಾರತಮ್ಯದ ವಿರುದ್ಧದ ಹೋರಾಟಗಾರರಾದ ಡಾ. ಬಿ.ಆರ್. ಅಂಬೇಡ್ಕರ್, ಬಸವಣ್ಣ, ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ, ನಾರಾಯಣಗುರು, ಪೆರಿಯಾರ್, ಅಯ್ಯಂಕಾಳಿ, ಇಎಂಎಸ್, ಎಕೆ ಗೋಪಾಲನ್, ಮುಂತಾದ ಎಲ್ಲಾ ಸಾಮಾಜಿಕ ಹೋರಾಟಗಾರರಿಗೆ ನಿಜವಾದ ಅರ್ಥದಲ್ಲಿ ಗೌರವ ಅರ್ಪಿಸಿದಂತಾಗುತ್ತದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅರ್ಥಪೂರ್ಣ ಆಚರಣೆಯೂ ಆಗುತ್ತದೆ ಮತ್ತು ಸಂವಿಧಾನದ ಆಶಯವಾದ ಸಾಮಾಜಿಕ ನ್ಯಾಯವನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಸೂಕ್ತ ಮೈಲುಗಲ್ಲಾಗುತ್ತದೆ ಎಂದು ಗಂಗಾವತಿಯಲ್ಲಿ ಜನವರಿ 2ರಿಂದ 4 ರ ವರೆಗೆ ನಡೆದ ಸಿಪಿಐ(ಎಂ) 23ನೇ ರಾಜ್ಯ ಸಮ್ಮೇಳನ ಈ ಕುರಿತು ಅಂಗೀಕರಿಸಿದ ನಿರ್ಣಯ ಹೇಳಿದೆ. ಕಳೆದ ಸಂಚಿಕೆಯಲ್ಲಿ ಏಳು ನಿರ್ಣಯಗಳ ಪೂರ್ಣ ಪಾಟವನ್ನು ಪ್ರಕಟಿಸಲಗಿತ್ತು. ಈ ಸಂಚಿಕೆಯಲ್ಲಿ ಈ ನಿರ್ಣಯವೂ ಸೇರಿದಂತೆ ಇನ್ನೂ ಕೆಲವು ನಿರ್ಣಯಗಳನ್ನು ಮುಂದಿನ ಪುಟಗಳಲ್ಲಿ ಪ್ರಕಟಿಸಲಾಗಿದೆ.

ಮತದಾರ ಚೀಟಿಯೊಂದಿಗೆ ಆಧಾರ್ ಜೋಡಣೆ ಕಾಯ್ದೆಯ ದುಷ್ಟ ಅಜೆಂಡಾವನ್ನು ಬಯಲಿಗೆಳೆಯಬೇಕು

ಲೋಕಸಭೆಯಲ್ಲಿ ಚಳಿಗಾಲದ ಅಧಿವೇಶನದಲ್ಲಿ ತರಾತುರಿಯಲ್ಲಿ ಅಂಗೀಕರಿಸಲ್ಪಟ್ಟ ಮತ್ತು ಜನಪ್ರತಿನಿಧಿ ಕಾಯಿದೆಗೆ ತಿದ್ದುಪಡಿಯನ್ನು ಸುಗಮಗೊಳಿಸುವ 'ಚುನಾವಣಾ ಕಾನೂನುಗಳು(ತಿದ್ದುಪಡಿ) ಮಸೂದೆ, 2021', ಅನಲೈನ್ ಆಧಾರಿತ ದೂರದ ಇ–ಮತದಾನವನ್ನು ಅನುಷ್ಠಾನಗೊಳಿಸುವತ್ತ ಒಂದು ಹೆಜ್ಜೆ ಯಾಗಿದೆ, ಇದಕ್ಕೆ ಆಧಾರ್ ಪ್ರಾಥಮಿಕ ಗುರುತಾಗಿರುತ್ತದೆ. ಅದೇಸಮಯದಲ್ಲಿ, ಪ್ರಾಯೋಗಿಕವಾಗಿ, ಅದನ್ನು ಬಳಸಿದ ಸ್ಥಳಗಳಲ್ಲಿ ಆಯ್ದ ಮತದಾರರ ಹೆಸರುಗಳನ್ನು ಮತದಾರ ಪಟ್ಟಿಯಿಂದ ತೆಗೆದು ಹಾಕಲು ಅದು ಅನುವುಮಾಡಿಕೊಟ್ಟಿತು. ಇದನ್ನು ಮತ ದಾರರ ಫೋಟೋ ಗುರುತಿನ ಚೀಟಿ ದತ್ತಾಂಶಗಳನ್ನು ಗೂಢಚಾರಿಕೆ ದತ್ತಾಂಶ ಭಂಡಾರ(ಡಾಟಾ ಬೇಸ್) ದೊಂದಿಗೆ ಬೆರೆಸುವ ಮೂಲಕ ಮಾಡಲಾಗುತ್ತದೆ.

ಉದಾಹರಣೆಗೆ, 2018 ರ ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ, ಅಂತಹ ಒಂದು ಕ್ರಮದ ಪರಿಣಾಮವಾಗಿ ಅಂದಾಜು ಇಪ್ಪತ್ತು ಲಕ್ಷ ಮತದಾರರ ಹೆಸರುಗಳು ಕೈಬಿಟ್ಟು ಹೋಗುವಂತಾಯಿತು. 2021 ರ ಅಕ್ಟೋಬರ್ನಲ್ಲಿ ತೆಲಂಗಾಣ ರಾಜ್ಯದಲ್ಲಿ ಮತದಾನದ ಸಮಯದಲ್ಲಿ ಮುಖಗುರುತಿಸುವಿಕೆ, ಮತದಾರ ಗುರುತುಚೀಟಿ, ಆಧಾರ್ ಸರ್ಂಖ್ಯೆ ಮತ್ತು ಫೋನ್ ನಂಬರ್ ಬಳಸಿ ಸ್ಮಾರ್ಟ್ ಫೋನ್‌ಗಳೊಂದಿಗೆ ಇದೇ ರೀತಿಯ ಅಣಕು ಕಸರತ್ತನ್ನು ನಡೆಸಲಾಯಿತು. ಈ ವಿಧಾನವು "ರಹಸ್ಯ ಮತದಾನ"ದ ಅಭ್ಯಾಸವನ್ನು ಕೊಲ್ಲುತ್ತದೆ.

ಪುಟ 11 ನೋಡಿ



ಸರಕಾರದ ಆಹಾರ–ವಿರೋಧಿ ನೀತಿಯ ಬದಲಾವಣೆಗಾಗಿ ರಾಜ್ಯವ್ಯಾಪಿ ಹೋರಾಟಕ್ಕೆ ಕರೆ

ಜೀವನಾವಶ್ಯಕ ವಸ್ತುಗಳ ವಿಪರೀತ ಬೆಲೆ ಏರಿಕೆಯ ಕುರಿತು ಈ ಸಮ್ಮೇಳನ ಆಳವಾದ ಆತಂಕವನ್ನು ವ್ಯಕ್ತಪಡಿಸುತ್ತದೆ. ಅಗತ್ಯ ವಸ್ತುಗಳ ಬೆಲೆಗಳಲ್ಲಿ ನಿರಂತರ ಏರಿಕೆಯಾಗಿದೆ. ಅಕ್ಕಿ, ಗೋಧಿ, ಖಾದ್ಯ ತೈಲ, ಉಪ್ಪಿನ ಬೆಲೆ ಶೇ.20 ರಿಂದ ಶೇ.200 ರಷ್ಟು ಏರಿಕೆಯಾಗಿದ್ದು. ಕೆಲವು ತರಕಾರಿಗಳ ಬೆಲೆ ದುಪ್ಪಟ್ಟಾಗಿದೆ. ಬೇಳೆಕಾಳುಗಳ ಬೆಲೆ ದ್ವಿಗುಣಗೊಂಡಿದ್ದು, ತೊಗರಿ ಬೇಳೆ ಬೆಲೆ ಈಗ ಕಿಲೋಗೆ 130 ರೂ. ಗಿಂತ ಹೆಚ್ಚಾಗಿದೆ. ಸಕ್ಕರೆ ಗ್ರಾಹಕರಿಗೆ ಕಹಿಯಾಗಿದೆ. ಭಾರತದಲ್ಲಿನ ಕನಿಷ್ಠ 246 ಜಿಲ್ಲೆಗಳಲ್ಲಿ ಕೋಟಿಗಟ್ಟಲೆ ಗ್ರಾಮೀಣ ಕುಟುಂಬಗಳನ್ನು ಸಂಕಷ್ಟಕ್ಕೆ ದೂಡಿದ ಬರಗಾಲ/ನೆರೆಹಾವಳಿ ಮತ್ತು ಕಳೆದ ಎರಡು ವರ್ಷಗಳಿಂದ ಕೋವಿಡ್ ಮಹಾರೋಗದ ಕಾರಣದಿಂದ ತೊಂದರೆಗೊಳಗಾದ ಜನರ ಮೇಲೆ ಇನ್ನಷ್ಟು ಬರೆ ಎಳೆಯಲಾಗಿದೆ. ಭಾರತವು ಪ್ರಪಂಚದ ಯಾವುದೇ ದೇಶಗಳಿಗಿಂತ ಹೆಚ್ಚು ಆಹಾರದಿಂದ ವಂಚಿತ ಮತ್ತು ಅಪೌಷ್ಟಿಕತೆಯನ್ನು ಹೊಂದಿರುವ ಜನರನ್ನು ಹೊಂದಿದೆ ಮತ್ತು ವಿಶ್ವಸಂಸ್ಥೆಯು ಸಂಗ್ರಹಿಸಿದ 2021 ರ ವಿಶ್ವ ಹಸಿವಿನ ಸೂಚ್ಯಂಕಕ್ಕೆ ಸಂಬಂಧಿಸಿದಂತೆ 116 ದೇಶಗಳ ಪೈಕಿ 101ನೇ ಸ್ಥಾನದಲ್ಲಿದೆ. ಆಹಾರದ ಬೆಲೆಯಲ್ಲಿನ ಪ್ರಸ್ತುತ ಏರಿಕೆಯು, ಮುಖ್ಯವಾಗಿ ಬಹುಪಾಲು ದುಡಿಯುವ ಜನರನ್ನು ವಿಶೇಳವಾಗಿ ಬಡ ಮಹಿಳೆಯರು ಮತ್ತು ಮಕ್ಕಳನ್ನು ವ್ಯಾಪಕವಾಗಿ ಆಹಾರದ ಹಕ್ಕಿನ ಅವಕಾಶ ದಿಂದ ಹೊರಹಾಕುತ್ತದೆ. ಇದು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತಿದೆ.

ಬೆಲೆ ಏರಿಕೆಗೆ ಕೇಂದ್ರ ಸರ್ಕಾರದ ನೀತಿಗಳೇ ಕಾರಣವೆಂದು ಈ ಸಮ್ಮೇಳನ ಖಚಿತವಾಗಿ ಅಭಿಪ್ರಾಯ ಪಡುತ್ತದೆ. ಪೆಟ್ರೋಲಿಯಮ್ ವಸ್ತುಗಳ ಮೇಲಿನ ಸುಂಕ/ತೆರಿಗೆಯನ್ನು ನಿರಂತರವಾಗಿ ಕೇಂದ್ರ ಸರಕಾರ ಏರಿಸುತ್ತಿರುವುದು; ಅಗತ್ಯ ಸರಕುಗಳಲ್ಲಿನ ಮುಂಗಡ– ವ್ಯಾಪಾರವನ್ನು ನಿಷೇಧಿಸಲು ಒಪ್ಪದಿರುವುದು; ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಿರುವುದು ಮತ್ತು ಕಳೆದ ಎರಡು ವರ್ಷಗಳಲ್ಲಿ ರಾಜ್ಯಗಳಿಗೆ ಎಪಿಎಲ್ ವಿಭಾಗಗಳಿಗೆ ಆಹಾರ ಧಾನ್ಯದ ಹಂಚಿಕೆಯಲ್ಲಿ ಶೇಕಡಾ 73 ರಷ್ಟು ಕಡಿತಗೊಳಿಸಿದ್ದು; ಕಾರ್ಪೋರೇಟ್ ಲಾಬಿಗಳ ಒತ್ತಡದಲ್ಲಿ, ಆಹಾರಧಾನ್ಯ ಮತ್ತು ಸಕ್ಕರೆ ವ್ಯಾಪಕ ರಫ್ತಿಗೆ ಅನುಮತಿ ನೀಡಿದ್ದು, ಇದರಿಂದಾಗಿ ಕೊರತೆಯಾಗಿ ಬೆಲೆಗಳು ಹೆಚ್ಚಿವೆ.

ಮೂಲಸೌಕರ್ಯದಲ್ಲಿ ಸಾರ್ವಜನಿಕ ಹೂಡಿಕೆ, ಕೈಗೆಟುಕುವ ಸಾಲ, ಬೀಜಗಳು, ಲಾಗವಾಡುಗಳ ಲಭ್ಯತೆ ಮತ್ತು ವಿಸ್ತರಣಾ ಸೇವೆಗಳು ಮತ್ತು ರೈತರಿಗೆ ಲಾಭದಾಯಕ ಬೆಂಬಲ ಬೆಲೆಗಳ ಖಚಿತ ಪಡಿಸುವ ಮೂಲಕ – ಧಾನ್ಯಗಳು, ಕಬ್ಬು, ಬೇಳೆಕಾಳುಗಳು ಮತ್ತು ತೈಲ ಸೇರಿದಂತೆ ವಿವಿಧ ಬೆಳೆಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಖಚಿತಪಡಿಸಿಕೊಳ್ಳಲು ಸರಕಾರದ ನೀತಿಗಳು ವಿಫಲವಾಗಿದೆ. ಇದರಿಂದಾಗಿ ಕೊರತೆ ಹೆಚ್ಚಿ, ಆಮದುಗಳ ಮೇಲೆ ಅವಲಂಬನೆಯನ್ನು ಉಂಟುಮಾಡುತ್ತದೆ.

ಈ ನೀತಿಗಳಲ್ಲಿ ಬದಲಾವಣೆ ಅಗತ್ಯವೆಂದು ಸಮ್ಮೇಳನ ಒತ್ತಾಯಿಸುತ್ತದೆ.

ಜಾಗತಿಕವಾಗಿ ಅಂಗೀಕರಿಸಲ್ಪಟ್ಟ 'ಕುಟುಂಬದ

ಪುಟ 10 ನೋಡಿ

ಪುಟ 9 ರಿಂದ

ಅಸ್ಪೃಶ್ಯತಾ ದೌರ್ಜನ್ಯ ಮತ್ತು ಜಾತಿ ತಾರತಮ್ಯದ ವಿರುದ್ಧ ಜಾಗೃತಿ ಮಿಷನ್

ಪ್ರದೇಶಗಳಲ್ಲಿ ಮಾತ್ರವಲ್ಲ, ನಗರ ಪ್ರದೇಶಗಳಲ್ಲಿಯೂ ದೊಡ್ಡ ಪ್ರಮಾಣದಲ್ಲಿ ಪ್ರಚಲಿತದಲ್ಲಿದೆ.

ದಲಿತರಿಗೆ ಜಾತಿಯ ಹೆಸರಿನಲ್ಲಿ ಸಾಮಾಜಿಕವಾಗಿ ಮಾತ್ರ ಬಹಿಷ್ಕಾರ ಹೇರುತ್ತಿಲ್ಲ, ಜೊತೆಗೆ ಆರ್ಥಿಕವಾಗಿಯೂ ನಿರ್ಬಂಧ ಹೇರಲಾಗುತ್ತಿದೆ. ಬಡ ದಲಿತ ಸಮುದಾಯ, ಈ ತಾರತಮ್ಯದ ಕೆಟ್ಟ ಪರಿಣಾಮಗಳನ್ನು ಎದುರಿಸುತ್ತಿದ್ದಾರೆ.

ಮಾತ್ರವಲ್ಲದೆ, ಇದರೊಂದಿಗೆ, ಆರ್ಥಿಕವಾಗಿ ಉತ್ತಮವಾಗಿರುವ, ಮಧ್ಯಮ ವರ್ಗಗಳಾಗಿರುವ ವಿದ್ಯಾವಂತ ದಲಿತ ವಿಭಾಗಗಳು ಮತ್ತು ಉನ್ನತ ಸ್ಥಾನದಲ್ಲಿರುವ ದಲಿತರು ಸಹ ಕೆಲವೊಮ್ಮೆ ಈ ಅಮಾನವೀಯ ಜಾತಿ ಅಸ್ಪೃಶ್ಯತೆಯ ಆಚರಣೆಗೆ ಬಲಿಯಾಗುತ್ತಿದ್ದಾರೆ ಎಂದು ಸುಖದೇವ್ ಥೋರತ್ ರ ಸಮೀಕ್ಷೆಯು ಸಾಭೀತುಪಡಿಸಿದೆ.

ಶಿಕ್ಷಣದ ವಂಚನೆಯಿಂದಾಗಿ ದಲಿತರು ಹಳ್ಳಿಗಳನ್ನು, ನಗರಗಳನ್ನು ಸ್ವಚ್ಛಗೊಳಿಸುವ ಉದ್ಯೋಗದಲ್ಲಿ ಮಾತ್ರ ಹೆಚ್ಚಾಗಿ ಸಕ್ರಿಯರಾಗಿ ದುಡಿಯುತ್ತಿದ್ದಾರೆ. ಎಲ್ಲಾ ದಲಿತರು ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಕೆಲಸಗಳನ್ನು ಮಾಡುತ್ತಿಲ್ಲ ನಿಜ, ಆದರೆ, ಎಲ್ಲಾ ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ಕೆಲಸ ಮಾಡುತ್ತಿರುವವರು ದಲಿತರು ಎಂಬ ವಾಸ್ತವ ಸತ್ಯವನ್ನು ಮಾತ್ರ ಮರೆಯಬಾರದು. ದಲಿತರು ಭಾರತ ದೇಶವನ್ನು ನಿಜ ಅರ್ಥದಲ್ಲಿ ಸ್ವಚ್ಛವಾಗಿಡುತ್ತಿದ್ದಾರೆ–ಸ್ವಚ್ ಭಾರತ್ ನಿರ್ಮಾಣ ಮಾಡುವವರು ಇವರೇ ಆಗಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು.

ಕೃಷಿ ಕೂಲಿಕಾರರು ಮತ್ತು ಅಸಂಘಟಿತ ಕಾರ್ಮಿಕರಾಗಿ ದಲಿತರ ಕೆಲಸ ದೇಶದ ಆರ್ಥಿಕ ಬೆಳವಣಿಗೆಗೆ ಅನಿವಾರ್ಯವಾಗಿದೆ. ಇನ್ನೂ, ಸಾಮಾಜಿಕ ಆಚರಣೆಗಳಿಗೆ ಬಂದಾಗ ದಲಿತರು ಹೆಚ್ಚಿನ ಅಮಾನವೀಯ ದೌರ್ಜನ್ಯಗಳು ಮತ್ತು ತಾರತಮ್ಯಕ್ಕೆ ತುತ್ತಾಗುತ್ತಾರೆ. ಮೇಲ್ಜಾತಿಯವರಂತೆ ಅವರು ಅದೇ ಬಾವಿ ಮತ್ತು ಕೆರೆಗಳಿಂದ ನೀರು ಸೇದಬಾರದು. ಚಪ್ಪಲಿಯೊಂದಿಗೆ ನಡೆಯಬಾರದು, ಪೇಟಾಗಳನ್ನು ಧರಿಸಬಾರದು, ಕೆಲವು ಬೀದಿಗಳಲ್ಲಿ ನಡೆಯಬಾರದು, ಹೋಟಲ್ ಗಳಲ್ಲಿ ಒಂದೇ ಲೋಟದಿಂದ ಕುಡಿಯಬಾರದು ಮತ್ತು ಒಂದೇ ಮೇಜಿನ ಮೇಲೆ ಕುಳಿತುಕೊಳ್ಳಬಾರದು. ದೇವಸ್ಥಾನಗಳಿಗೆ ಪ್ರವೇಶವಿಲ್ಲ. ಊಟ ಬಡಿಸುವಾಗ ಪಂಕ್ತಿ ಭೇದ, ಯುವ ದಲಿತರು ಮೀಸೆ ಬಿಡುವ ಆಗಿಲ್ಲ. ಅವರಿಗೆ ಬಾಡಿಗೆಗೆ ಮನೆ ಕೊಡಲ್ಲ. ಹೀಗೆ ನಮ್ಮ ರಾಜ್ಯದಲ್ಲಿ 54 ಕ್ಕೂ ಹೆಚ್ಚು ಅಮಾನವೀಯ ಅಸ್ಪೃಶ್ಯತೆ ಆಚರಣೆಗಳು ಜೀವಂತವಾಗಿವೆ.

ಪ್ರತ್ಯೇಕತೆಯ ತಾರತಮ್ಯದ ಗೋಡೆಗಳನ್ನು ನಿರ್ಮಿಸಲಾಗಿದೆ. ಪ್ರತಿ ಹಳ್ಳಿಗಳಲ್ಲೂ ಇವರ ವಾಸ ಊರಿನ ಆಚೆ, ನಿಂದನೆಗಳನ್ನು ಮಾಡಲಾಗುತ್ತದೆ. ಉನ್ನತ ಸ್ಥಾನದಲ್ಲಿರುವ ಕೆಲವೇ ದಲಿತರು ಅವಮಾನದಿಂದ ಬದುಕುತ್ತಿದ್ದಾರೆ. ಐಎಎಸ್ ಐಪಿಎಸ್ ಅಧಿಕಾರಿಗಳು ಅವಮಾನ ತಾಳಲಾರದೆ ಉದ್ಯೋಗ ತ್ಯಜಿಸುತ್ತಿದ್ದಾರೆ. ದಲಿತ ನ್ಯಾಯಾಧೀಶರು ನಿವೃತ್ತರಾದರೆ ಅಥವಾ ವರ್ಗಾವಣೆಯನ್ನು ಪಡೆದರೆ ಮತ್ತು ಅವರ ಸ್ಥಾನದಲ್ಲಿ ಮೇಲ್ಜಾತಿಯ ನ್ಯಾಯಾಧೀಶರನ್ನು ನೇಮಿಸಿದಾಗ, ದಲಿತ ನ್ಯಾಯಾಧೀಶರು ಕುಳಿತುಕೊಳ್ಳುವ ಆಸನವನ್ನು ಶುದ್ಧೀಕರಣಕ್ಕೆ ಒಳಪಡಿಸಲಾಗುತ್ತದೆ. ಮದುವೆಗಳಲ್ಲಿ ದಲಿತ ಚುನಾಯಿತ ಪ್ರತಿನಿಧಿಗಳು ಕೂಡ ತಮ್ಮ ಮೇಲ್ಜಾತಿಯ ಸಹವರ್ತಿಗಳೊಂದಿಗೆ ಕುಳಿತು ಊಟ ಮಾಡುವಂತಿಲ್ಲ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ದಲಿತ ವಿದ್ಯಾರ್ಥಿಗಳಿಗೆ ಅವರ ಜಾತಿಯ ಹೆಸರಿನಲ್ಲಿ ಕಿರುಕುಳ ನೀಡಲಾಗುತ್ತಿದೆ. ಯಾವುದೇ ಪರಿಹಾರ ಕೋರ್ಸ್ಗಳನ್ನು ನಡೆಸಲಾಗುವುದಿಲ್ಲ ಮತ್ತು ಕೆಲವೊಮ್ಮೆ, ಅವರಿಗೆ ಉದ್ದೇಶಪೂರ್ವಕವಾಗಿ ಕಡಿಮೆ ಅಂಕಗಳನ್ನು ನೀಡಲಾಗುತ್ತದೆ. ಹಲವು ಬಾರಿ ಫೇಲ್ ಮಾಡುತ್ತಾರೆ. ದಲಿತರ ಮಹಿಳೆಯರು ಅಡುಗೆ ಮಾಡುತ್ತಾರೆ ಎಂಬ ಕಾರಣದಿಂದಾಗಿ, ಶಾಲಾ ಮಕ್ಕಳು ಮಧ್ಯಾಹ್ನ ಮಿಡ್ ಮೀಲ್ಸ್ ಅನ್ನು ತಿನ್ನುವುದಿಲ್ಲ. ದಲಿತರು ತಮ್ಮ ದೈನಂದಿನ ಜೀವನದಲ್ಲಿ ಎದುರಿಸುತ್ತಿರುವ ಅಸಂಖ್ಯಾತ ರೀತಿಯ ತಾರತಮ್ಯದ ಕೆಲವು ಸಣ್ಣ ಉದಾಹರಣೆಗಳು ಮಾತ್ರ ಇವು.

ದಲಿತರು ಧೈರ್ಯ ಮಾಡಿ ಈ ತಾರತಮ್ಯ ಆಚರಣೆಗಳ ವಿರುದ್ಧ ದೂರು ನೀಡಿದಾಗ, ಹಲವು ಬಾರಿ ಪೊಲೀಸರು ಪ್ರಕರಣಗಳನ್ನು ದಾಖಲಿಸಲು ನಿರಾಕರಿಸುತ್ತಾರೆ. ಪ್ರಕರಣಗಳು ದಾಖಲಾದಾಗ ತನಿಖೆ ಸರಿಯಾಗಿ ನಡೆಯುವುದಿಲ್ಲ. ನ್ಯಾಯಾಲಯದ ಮೆಟ್ಟಿಲೇರುವ ಕೆಲವು ಪ್ರಕರಣಗಳನ್ನು ಸಾಕ್ಷ್ಯಾಧಾರಗಳ ಕೊರತೆಯ ಹೆಸರಿನಲ್ಲಿ ವಜಾಗೊಳಿಸಲಾಗುತ್ತದೆ. ಅನೇಕ ರಾಜ್ಯಗಳ ಅಸೆಂಬ್ಲಿಗಳಂತಹ ಶಾಸಕಾಂಗಗಳು ಮತ್ತು ಸಂಸತ್ತು ಕೂಡ ದಲಿತರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಲು ಮತ್ತು ಪರಿಹರಿಸಲು ಕಡಿಮೆ ಪ್ರಾಮುಖ್ಯತೆಯನ್ನು ನೀಡುತ್ತವೆ.

ಈ ಹಿನ್ನೆಲೆಯಲ್ಲಿ ಸಮಾಜವನ್ನು ಸಂಪೂರ್ಣ ಜಾತಿ ಅಸ್ಪೃಶ್ಯತೆ ಮತ್ತು ತಾರತಮ್ಯ ದಿಂದ ಸ್ವಚ್ಛಗೊಳಿಸಬೇಕಾದ ಅಗತ್ಯವಿದೆ. ರಾಜ್ಯ ಮತ್ತು ದೇಶದಲ್ಲಿ ಜಾತಿ ಪಕ್ಷಪಾತ ತೊಲಗಬೇಕು. ಇದಕ್ಕಾಗಿ ಸಹಜವಾಗಿಯೇ ಆರ್ಥಿಕ ಸಂಬಂಧಗಳಲ್ಲಿ ಬದಲಾವಣೆ ಅಗತ್ಯವಿದೆ. ಆದರೆ ಇದೊಂದೆ ಮಾರ್ಗ ಸಾಕಾಗುವುದಿಲ್ಲ. ಅಸ್ಪೃಶ್ಯತೆ, ಜಾತಿ ತಾರತಮ್ಯದ ಅಮಾನವೀಯ ಆಚರಣೆಗಳ ವಿರುದ್ಧ ಜನರಿಗೆ ಶಿಕ್ಷಣ ನೀಡಲು ವ್ಯಾಪಕ ಮತ್ತು ತೀವ್ರವಾದ ಅಭಿಯಾನವನ್ನು ಪ್ರಾರಂಭಿಸಬೇಕು.

ಸರ್ಕಾರವು ಈಗಾಗಲೇ, ಅಪೌಷ್ಟಿಕತೆಯನ್ನು ನಿರ್ಮೂಲನೆ ಮಾಡಲು, ಆರೋಗ್ಯ ಸಂರಕ್ಷಣೆಯನ್ನು ಸುಧಾರಿಸಲು, ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಮತ್ತು ನೈರ್ಮಲ್ಯ ಸ್ಥಿತಿಯನ್ನು ಸುಧಾರಿಸಲು ವಿವಿಧ ರೀತಿಯ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದೆ. ಈ ಎಲ್ಲಾ ಕಾರ್ಯಾಚರಣೆಗಳು ಜನರ ಮೇಲೆ ಸ್ವಲ್ಪ ಮಟ್ಟದ್ದಲ್ಲಾದರೂ, ಪರಿಣಾಮ ಬೀರಿವೆ. ಜಾತಿ ಅಸ್ಪೃಶ್ಯತೆ ಮತ್ತು ತಾರತಮ್ಯದ ವಿರುದ್ಧ ಇದೇ ರೀತಿಯ ಕಾರ್ಯಾಚರಣೆಯನ್ನು ಪ್ರಾರಂಭಿಸಬೇಕು.

ಪೋಲಿಯೊ ದೇಹವನ್ನು ಊನಗೊಳಿಸುವಂತೆ ಜಾತಿ ತಾರತಮ್ಯ ನಮ್ಮ ಸಮಾಜವನ್ನು ಊನಗೊಳಿಸುತ್ತದೆ. ನಮ್ಮ ದೇಶವು ತನ್ನ ಎಲ್ಲಾ ಸಂಪನ್ಮೂಲಗಳನ್ನು ಅದರ ಪ್ರಗತಿ ಮತ್ತು ಅಭಿವೃದ್ಧಿಗೆ ಬಳಸಿಕೊಳ್ಳಲು ಜಾತಿ ವ್ಯವಸ್ಥೆ ಅನುಮತಿಸುವುದಿಲ್ಲ. ಈ ಅಪಾಯದ ವಿರುದ್ಧ ತಕ್ಷಣವೇ ಹೋರಾಡುವುದು ಬಹಳ ಮುಖ್ಯ. ಆದ್ದರಿಂದ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯದ ವಿರುದ್ಧ ಹೋರಾಡುವ ಮಿಷನ್ ಅನ್ನು ಸರ್ಕಾರವೇ ಪ್ರಾರಂಭಿಸಬೇಕು. ಸರ್ಕಾರವು ಈ ಮಿಷನ್‌ಗೆ ಅಗತ್ಯವಾದ ಹಣವನ್ನು ನಿಗದಿಪಡಿಸಬೇಕು ಮತ್ತು ಮೂಲಸೌಕರ್ಯವನ್ನು ಸೃಷ್ಟಿಸಬೇಕು ಮತ್ತು ವ್ಯಾಪಕ ಪ್ರಚಾರವನ್ನು ಪ್ರಾರಂಭಿಸಬೇಕು.

ಸಿಪಿಐ(ಎಂ)ನ 23ನೇ ರಾಜ್ಯ ಸಮ್ಮೇಳನವು ಜಾತಿ ತಾರತಮ್ಯ, ಅಸ್ಪೃಶ್ಯತೆ ಮತ್ತು ದಲಿತರ ಮೇಲಿನ ದೌರ್ಜನ್ಯಗಳ ನಿರ್ಮೂಲನೆಗಾಗಿ ರಾಜ್ಯ ಮಟ್ಟದ ಮಿಷನ್ ರಚಿಸಬೇಕೆಂದು ಒತ್ತಾಯಿಸುತ್ತದೆ. ಜಾತಿ ತಾರತಮ್ಯದ ವಿರುದ್ಧದ ಹೋರಾಟಗಾರರಾದ ಡಾ. ಬಿ.ಆರ್. ಅಂಬೇಡ್ಕರ್, ಬಸವಣ್ಣ, ಜ್ಯೋತಿಬಾ ಫುಲೆ, ಸಾವಿತ್ರಿಬಾಯಿ, ನಾರಾಯಣಗುರು, ಪೆರಿಯಾರ್, ಅಯ್ಯಂಕಾಳಿ, ಇಎಂಎಸ್, ಎಕೆ ಗೋಪಾಲನ್, ಮುಂತಾದ ಎಲ್ಲಾ ಸಾಮಾಜಿಕ ಹೋರಾಟಗಾರರಿಗೆ ಇಂತಹ ಧ್ಯೇಯವನ್ನು ರೂಪಿಸುವುದು ನಿಜವಾದ ಅರ್ಥದಲ್ಲಿ ಗೌರವ ಅರ್ಪಿಸಿದಂತಾಗುತ್ತದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೂ ಅರ್ಥಪೂರ್ಣ ಆಶಯವಾಗುತ್ತದೆ.

ಸಂವಿಧಾನದ ಆಶಯವಾದ ಸಾಮಾಜಿಕ ನ್ಯಾಯವನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಸೂಕ್ತ ಮೈಲುಗಲ್ಲಾಗುತ್ತದೆ.



ಪುಟ 9 ರಿಂದ

ಆಹಾರ–ವಿರೋಧಿ ನೀತಿಯ ಬದಲಾವಣೆಗಾಗಿ ಹೋರಾಟ

ಆಹಾರ ಭದ್ರತೆ'ಯ ವ್ಯಾಖ್ಯಾನವನ್ನು ಪೂರೈಸುವಂತೆ ಆಹಾರ ಭದ್ರತಾ ಶಾಸನಕ್ಕೆ ತಿದ್ದುಪಡಿ ಮಾಡಬೇಕಾಗಿದೆ. ಅದು: "ಸಕ್ರಿಯ, ಆರೋಗ್ಯಕರ ಜೀವನಕ್ಕಾಗಿ ಸಾಕಷ್ಟು ಆಹಾರವನ್ನು ಕೈಗೆಟಕುವ ಬೆಲೆಯಲ್ಲಿ ಎಲ್ಲಾ ಸಮಯದಲ್ಲೂ ಪ್ರತಿ ಕುಟುಂಬದ ಎಲ್ಲಾ ಸದಸ್ಯರು ಪಡೆಯುವುದನ್ನು ಖಚಿತ ಪಡಿಸುತ್ತದೆ.

ಯೋಜನಾ ಆಯೋಗ/ ನೀತಿ ಆಯೋಗವು ಕಾಲಕಾಲಕ್ಕೆ ಮಾಡಿದ ಬಡತನದ ತಪ್ಪು ಅಂದಾಜುಗಳೊಂದಿಗೆ ಆಹಾರ ಭದ್ರತೆಯನ್ನು ಖಚಿತಪಡಿಸಲಾಗುವುದಿಲ್ಲ. ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ಬಡವರ ದೊಡ್ಡ ವರ್ಗಗಳನ್ನು ಹೊರಗಿಟ್ಟಿದ್ದು ಘೋರ ಅನ್ಯಾಯವಾಗಿದೆ. ಗುರಿ ನಿಗದಿತ ಯೋಜನೆಯ ಹೆಸರಿನಲ್ಲಿ ಮತ್ತು ನೇರ ನಗದು ವರ್ಗಾವಣೆಯನ್ನು ಸರ್ಕಾರ ಜಾರಿ ಮಾಡುತ್ತಿರುವುದರಿಂದ ಆಹಾರ ಲಭ್ಯತೆ ಪ್ರಮಾಣವೂ ಕಡಿಮೆಯಾಗಲಿದೆ.

ಅಕ್ಕಿ ಮತ್ತು ಗೋಧಿಗೆ ಕಾನೂನುಬದ್ಧ ಅರ್ಹತೆಯನ್ನು ಸೀಮಿತಪಡಿಸಿ ಮತ್ತು ಸಕ್ಕರೆ, ಬೇಳೆಕಾಳುಗಳು, ಖಾದ್ಯ ತೈಲ ಮತ್ತು ಸೀಮೆಎಣ್ಣೆಯಂತಹ ಇತರ ಅಗತ್ಯ ಸರಕುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ಹೊರಗಿಡಲಾಗಿದೆ. ಆದರೆ ಅನೇಕ ರಾಜ್ಯಗಳು, ಉದಾಹರಣೆಗೆ, ಕೇರಳ, ಇತರ ಅಗತ್ಯ ವಸ್ತುಗಳನ್ನು ಸಬ್ಸಿಡಿ ದರದಲ್ಲಿ ವ್ಯಾಪಕವಾಗಿ ಲಭ್ಯವಾಗುವಂತೆ ಮಾಡಿದೆ. ಈಗಿರುವ ನ್ಯಾಯಬೆಲೆ ಅಂಗಡಿಗಳಿಗೆ ಸರ್ಕಾರದ ದಾಸ್ತಾನು ಮಳಿಗೆಗಳಿಂದ ರೇಷನ್ ಬಂದಾಗ ಮಾತ್ರ ತೆರೆದಿಡುವ ಉಳಿದ ವೇಳೆ ಈ ನ್ಯಾಯಬೆಲೆ ಅಂಗಡಿಗಳು ಮುಚ್ಚಿರುವ ಪರಿಸ್ಥಿತಿ ಇದೆ. ಆದರೆ ಈ ನ್ಯಾಯಬೆಲೆ ಅಂಗಡಿಗಳು ನಿರಂತರವಾಗಿ ತೆರೆದಿಡುವಂತೆ ಮಾಡಲು ಸಾಧ್ಯವಾಗಬೇಕು. ಒಂದೇ ಛಾವಣಿಯ ಅಡಿಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ಲಭ್ಯವಿರುವ, ಜನಜೀವನಕ್ಕೆ ಬೇಕಾಗುವ ವಸ್ತುಗಳನ್ನು ನ್ಯಾಯಬೆಲೆ ಅಂಗಡಿಗೆ ಪೂರೈಸಲು ಸಾಧ್ಯವಾದರೆ ಉದ್ಯೋಗ ಸೃಷ್ಟಿಯೂ, ಸಹಕಾರಿ ರಂಗದ ಬಲವರ್ಧನೆಯೂ ಸಾಧ್ಯವಿದೆ. ಅದಕ್ಕಾಗಿ ಕೇರಳ ಮಾದರಿಯನ್ನು ಅನುಸರಿಸಲು ಈ ಸಮ್ಮೇಳನವು ಸರ್ಕಾರಕ್ಕೆ ಆಗ್ರಹಿಸುತ್ತದೆ. ರಾಜ್ಯದಲ್ಲಿ ಆಹಾರದ ಹಕ್ಕನ್ನು ಸಾರ್ವತ್ರಿಕ ಹಕ್ಕು ಎಂದು ಗುರುತಿಸಬೇಕು ಎಂದು ಈ ಸಮ್ಮೇಳನ ಒತ್ತಾಯಿಸುತ್ತದೆ.

ಯಾವುದೇ ಆಹಾರ ಭದ್ರತಾ ಶಾಸನವು ವಿಸ್ತರಿತ ಸಾರ್ವಜನಕ ಸಂಗ್ರಹಣೆ ಮತ್ತು ಭಾರತೀಯ ರೈತರಿಗೆ ನ್ಯಾಯಯುತ ಬೆಲೆಗಳನ್ನು ಖಚಿತಪಡಿಸುವುದು ಅತ್ಯಗತ್ಯ. ಗೋಧಿ, ಅಕ್ಕಿ, ರಾಗಿ, ಬೇಳೆಕಾಳುಗಳು, ಎಣ್ಣೆಕಾಳುಗಳು ಮತ್ತು ಕಬ್ಬು ಸೇರಿದಂತೆ ಬೆಳೆಗಳು, ಗ್ರಾಮೀಣ ಮೂಲಸೌಕರ್ಯ ಮತ್ತು ವಿಸ್ತರಣಾ ಸೇವೆಗಳ ಅಭಿವೃದ್ಧಿಗಾಗಿ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸುವುದು ಮತ್ತು ನಿಯಂತ್ರಿತ ಬೆಲೆಗಳಲ್ಲಿ ಲಾಗುವಾಡುಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು ಅಷ್ಟೇ ಮುಖ್ಯ.,

ಆಹಾರ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯವನ್ನು ಸರ್ಕಾರ ಗಣನೆಗೆ ತೆಗೆದುಕೊಂಡಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಗುರಿ ನಗದಿ ಮತ್ತು ಕಡಿಮೆ ಹಂಚಿಕೆಗಳ ನೆಪದಲ್ಲಿ 5 ಲಕ್ಷ ನ್ಯಾಯಬೆಲೆ ಅಂಗಡಿಗಳನ್ನು ರದ್ದುಗೊಳಿಸಿದೆ. ಕಳೆದ ವರ್ಷ ಕೇಂದ್ರ ಸರ್ಕಾರವು ಅಗತ್ಯ ವಸ್ತುಗಳ ಕಾಯ್ದೆಗೆ ತಿದ್ದುಪಡಿ ತಂದಿದ್ದರಿಂದ ಅದು ಯಥಾವತ್ ಜಾರಿಯಾಗುವುದರಿಂದ ಬಹುದೊಡ್ಡ ಪ್ರಮಾಣದಲ್ಲಿ ಜೀವನಾವಶ್ಯಕ ವಸ್ತುಗಳನೂ ಒಳಗೊಂಡು ಆಹಾರ ಧಾನ್ಯ ವಸ್ತುಗಳು ಬಡವರಿಗೆ ಕೈಗೆಟುಕುವಂತಿರದು.

ಹಾಗಾಗಿ, ಸಾರ್ವಜನಿಕ ವಿತರಣೆ ವ್ಯವಸ್ಥೆ ಪಿಡಿಎಸ್ ಅನ್ನು ಬಲಪಡಿಸಲು ಮತ್ತು ಸುವ್ಯವಸ್ಥಿತಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಭ್ರಷ್ಟಾಚಾರವನ್ನು ಬೇರು ಸಮೇತ ನಿರ್ಮೂಲನೆ ಮಾಡಲು ಮತ್ತು ಮೇಲ್ವಿಚಾರಣೆ ಮತ್ತು ಜಾಗೃತ ಸಮಿತಿಗಳ ಮೂಲಕ ಜನರ ಅಗತ್ಯತೆಗಳಿಗೆ ವ್ಯವಸ್ಥೆಯನ್ನು ಹೆಚ್ಚು ಹೊಣೆಗಾರರನ್ನಾಗಿ ಮಾಡಲು ಕ್ರಮಗಳನ್ನು ತೆಗೆದುಕೊಳ್ಳಬೇಕು.

ಸರ್ಕಾರವು ಮಧ್ಯಾಹ್ನದ ಊಟ ಯೋಜನೆ ಮತ್ತು ಐಸಿಡಿಎಸ್ ಪೌಷ್ಟಿಕಾಂಶ ಕಾರ್ಯಕ್ರಮದಂತಹ ಇತರ ಆಹಾರ ಯೋಜನೆಗಳನ್ನು ಶಾಸನದಲ್ಲಿ ಸೇರಿಸಬೇಕು

ಈ ಸಮ್ಮೇಳನವು ಆಹಾರ ಭದ್ರತೆಗೆ ಸಂಬಂಧಿಸಿದ ಈ ಕೆಳಗಿನ ಬೇಡಿಕೆಗಳನ್ನು ಮುಂದಿಡುತ್ತದೆ:

ಬೆಲೆ ಏರಿಕೆ ವಿರುದ್ಧ ಆಹಾರ ಭದ್ರತೆಗಾಗಿ ಸಮ್ಮೇಳನವು ಒತ್ತಾಯಿಸುವ ಬೇಡಿಕೆಗಳು:

- ಅಗತ್ಯ ವಸ್ತುಗಳ ಎಲ್ಲಾ ಮುಂಗಡ ವ್ಯಾಪಾರವನ್ನು ನಿಷೇಧಿಸಿ.
- ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ. ವಿಸ್ತರಣೆಯನ್ನು ಖಾತ್ರಿಪಡಿಸಿ ಮತ್ತು ಕಾಳ ಧನಕರ ಮತ್ತು ಕಾಳಸಂತೆಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ.
- ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯನ್ನು ಹಿಂಪಡೆಯಿರಿ.
- ಬರ/ನೆರೆಹಾವಳಿ ಪೀಡಿತ ಪ್ರದೇಶಗಳಲ್ಲಿನ ಮತ್ತು ಕೋವಿಡ್–ಸಾಂಕ್ರಾಮಿಕ ರೋಗದ ಕಾರಣ ಉದ್ಯೋಗ/ಆದಾಯ ಕಳೆದುಕೊಂಡ ಎಲ್ಲಾ ಸಂತ್ರಸ್ತ ಕುಟುಂಬಗಳಿಗೆ ತುರ್ತು ಆಧಾರದ ಮೇಲೆ ಉಚಿತ ಆಹಾರ ಧಾನ್ಯ ವಿತರಣೆಯನ್ನು ಖಚಿತಪಡಿಸಿ.
- ನೈಜ ಆದಾಯವನ್ನು ಖಚಿತಪಡಿಸಲು ವ್ಯಾಪಕವಾದ ಉದ್ಯೋಗ ಖಾತರಿ ಯೋಜನೆಗಳನ್ನು ಪ್ರಾರಂಭಿಸಲು ಸಂಪನ್ಮೂಲಗಳ ತುರ್ತು ಹಂಚಿಕೆಯ ಮೂಲಕ ರಾಜ್ಯ ಸರ್ಕಾರಗಳಿಗೆ ಸಹಾಯ ಮಾಡಿ. 100 ದಿನಗಳ ಮಿತಿಯನ್ನು ತೆಗೆದುಹಾಕಿ ಮತ್ತು ಬೇಡಿಕೆಯ ಮೇರೆಗೆ ಕೆಲಸ ನೀಡಿ. ಅಗತ್ಯವಿರುವಲ್ಲಿ ಆಹಾರ ಧಾನ್ಯವನ್ನು ನಗದು ಜೊತೆಗೆ ಭಾಗ ಪಾವತಿಯಾಗಿಯೂ ಬಳಸಬಹುದು
- ಕೇಂದ್ರ ಸರ್ಕಾರದ ಎಲ್ಲಾ ಆಹಾರ ಮತ್ತು ಪೌಷ್ಟಿಕಾಂಶ ಯೋಜನೆಗಳಾದ ಮಧ್ಯಾಹ್ನದ ಊಟ ಯೋಜನೆ ಮತ್ತು ಐಸಿಡಿಎಸ್ ಪೌಷ್ಟಿಕಾಂಶ ಕಾರ್ಯಕ್ರಮವನ್ನು ಆಹಾರದ ಹಕ್ಕು ಶಾಸನದಲ್ಲಿ ಅಳವಡಿಸಿ.
- ಸಾರ್ವಜನಿಕ ಹೂಡಿಕೆಯ ಮೂಲಕ ಆಹಾರ ಧಾನ್ಯ, ಬೇಳೆಕಾಳುಗಳು, ಕಬ್ಬು ಮತ್ತು ಎಣ್ಣೆಕಾಳುಗಳ ಉತ್ಪಾದನೆಯಲ್ಲಿ ರಾಷ್ಟ್ರೀಯ ಸ್ವಾವಲಂಬನೆಯನ್ನು ಉತ್ತೇಜಿಸುವುದು, ವಿಸ್ತರಣಾ ಸೇವೆಗಳನ್ನು ಒದಗಿಸುವುದು ಮತ್ತು ರೈತರಿಗೆ ಖಾತರಿಯ ನ್ಯಾಯಯುತ ಬೆಲೆಯೊಂದಿಗೆ ಸೂಕ್ತವಾದ ಭೂ ಬಳಕೆಯ ನೀತಿಗಳು ಮತ್ತು ವಿಸ್ತೃತ ಸಾರ್ವಜನಿಕ ಸಂಗ್ರಹಣೆ, ಭೂ ಸುಧಾರಣೆಗಳನ್ನು ಜಾರಿಗೊಳಿಸಿ.
- ನ್ಯಾಯಬೆಲೆ ಅಂಗಡಿಗಳ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಿ.

ಸರ್ಕಾರದ ಆಹಾರ ವಿರೋಧಿ ನೀತಿ ಬದಲಾವಣೆಗೆ ಒತ್ತಾಯಿಸಿ ಜನರಿಗೆ ಒಂದಿಷ್ಟು ನೆಮ್ಮದಿ ತರುವ ಗುರಿ ಸಾಧಿಸಲು ಗಂಗಾವತಿಯಲ್ಲಿ ನಡೆಯುತ್ತಿರುವ ಸಿ.ಪಿ.ಐ(ಎಂ) ಕರ್ನಾಟಕ ರಾಜ್ಯ 23 ನೇ ಸಮ್ಮೇಳನ ಮೇಲಿನ ಬೇಡಿಕೆಗಳ ಮೇಲೆ ರಾಜ್ಯವ್ಯಾಪಿ ಹೋರಾಟಕ್ಕೆ ಕರೆ ನೀಡುತ್ತದೆ.

ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಂಸ್ಕೃತಿಕ ಸಂವೇದನೆಗಳನ್ನು ರಕ್ಷಿಸಬೇಕು

ಸಹಬಾಳ್ವೆಯ ಸಾಮರಸ್ಯದ ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವ ಪಣತೊಡಲು ಸಿಪಿ.ಐ(ಎಂ) ಸಮ್ಮೇಳನದ ಕರೆ

ಸುಮಾರು ಒಂದು ಶತಮಾನದ ಹಿಂದೆ ಬಿತ್ತಿದ ವಿಷಬೀಜದ ಹುಲುಸಾದ ಪೈರನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘವಿಂದು ಕೊಯ್ಯುತ್ತಿದೆ. ಒಂದು ಸ್ಪಷ್ಟವಾದ ಧರ್ಮಾಂಧತೆಯ ಸೂತ್ರವನ್ನೇ ಇಟ್ಟುಕೊಂಡು ನೇಯ್ದ ಬಲೆಯಲ್ಲಿ ಇಂದು ಇಡೀ ದೇಶವನ್ನು ಕೆಡವಲಾಗುತ್ತಿದೆ.ಸಂಸ್ಕೃತಿ ಎಂಬುದು ಜನ ಜೀವನದ ಭಾಗವಾಗಿರುವಾಗ ನೆಲಮೂಲದ ಕೂಡಿ ಬಾಳುವ ಸಂಸ್ಕೃತಿಯನ್ನು ಹಾಳುಗೆಡಹಿ ಒಂದು ದೇಶ ಒಂದು ಸಂಸ್ಕೃತಿಯೆಂಬ ವಾದವನ್ನು ಹರಿಬಿಡಲಾಗುತ್ತಿದೆ. ಜನರಲ್ಲಿ ದ್ವೇಷ, ಹಿಂಸೆಗಳನ್ನು ತುಂಬುವ ಕೆಲಸ ಯಾವ ಎಗ್ಗು ಸಿಗ್ಗಿಲ್ಲದೇ ನಡೆಯುತ್ತಿದೆ. ಆದ್ದರಿಂದ ಕೂಡುಸಂಸ್ಕೃತಿಯನ್ನು ಗೌರವಿಸುವ ರಾಜ್ಯದ ಎಲ್ಲ ಜನರೂ ನಾಡಿನ ಮೂಲಸೆಲೆಯಾದ ಸಹಬಾಳ್ವೆಯ ಸಾಮರಸ್ಯದ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಲು ಪಣತೊಡಬೇಕೆಂದು 23 ನೇ ರಾಜ್ಯ ಸಿಪಿ.ಐ(ಎಂ) ಸಮ್ಮೇಳನವು ಕರೆ ನೀಡಿದೆ.

ಭಾರತದ ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವೂ ಅತಿ ಮುಖ್ಯವಾದುದು. ಇತ್ತೀಚಿನ ವರ್ಷಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರದ ಮೇಲೆ ನಡೆದಿರುವ ದುರ್ದಾಳಿಗಳು ಜನರ ಮೂಲಭೂತ ಹಕ್ಕುಗಳ ಮೇಲೆ ನಡೆದಿರುವ ಧಾಳಿಗಳಾಗಿವೆ.

ತಾನು ಸುಮಾರು ಒಂದು ಶತಮಾನದ ಹಿಂದೆ ಬಿತ್ತಿದ ಬೀಜದ ಹುಲುಸಾದ ಪೈರನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘವಿಂದು ಕೊಯ್ಯುತ್ತಿದೆ. ಒಂದು ಸ್ಪಷ್ಟವಾದ ಧರ್ಮಾಂಧತೆಯ ಸೂತ್ರವನ್ನೇ ಇಟ್ಟುಕೊಂಡು ನೇಯ್ದ ಬಲೆಯಲ್ಲಿ ಇಂದು ಇಡೀ ದೇಶವನ್ನು ಕೆಡವಲಾಗುತ್ತಿದೆ.

ಎಲ್ಲ ಸಾಂಸ್ಕೃತಿಕ ಪರಿಸರಗಳನ್ನು ನಯ ವಂಚನೆಯಿಂದ ಆಕ್ರಮಿಸಿಕೊಳ್ಳುತ್ತ ನಡೆದು ಬಂದು, ಈಗ ಅಧಿಕಾರದ ಕೇಂದ್ರದಲ್ಲಿಯೂ ಪ್ರಾಬಲ್ಯವನ್ನು ಸ್ಥಾಪಿಸಿದೆ. ಮತ್ತು ಅದನ್ನು ಬಹಳ ಸಮರ್ಥವಾಗಿ ಜನವಿರೋಧೀ ಸಿದ್ಧಾಂತಕ್ಕೆ ಅನುಗುಣವಾಗಿ ನಡೆಸುತ್ತಿದೆ. ಮತ್ತು ಅದಕ್ಕೆ ಸಾಮೂಹಿಕ ಸಮ್ಮತಿ ಪಡೆಯುವ ಹುನ್ನಾರು ಚಾಲ್ತಿಯಲ್ಲಿದೆ.

ಇದರ ಭಾಗವಾಗಿಯೇ ಇಂದು ಸರಕಾರದ ನೀತಿಗಳನ್ನು ಪ್ರತಿಭಟಿಸಿದರೆ ದೇಶದ್ರೋಹವೆನಿಸಿಕೊಳ್ಳುತ್ತಿದೆ. ಚಿಂತಕರನ್ನು, ಪತ್ರಕರ್ತರನ್ನು ವಿನಾಕಾರಣ ಜೈಲಿಗೆ ತಳ್ಳಲಾಗುತ್ತಿದೆ. ಸರಕಾರದ ಎಲ್ಲ ತನಿಖಾ ಸಂಸ್ಥೆಗಳನ್ನೂ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಸಾಂಸ್ಕೃತಿಕ ಚಹರೆಗಳೆಲ್ಲವನ್ನೂ ವಿರೂಪಗೊಳಿಸಲಾಗುತ್ತಿದೆ. ಕರ್ನಾಟಕದಲ್ಲಿ ಇತ್ತೀಚಿನ ಕೆಲವು ಉದಾಹರಣೆಗಳನ್ನು ಗಮನಿಸಿದರೆ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹಿಂದಿಕ್ಕಿ ಹಿಂದುತ್ವ ದೇಶವನ್ನಾಗಿಸುವ ಪ್ರಯೋಗಶಾಲೆಯಾಗಿ ಬಳಕೆಯಾಗುತ್ತಿದೆ ಎಂಬುದನ್ನು ಗುರುತಿಸಬಹುದಾಗಿದೆ.

ಅಲ್ಪ ಸಂಖ್ಯಾತರನ್ನು ಪ್ರತ್ಯೇಕಗೊಳಿಸುವ ಗುಪ್ತ ಕಾರ್ಯಸೂಚಿಯ ಕಾರ್ಯವಿಧಾನವಾದ ಸಿ.ಎ.ಎ, ಎನ್.ಆರ್.ಸಿ ಪ್ರತಿಭಟನೆಯ ಸಂದರ್ಭದಲ್ಲಿ ನಾಟಕ ಪ್ರದರ್ಶನ ಮಾಡಿಸಿದರೆಂದು ಶಿಕ್ಷಕಿ ಮತ್ತು ಮಗುವಿನ ತಾಯಿಯನ್ನು ಬಂಧಿಸಿದ ಘಟನೆ ನಡೆಯಿತು. ಕೊನೆಗೆ ಆರೋಪ ಸಾಬೀತು ಪಡಿಸದೇ ಮುಖಭಂಗ ಅನುಭವಿಸಿದ ಪ್ರಕರಣ, ಕವನ ಬರೆದ ಕವಿಯ ಮೇಲೆ ಹೂಡಿದ ಮೊಕದ್ದಮೆಗಳು ಕೆಲವು ಉದಾಹರಣೆಗಳು.

ಕರ್ನಾಟಕದ ಎಲ್ಲ ಅಕಾಡೆಮಿಗಳು ಮತ್ತು ನಿಗಮ ಮಂಡಳಿಗಳಲ್ಲಿ ಆರ್.ಎಸ್.ಎಸ್ ನ ಅನುಯಾಯಿಗಳನ್ನು ತುಂಬಲಾಗಿದೆ. ಕನ್ನಡ ಸಾಹಿತ್ಯ ಪರಿಷತ್‌ನಂಥಹ ಸ್ವಾಯತ್ತ ಸಂಸ್ಥೆಗಳಲ್ಲಿಯೂ ಸಂಘೀ ರಾಜಕೀಯವನ್ನು ಬೆರೆಸಿರುವುದು ಮತ್ತಷ್ಟು ದೃಷ್ಟಾಂತಗಳು.

ರಂಗಭೂಮಿಯನ್ನೂ ಕೋಮುವಾದೀಕರಣಗೊಳಿಸುವ ಕೆಲಸ ರಾಜಾರೋಷವಾಗಿಯೇ ನಡೆದಿದೆ. ಮೈಸೂರು ರಂಗಾಯಣದ ನಿರ್ದೇಶಕರು ತಾನೊಬ್ಬ ಆರ್.ಎಸ್.ಎಸ್.ಕಾರ್ಯಕರ್ತ ಎಂದು ಬಹಿರಂಗವಾಗಿಯೇ ಹೇಳಿಕೊಂಡಿದ್ದಾರೆ. ಬಹುರೂಪಿಯಂಥಹ ಉತ್ತಮ ಸಾಂಸ್ಕೃತಿಕ ಹಬ್ಬವನ್ನೂ ಕೋಮುವಾದಿ, ಭಾಷಣ ಚತುರ, ಚಕ್ರವರ್ತಿ ಸೂಲಿಬೆಲೆಯಂಥವರನ್ನು ಆಹ್ವಾನಿಸಿ, ಅದನ್ನು ವಿರೋಧಿಸಿದವರನ್ನೆಲ್ಲ ಮಾವೋವಾದಿಗಳೆಂದು ದೂಷಿಸಿದ್ದಾರೆ. ರಂಗಾಯಣ ಉಳಿಸಿ ಹೆಸರಿನಲ್ಲಿ ಪ್ರತಿಭಟನೆ ನಡೆಯುತ್ತಿದೆ. ನಾವು ಅದನ್ನು ಬೆಂಬಲಿಸುತ್ತೇವೆ.

ಗಂಗಾವತಿ ತಾಲುಕಿನ ಆನೆಗೊಂದಿಯಲ್ಲಿ ಆಂಜನೇಯ ಹುಟ್ಟಿದ ಸ್ಥಳವೆಂದು ಪ್ರತೀತಿ ಪಡೆದಿರುವುದು ಅಂಜನಾದ್ರಿ ಬೆಟ್ಟ. ಇಲ್ಲೀಗ ಹನುಮ ಮಾಲೆಯ ಹೆಸರಿನ ಆಚರಣೆಯೊಂದು ಪ್ರಖ್ಯಾತವಾಗುತ್ತಿದೆ. ಇಲ್ಲಿ ತಳ ಸಮುದಾಯದ ಯುವಕರನ್ನು ಮತಿಭ್ರಮಣೆ ಗೊಳಿಸಲಾಗುತ್ತಿದೆ. ದೊಡ್ಡ ಸಂಖ್ಯೆಯಲ್ಲಿ ಯುವಕರು ಅಲ್ಲಿ ಪಾಲ್ಗೊಳ್ಳುತ್ತಿರುವುದು ಇದಕ್ಕೆ ಒಂದು ಉದಾಹರಣೆಯಾಗಿದೆ.

ಜನರ ಆರ್ಥಿಕ ಸಂಕಷ್ಟಗಳು ಹೆಚ್ಚಿದಂತೆಲ್ಲ ಅವರ ತಲೆಗೆ ದೈವಭಕ್ತಿಯ ಅಫೀಮು ತುಂಬಿಸುವ ಕೆಲಸವನ್ನು ಯೋಜನಾಬದ್ಧವಾಗಿ ಮಾಡಲಾಗುತ್ತಿದೆ. ದತ್ತ ಮಾಲೆ, ಶಿವಮಾಲೆ, ಓಂ ಶಕ್ತಿ, ಅಯ್ಯಪ್ಪ ಮಾಲೆಗಳು ಜನರನ್ನು ಭ್ರಾಮಕ ಲೋಕಕ್ಕೆ ಸೆಳೆಯುತ್ತಿವೆ.

ಅಂಚಿಗೆ ತಳ್ಳಲ್ಪಟ್ಟ ಸಮುದಾಯದ ಮನಸ್ಸುಗಳನ್ನೂ ಕೋಮುಗ್ರಸ್ತಗೊಳಿಸುವ ಕೆಲಸ ಮಾಡುತ್ತಲೇ, ಆದಿವಾಸಿ ಬುಡಕಟ್ಟು ಸಮುದಾಯಗಳ ಭಾಷೆ ಸಂಸ್ಕೃತಿಗಳನ್ನು ನಾಶಮಾಡುತ್ತಲೂ ಇದ್ದಾರೆ. ದಸರಾ ಸಂದರ್ಭದಲ್ಲಿ ತ್ರಿಶೂಲ ದೀಕ್ಷೆಯನ್ನು ಹೀಗೆ ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳ ಯುವಕರಿಗೆ ಕೊಟ್ಟು ಅದನ್ನು ವೈರಲ್ ಮಾಡಿದರು. ಕೊರಗ ಸಮುದಾಯದ ವಿವಾಹ ಸಂಭ್ರಮಕ್ಕೆ ನುಗ್ಗಿ ಮನ ಬಂದಂತೆ ಪೋಲೀಸರು ಥಳಿಸಿದರು. ಇವು ಕೇವಲ ಘಟನೆಗಳಲ್ಲ, ಬದಲಿಗೆ ಏಕ ಸಂಸ್ಕೃತಿಯ ಹೇರುವಿಕೆಯ ಭಾಗವಾಗಿರುವ ಸಾಂಸ್ಕೃತಿಕ ರಾಷ್ಟ್ರೀಯತೆಯ ಸಂಚಾಗಿಯೇ ನೋಡಬೇಕು.

ಆರ್ಥಿಕ ಬೇಡಿಕೆಗಳಿಗೆ ಎಡ ಸಿದ್ಧಾಂತದ ಸಂಘಟನೆಗಳನ್ನು ದುಡಿಯುವ ಜನ ಅವಲಂಭಿಸುತ್ತಾರೆ. ಅದೇ ಜನ ಸಮೂಹವನ್ನು ತನ್ನ ಕುಟಿಲ ಸಾಂಸ್ಕೃತಿಕ ರಾಜಕಾರಣಗಳ ಮೂಲಕ ಆರ್.ಎಸ್.ಎಸ್ ತನ್ನ ವಶಕ್ಕೆ ತೆಗೆದುಕೊಳ್ಳುತ್ತಿದೆ. ಮಧ್ಯಮವರ್ಗ ಅವರ ಈ ಕುಟಿಲ ಕಾರಸ್ಥಾನದ ವಾಹಕರು ಹಾಗೂ ಕಾರ್ಮಿಕ ವರ್ಗ ಅದರ ವಾಹನಗಳಾಗಿ ಬಳಸಲ್ಪಡುತ್ತಿದ್ದಾರೆ. ಪ್ರಭುತ್ವದ ಆಲೋಚನಾ ಕ್ರಮವನ್ನು ಜನರೊಳಗೆ ಇಳಿಸಲು ಇವರೊಂದು ಸಮರ್ಥ ಮಾಧ್ಯಮವಾಗಿ ಕಾರ್ಯ ನಿರ್ವಹಿಸುತ್ತಾರೆ. ಹಾಗಾಗಿಯೇ ನಮ್ಮ ಲಕ್ಷ್ಯ ಕೇವಲ ಆರ್ಥಿಕ ಬೇಡಿಕೆಗಳಿಗೆ ಸೀಮಿತವಾಗದೇ, ಮುಂದಿನ ತಲೆಮಾರನ್ನು ಆರ್.ಎಸ್.ಎಸ್ ಸಿದ್ಧಾಂತಕ್ಕೆ ಬಲಿಯಾಗದೇ ಇರುವಂತೆ ಸಾಂಸ್ಕೃತಿಕ ಮಧ್ಯಪ್ರವೇಶದ ಮೂಲಕ ತಡೆ ಹಿಡಿಯುವುದು ಆಗಬೇಕು. ಬಾಲಸಂಘಗಳ ಪ್ರಾಮುಖ್ಯತೆಯನ್ನೂ ಸಾಂಸ್ಕೃತಿಕ ಮಧ್ಯಪ್ರವೇಶದ ಭಾಗವಾಗಿಯೇ ಗುರುತಿಸಬೇಕು.

ಸಂಸ್ಕೃತಿ ಎಂಬುದು ಜನ ಜೀವನದ ಭಾಗವಾಗಿರುವಾಗ ನೆಲಮೂಲದ ಕೂಡಿ ಬಾಳುವ ಸಂಸ್ಕೃತಿಯನ್ನು ಹಾಳುಗೆಡಹಿ ಒಂದು ದೇಶ ಒಂದು ಸಂಸ್ಕೃತಿಯೆಂಬ ವಾದವನ್ನು ಹರಿಬಿಡಲಾಗುತ್ತಿದೆ. ಜನರಲ್ಲಿ ದ್ವೇಷ, ಹಿಂಸೆಗಳನ್ನು ತುಂಬುವ ಕೆಲಸ ಯಾವ ಎಗ್ಗು ಸಿಗ್ಗಿಲ್ಲದೇ ನಡೆಯುತ್ತಿದೆ. ಜನರ ಆಹಾರದ ಸಂಸ್ಕೃತಿಯ ಮೇಲೆ ಹಲ್ಲೆ, ಯುವ ಜನರ ಆಯ್ಕೆ ಹಕ್ಕುಗಳ ಮೇಲೆ ಹಲ್ಲೆ, ಜನರ ಧಾರ್ಮಿಕ ಆಯ್ಕೆಗಳ ಮೇಲೆ ಧಾಳಿ ಇವು ನೇರವಾದ ಸಾಂಸ್ಕೃತಿಕ ರಾಜಕಾರಣಗಳಾಗಿದ್ದು ಸಶಕ್ತ ಸಾಂಸ್ಕೃತಿಕ ಮಧ್ಯಪ್ರವೇಶವಷ್ಟೇ ಇದಕ್ಕೆ ಉತ್ತರವಾಗಬಲ್ಲುದು. ಇತ್ತೀಚಿನ ಮತಾಂತರ ನಿಷೇಧ ಕಾಯ್ದೆ ಮತ್ತು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದರ ಘರ್ ವಾಪಸೀ ಹೆಸರಿನ ನಗೆಪಾಟಲಾದ ಹೇಳಿಕೆಗಳು ಬಿ.ಜೆ.ಪಿ ಮತ್ತದರ ದ್ವೇಷಧರ್ಮ ಪ್ರಚಾರಕ್ಕೆ ನೇರ ಉದಾಹರಣೆಗಳಾಗಿವೆ.

ಕೂಡುಸಂಸ್ಕೃತಿಯನ್ನು ಗೌರವಿಸುವ ರಾಜ್ಯದ ಎಲ್ಲ ಜನರೂ ನಾಡಿನ ಮೂಲಸೆಲೆಯಾದ ಸಹಬಾಳ್ವೆಯ ಸಾಮರಸ್ಯದ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಲು ಪಣತೊಡಬೇಕೆಂದು 23 ನೇ ರಾಜ್ಯ ಸಿಪಿ.ಐ(ಎಂ) ಸಮ್ಮೇಳನವು ಕರೆ ನೀಡುತ್ತದೆ. ಮತ್ತು ಸರಕಾರವೊಂದಕ್ಕೆ ಇರಬೇಕಾದ ಕನಿಷ್ಟ ರಾಜನೀತಿಯನ್ನು ಪಾಲಿಸಬೇಕೆಂದು ಒತ್ತಾಯಿಸುತ್ತದೆ.



ಮತದಾರ ಚೀಟಿಯೊಂದಿಗೆ ಆಧಾರ್ ಜೋಡಣೆ ಕಾಯ್ದೆಯ ದುಷ್ಟ ಅಜೆಂಡಾ..........

ಪುಟ 9 ರಿಂದ

ಹಣದ ಪಾತ್ರವು ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಅಪಹಾಸ್ಯ ಮಾಡುವ ಒಂದು ಸನ್ನಿವೇಶದಲ್ಲಿ, ಆಧಾರ್‌ನ್ನು ಜೋಡಿಸುವುದು ನಿರರ್ಥಕವಾಗುತ್ತದೆ. ಇಲೆಕ್ಟ್ರಾನಿಕ್ ಮತಯಂತ್ರ(ಇವಿಎಂ)ಗಳ ಬಳಕೆ ಮತಪತ್ರಗಳನ್ನು ಬಳಸುತ್ತಿದ್ದ ಕಾಲದ ಮತಗಟ್ಟೆಗಳನ್ನು ವಶಪಡಿಸಿಕೊಳ್ಳುವ ಯುಗವನ್ನು ಬಹುಮಟ್ಟಿಗೆ ಕೊನೆಗೊಳಿಸಿದೆ. ಆಧಾರ್ ಜೋಡಣೆಯಿಂದ ಆ ದಿನಗಳನ್ನು ಮರಳಿ ತರಬಹುದು. ಇ–ಮತದಾನದೊಂದಿಗೆ ದುಷ್ಟತಂತ್ರಾಂಶ(ಮಾಲ್ವೇರ್) ಚಿನ್ನಾಟವಾಡಬಹುದು. ಮಸೂದೆಯು ಈ ಸಮಸ್ಯೆಗಳನ್ನು ಪರಿಗಣಿಸುವುದಿಲ್ಲ.

ಈ ಮಸೂದೆಯು ಇತರ ರಾಜಕೀಯ ದುರುದ್ದೇಶಗಳಿಂದಲೂ ಹೊರತಾಗಿಲ್ಲ. ಎಸ್ಟೋನಿಯಾ ದೇಶ ವಿಶ್ವಬ್ಯಾಂಕ್‌ನ ಒತ್ತಡ ಮತ್ತು ನಿರ್ದೇಶನದಲ್ಲಿ ಡಿಜಿಟಲೀಕರಣದತ್ತ ಸಾಗಿತು. ಭಾರತದಲ್ಲಿಯೂ ವಿಶ್ವಬ್ಯಾಂಕ್ ಆಧಾರ್ ಆಧಾರಿತ ಮತದಾನದ ಅನುಷ್ಠಾನವನ್ನು ತೀವ್ರಗೊಳಿಸುವಂತೆ ಒತ್ತಾಯಿಸುತ್ತಿದೆ. ಅದು 2014 ರಲ್ಲಿ ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಮತದಾರರ ಗುರುತಿನಚೀಟಿಯೊಂದಿಗೆ ಆಧಾರ್‌ನ್ನು ಜೋಡಿಸುವ ಪ್ರಾಯೋಗಿಕ ಅನುಷ್ಠಾನದ ಹಿಂದೆ ಇತ್ತು. ಆಧಾರ್ ಆಧಾರಿತ ಮತದಾನದ ಅನುಷ್ಠಾನದಿಂದ ಆಡಳಿತಾರೂಢ ಬಿಜೆಪಿ ಗೆ ತನ್ನ ಒಂದುರಾಷ್ಟ್ರ–ಒಂದು ಮತದಾನ ಮತ್ತು ಅನೇಕ ಇತರ ಕಣ್ಗಾವಲು ಆಧಾರಿತ ಚುನಾವಣಾ ಕೈಚಳಕಗಳ ಅಜೆಂಡಾ ವನ್ನು ಮುಂಚೂಣಿಗೆ ತರಲು ಮತ್ತು ಮುಂದೊತ್ತಲು ಸುಲಭವಾಗುತ್ತದೆ ಎಂಬುದನ್ನು ಕೂಡ ತಿಳಿಯಬೇಕು

ಡಿಜಿಟಲೀಕರಣಕ್ಕೆ ಆಧಾರ್‌ನ್ನು ಆಧಾರವಾಗಿ ಬಳಸುವ ಪ್ರತಿಯೊಂದು ನಡೆಯನ್ನೂ ನಾವು ಖಂಡಿಸಬೇಕು. ನಾವು ದೇಶದ ಎಲ್ಲಾ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳನ್ನು ಒಗ್ಗೂಡಿಸಿ ಪ್ರಜಾಪ್ರಭುತ್ವವನ್ನು ಅಪಹಾಸ್ಯಮಾಡಲು ಬಲವಂತದಿಂದ ತಂದಿರುವ ಈ ಮಸೂದೆಯ ವಿರುದ್ಧ ಸಂಸತ್ತಿನ ಒಳಗೂ ಮತ್ತು ಹೊರಗೂ ಹೋರಾಟಗಳನ್ನು ಮುಂದುವರೆಸಬೇಕು. ಇದರ ದುಷ್ಟ ಅಜೆಂಡಾವನ್ನು ಜನರ ಮುಂದೆ ಬಯಲಿಗೆಳೆಯುವುದು ಮತ್ತು ಭಾರತೀಯ ಸಂವಿಧಾನವು ನಮಗೆ ನೀಡಿರುವ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಲು ಹೋರಾಟವನ್ನು ಮುಂದುವರೆಸುವುದು ಮುಖ್ಯವಾಗಿದೆ.

ಕಸ್ತೂರಿ ರಂಗನ್ ಸಮಿತಿಯ ವರದಿ ತಿರಸ್ಕರಿಸಬೇಕು

ಪಶ್ಚಿಮ ಘಟ್ಟ ಪ್ರದೇಶವು ನಮ್ಮ ದೇಶದ ಹವಾಮಾನವನ್ನು ನಿರ್ಣಯಿಸುವಲ್ಲಿ ನಿರ್ಣಾಯಿಕ ಪಾತ್ರ ವಹಿಸುತ್ತಿದೆ. ಇಂತಹ ಈ ಪ್ರದೇಶವು ಪರಿಸರ ವೈಪರಿತ್ಯಕ್ಕೆ ಒಳಗಾಗಿದ್ದು ಅದಕ್ಕೆ ಆ ಪ್ರದೇಶದಲ್ಲಿ ವಾಸಿಸುತ್ತಿರುವ ಜನಸಾಮಾನ್ಯರೇ ಕಾರಣವೆಂದು ಆಳುವ ವರ್ಗಗಳು ಪ್ರಚಾರ ಮಾಡುತ್ತಿವೆ. ಕೇಂದ್ರ, ರಾಜ್ಯ ಸರಕಾರಗಳು ಅನುಸರಿಸಿಕೊಂಡಿರುವ ಬಂಡವಾಳಶಾಹಿ–ಪರವಾದ ತಪ್ಪಾದ ಧೋರಣೆಗಳು, ಅರಣ್ಯ ಕಾಯಿದೆಯಲ್ಲಿರುವ ದೋಷಗಳು, ಅಧಿಕಾರರೂಢ ಪಕ್ಷಗಳ ಬೆಂಬಲಿಗರು ಸ್ವಾರ್ಥಕ್ಕಾಗಿ ಈ ಪ್ರದೇಶವನ್ನು ಕೊಳ್ಳೆ ಹೊಡೆಯುತ್ತಿರುವುದು ಪರಿಸರ ನಾಶದ ಇಂತಹ ಬೆಳವಣಿಗೆಗೆ ಕಾರಣವಾಗಿದ್ದರೂ ಜನಸಾಮಾನ್ಯರನ್ನೇ ಗುರಿಯಾಗಿಸಲಾಗುತ್ತಿದೆ.

ಇಂತಹ ಸ್ವಾರ್ಥ ಬಂಡವಾಳಶಾಹಿಪರ ಚಿಂತನೆಯ ಸರಕಾರಗಳು ರಚಿಸುವ ಸಮಿತಿಗಳೂ ಸಹ ಇದೇ ಜನವಿರೋಧಿ ನಿಲುಮೆಯನ್ನು ಪ್ರತಿಪಾದಿಸುತ್ತವೆ.

ಪಶ್ಚಿಮಘಟ್ಟ ಪ್ರದೇಶದ ಪರಿಸರ ನಾಶಕ್ಕೆ ಕಾರಣಗಳನ್ನು ಕಂಡು ಹಿಡಿದು ಪರಿಹಾರ ಮಾರ್ಗಗಳನ್ನು ಸೂಚಿಸುವಂತೆ ನಿರ್ದೇಶಿಸಿ ಡಾ.ಮಾಧವ ಗಾಡ್ಗೀಳ್‌ರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಆ ಸಮಿತಿಯ ವರದಿಗೆ ಕಟುವಾದ ವಿರೋಧ ಬಂದ ಹಿನ್ನೆಲೆಯಲ್ಲಿ ಡಾ.ಕಸ್ತೂರಿ ರಂಗನ್ ಸಮಿತಿಯನ್ನು ನೇಮಿಸಲಾಗಿತ್ತು. ಆದರೆ ಆ ಸಮಿತಿಯ ವರದಿಯೂ ಸಹ ಪಶ್ಚಿಮ ಘಟ್ಟ ಶ್ರೇಣಿಗಳನ್ನು ಒಳಗೊಂಡಿರುವ ರಾಜ್ಯಗಳ ಜನತೆ ತಿರಸ್ಕರಿಸಿದ್ದರು. ಆದುದರಿಂದ ಜನಪರ ಸಂಘಟನೆಗಳು ಮತ್ತು ಜನಪರ ಚಿಂತನೆಯ ವ್ಯಕ್ತಿಗಳು ಒಳಗೊಂಡಿರುವ ಸಮಿತಿಯನ್ನು ರಚಿಸಿ ಅಧ್ಯಯನ ನಡೆಸಬೇಕೆನ್ನುವುದು ಸಾರ್ವತ್ರಿಕ ಅಭಿಪ್ರಾಯವಾಗಿತ್ತು. ಇದೇ ಪ್ರಕಾರ ಕಸ್ತೂರಿ ರಂಗನ್ ಸಮಿತಿಯ ವರದಿಯನ್ನು ತಿರಸ್ಕರಿಸಬೇಕೆಂದು ಮತ್ತು ಅಧ್ಯಯನಕ್ಕಾಗಿ ಜನಪರ ಸಂಘಟನೆಗಳ ಪ್ರತಿನಿಧಿಗಳನ್ನು ಒಳಗೊಂಡಿರುವ ಸಮಿತಿಯೊಂದನ್ನು ರಚಿಸಬೇಕೆನ್ನುವುದು ನಮ್ಮ ಪಕ್ಷದ ಬೇಡಿಕೆಯೂ ಆಗಿತ್ತು.

ಭಾರತೀಯ ಜನತಾ ಪಕ್ಷ ವಿರೋಧ ಪಕ್ಷವಾಗಿ ಇದ್ದಾಗ ಈ ವರದಿಗಳನ್ನು ಆಮೂಲಾಗ್ರವಾಗಿ ವಿರೋಧಿಸಿತ್ತು. ಮಾತ್ರವಲ್ಲದೆ ಈ ವರದಿಯನ್ನು ತಿರಸ್ಕರಿಸಿ ಜನಪರ ಸಂಘಟನೆಗಳ ಪ್ರತಿನಿಧಿಗಳನ್ನು ಸಮಿತಿಯನ್ನು ರಚಿಸಬೇಕೆನ್ನುವ ಬೇಡಿಕೆಗೆ ಆ ಪಕ್ಷವೂ ಅಂದು ಬೆಂಬಲಿಸಿತ್ತು. ಆ ಸಮಿತಿಗಳ ವರದಿಗಳ ವಿರುದ್ಧ ನಡೆಯುತ್ತಿದ್ದ ಚಳುವಳಿಗಳಲ್ಲಿ ಆ ಪಕ್ಷದವರೂ ಸಕ್ರಿಯವಾಗಿ ಭಾಗಿಗಳಾಗಿದ್ದರು. ಆದರೆ ಅವರ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಅವರು ಜನ ವಿರೋಧಿಯಾಗಿ ತಮ್ಮ ನಿಲುವು ಬದಲಾಯಿಸಿದರು. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಭಾರತೀಯ ಜನತಾ ಪಕ್ಷದ ನರೇಂದ್ರ ಮೋದಿಯವರ ಸರಕಾರ ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ಅಫಿಡಾವಿಟ್ ಮಂಡಿಸಿ 'ತಾನು ಕಸ್ತೂರಿರಂಗನ್ ಸಮಿತಿಯ ವರದಿಯನ್ನು ಅಂಗೀಕರಿಸುವುದಾಗಿಯೂ ಅದನ್ನೇ ಅನುಷ್ಠಾನಕ್ಕೆ ತರುವುದಾಗಿಯೂ' ಒಪ್ಪಿಕೊಂಡಿತು. ಆದುದರಿಂದ ಈಗ ಅದನ್ನು ಅನುಷ್ಠಾನಕ್ಕೆ ತರಲು ಮುಂದಡಿ ಇಡುತ್ತಿದೆ. ಈ ಪ್ರಕ್ರಿಯೆಯ ಭಾಗವಾಗಿ"ಜನರಿಗೆ ತೊಂದರೆಯಾಗದಂತೆ ವರದಿಯನ್ನು ಅನುಷ್ಠಾನಕ್ಕೆ ತರಲು"ಬೇಕಾದ ಉಪಕ್ರಮಗಳನ್ನು ಅನುಸರಿಸಲು ಕೇಂದ್ರ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ.

ಭಾರತೀಯ ಜನತಾ ಪಕ್ಷದ ದ್ವಂದ್ವ ಧೋರಣೆಯನ್ನು ಜನತೆ ಗಮನಿಸಬೇಕೆಂದು ಜನತೆಯನ್ನು ವಿನಂತಿಸುತ್ತದೆ. ಕಸ್ತೂರಿ ರಂಗನ್ ಸಮಿತಿಯ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕೆಂದು ಮತ್ತು ಜನಪರ ಸಮಿತಿಯೊಂದನ್ನು ರಚಿಸಿ ಪುನರ್ ಅಧ್ಯಯನ ನಡೆಸಬೇಕೆಂದು ನಮ್ಮ ಪಕ್ಷವು ಒತ್ತಾಯಿಸುತ್ತದೆ.

ಭದ್ರತಾ ವೈಫಲ್ಯವೋ! ರಾಜಕೀಯ ತಂತ್ರವೋ!!

ಪ್ರಧಾನಿ ನರೇಂದ್ರ ಮೋದಿ ಪಂಜಾಬ್‌ನಲ್ಲಿ 15 ನಿಮಿಷಗಳ ಕಾಲ ಫ್ಲೈ ಓವರ್‌ನಲ್ಲಿ ಸಿಲುಕಿದ ವಿಚಾರ ಈಗ ರಾಜಕೀಯ ಆರೋಪ ಪ್ರತ್ಯಾರೋಪಗಳಿಗೆ ಕಾರಣವಾಗಿದೆ. ಪಂಜಾಬಿನ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ನಾಯಕರು ಟೀಕೆ ಮಾಡುತ್ತಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಪಂಜಾಬ್‌ನ ಫಿರೋಜ್‌ಪುರದಲ್ಲಿ ನಡೆಯಬೇಕಿದ್ದ ಚುನಾವಣಾ ಸಮಾವೇಶದಲ್ಲಿ ಪಾಲ್ಗೊಳ್ಳಬೇಕಿತ್ತು. ಇದಕ್ಕಾಗಿ ರಸ್ತೆ ಮಾರ್ಗವಾಗಿ ತೆರಳುತ್ತಿದ್ದರು. ಆದರೆ ಪ್ರಧಾನಿ ಮೋದಿ ಭೇಟಿ ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದ ಜನ ರಸ್ತೆ ಬಂದ್ ಮಾಡಿದ್ದ ಕಾರಣ ಫ್ಲೈ ಓವರ್ ಮೇಲೆ ಅವರು 15 ನಿಮಿಷ ಸಿಲುಕಿದ್ದರು. ಭದ್ರತೆ ಸರಿಯಾಗಿಲ್ಲ ಎಂಬ ನೆಪವನ್ನು ಒಡ್ಡಿ, ಬ್ಲೂ ಬುಕ್ ನಿಯಮ ಪಾಲಿಸಿಲ್ಲ ಎಂದು ಪ್ರಧಾನಿಯವರು ಸಮಾವೇಶವನ್ನು ರದ್ದುಗೊಳಿಸಿದರು.

ಏನಿದು ಬ್ಲೂ ಬುಕ್?: ಪ್ರಧಾನಿ ಭದ್ರತೆ ನೋಡಿಕೊಳ್ಳುವ ಎಸ್‌ಪಿಜಿ(ವಿಶೇಷ ರಕ್ಷಣಾ ಗುಂಪು) ತನ್ನದೇ ಆದ ಮಾರ್ಗಸೂಚಿ ಹೊಂದಿದೆ. ಇದನ್ನು ಬ್ಲೂ ಬುಕ್ ಎಂದು ಕರೆಯುತ್ತಾರೆ. ಪ್ರಧಾನಿ ರಾಜ್ಯಕ್ಕೆ ಭೇಟಿ ನೀಡುವಾಗ ಬದಲಿ ಮಾರ್ಗವನ್ನು ಸಹ ಪೊಲೀಸರು ತಯಾರು ಮಾಡಿರಬೇಕು. ಗುಪ್ತಚರ, ಎಸ್‌ಪಿಜಿ ಹಾಗೂ ಕೇಂದ್ರದ ಅಧಿಕಾರಿಗಳು ಮೊದಲೇ ಅಲ್ಲಿ ಹೋಗಿ, ಪ್ರತಿ ಸ್ಥಳ ಪರಿಶೀಲಿಸಿ, ಎಲ್ಲಿ ಎಷ್ಟು ಜನ ಸೇರಬೇಕು ಎಂದು ತೀರ್ಮಾನಿಸಿರುತ್ತಾರೆ. ಪ್ರಧಾನಮಂತ್ರಿಗಳ ಹೆಲಿಕಾಪ್ಟರ್ ಎಲ್ಲಿ ಇಳಿಯಬೇಕು, ಅವರು ಎಲ್ಲಿ ಸಭೆ ಮಾಡುತ್ತಾರೆ, ಯಾರು ಇರಬೇಕು ಎಂಬ ಮಾರ್ಗಸೂಚಿಗಳನ್ನು ಹೊಂದಿರುವುದಕ್ಕೆ ಬ್ಲೂ ಬುಕ್ ಎನ್ನುತ್ತಾರೆ.

ಪ್ರಧಾನ ಮಂತ್ರಿ ಪ್ರಯಾಣ ಮಾಡುವ ಮುನ್ನ ಅವರ ಬೆಂಗಾವಲು ವಾಹನಗಳು ಮೊದಲೇ ಸಂಚಾರ ಮಾಡಿ ಪರಿಸ್ಥಿತಿ ನೋಡಿ ಆ ಬಗ್ಗೆ ಮಾಹಿತಿ ನೀಡುತ್ತಾರೆ. ರಸ್ತೆಯಲ್ಲಿ ಹೋದರೆ, ಮೊದಲು ಹತ್ತಾರು ಗಾಡಿ ಹೋಗಿ, ನಂತರ ಅವರ ಕಾರು ಭದ್ರತೆಯೊಂದಿಗೆ ಹೋಗುತ್ತದೆ. ಇದರ ಬಗ್ಗೆ ಎಲ್ಲರಿಗೂ ಗೊತ್ತಿದೆ. ವಿದೇಶಿ ಮಾದರಿಯ ಬುಲೆಟ್ ಪ್ರೂಫ್ ಕಾರಿದ್ದರೂ, ಪಂಜಾಬ್ ಸರ್ಕಾರದ ಮೇಲೆ ಆರೋಪ ಮಾಡಿರುವುದು ಆಚ್ಚರಿಯ ಬೆಳವಣಿಗೆಯಾಗಿದೆ. ಪ್ರಧಾನಿ ಸಾಗುವ ಮಾರ್ಗದಲ್ಲಿ ಪ್ರತಿಭಟನೆಗಳು ನಡೆಯಲಿವೆ ಎಂಬ ಗುಪ್ತಚರ ಇಲಾಖೆ ವರದಿಯನ್ನು ಪಂಜಾಬ್ ಸರ್ಕಾರ ನಿರ್ಲಕ್ಷ್ಯ ಮಾಡಿತ್ತು ಮತ್ತು ಬದಲಿ ಮಾರ್ಗದ ವ್ಯವಸ್ಥೆಯನ್ನು ಸಹ ಪೊಲೀಸರು ಮಾಡಿರಲಿಲ್ಲ ಎಂಬ ಮಾತುಗಳಿವೆ. ಅದೇನೇ ಇರಲಿ, ಪ್ರಧಾನಮಂತ್ರಿಯೊಬ್ಬರ ಸುರಕ್ಷತೆಯ ವಿಷಯದಲ್ಲಿ ನಿಜಕ್ಕೂ ಲೋಪವಾಗಿದೆಯೇ? ಅದಕ್ಕೆ ಹೊಣೆ ಯಾರು? ಇದನ್ನು ರಾಜಕೀಯಕ್ಕೆ ಯಾಕೆ ತಿರುಗಿಸಿದರು? ಪ್ರಧಾನಿಗೆ ಭದ್ರತೆ ನೀಡದೆ ಇರುವುದಕ್ಕೆ ಕೇಂದ್ರ ಗೃಹಖಾತೆಯನ್ನು ಹೊಣೆಯಾಗಿಸಬೇಕಾ ಅಥವಾ ಎಸ್‌ಪಿಜಿ ಮುಖ್ಯಸ್ಥರನ್ನು ಹೊಣೆಯಾಗಿಸಬೇಕಾ?

20 ನಿಮಿಷ ಫ್ಲೈ ಓವರ್ ಮೇಲೆ ಕಾಯ್ದ ವಿಚಾರವನ್ನು ಬೇರೆ ರೀತಿ ತಿರುಗಿಸಿ ಭದ್ರತಾ ವೈಫಲ್ಯದಿಂದಾಗಿ ವಾಪಸ್ಸು ಹೊರಡುತ್ತಿದ್ದೇನೆ. ಪಂಜಾಬ್ ಮುಖ್ಯಮಂತ್ರಿಗಳಿಗೆ ಧನ್ಯವಾದಗಳು ಎಂದು ಮೋದಿ ಹೇಳಿರುವುದರ ಹಿಂದೆ ವಾಸ್ತವ ಅಂಶ ಏನಿದೆ ಎಂಬುದು ಮುಖ್ಯವಾಗಿ ತಿಳಿಯಬೇಕಾದ ವಿಚಾರ. ಈ ಘಟನೆಯನ್ನು ರಾಜಕೀಯಕ್ಕೆ ತಿರುಗಿಸುವ ಅಗತ್ಯ ಪ್ರಧಾನಿಯವರಿಗೆ ಇರಲಿಲ್ಲ. ಭಧ್ರತೆಯ ಬಗ್ಗೆ ಖಚಿತ ಮಾಡಿಕೊಂಡೇ ಇಲ್ಲಿಯ ವರೆಗೆ ಪ್ರಧಾನಿಯವರು ಪ್ರಯಾಣ ಮಾಡಿದ್ದಾರೆ. ಆದರೆ ಪಂಜಾಬ್‌ನಲ್ಲಿನ ಘಟನೆಯನ್ನು ಮಾತ್ರ ಈ ರೀತಿ ತಿರುಗಿಸಿದ್ದು ಹಲವು ಪ್ರಶ್ನೆಗಳನ್ನು ಎಬ್ಬಿಸಿದೆ.

ಮೆರವಣಿಗೆಗೆ ಬಂದಿದ್ದು ಕಮ್ಮಿ ಜನ?: ಪ್ರಧಾನಿಯವರು ಭಾಗವಹಿಸಬೇಕಿದ್ದ ಚುನಾವಣಾ ಮೆರವಣಿಗೆಗೆ 70 ಸಾವಿರ ಜನರನ್ನು ಸೇರಿಸುವ ಅಂದಾಜನ್ನು ಅಲ್ಲಿಯ ಬಿಜೆಪಿ ಘಟಕ ಮಾಡಿಕೊಂಡಿತ್ತು. ಕಾರ್ಯಕ್ರಮದ ಸಮಯ ಆರಂಭವಾಗಿದ್ದರೂ ಸಂಖ್ಯೆ 500 ದಾಟಲಿಲ್ಲ. ಪ್ರಧಾನಿಗಳು ಇನ್ನೇನು ಕೆಲ ನಿಮಿಷಗಳಲ್ಲಿ ಬರುತ್ತಾರೆ ಎಂದು ತಿಳಿಸಿದರೂ ಜನ ಸೇರಲೆ ಇಲ್ಲ. ಅಂತಿಮವಾಗಿ ಜನ ಸೇರಿದ್ದು 700ರ ಆಸುಪಾಸು. ಇನ್ನೂ ಇಷ್ಟು ಕಮ್ಮಿ ಜನರು ಇರುವ ಮೆರವಣಿಗೆಯಲ್ಲಿ ಭಾಗವಹಿಸಿದರೆ "ಜನರೇ ಇಲ್ಲದ ಕಾರ್ಯಕ್ರಮ" ಎಂದು ಮಾಧ್ಯಮಗಳಲ್ಲಿ ಸುದ್ದಿಯಾಗಿ ಪಂಜಾಬ್ ಮತ್ತು ಉತ್ತರ ಪ್ರದೇಶದ ಚುನಾವಣೆಯಲ್ಲಿ ಹಿನ್ನಡೆಯಾಗಬಾರದು ಎಂದು ಅನುಕಂಪದ ನಾಟಕವಾಡಿದ್ದಾರೆ ಎಂಬುದು ಒಂದು ವಿಶ್ಲೇಷಣೆ. ಚುನಾವಣೆಗಳು ಹತ್ತಿರ ಇರುವಾಗ ಈ ರೀತಿ ನರೇಂದ್ರ ಮೋದಿಯವರು ಅನುಕಂಪದ ನಾಟಕವಾಡುವುದು ಹೊಸದೇನು ಅಲ್ಲ. ನನಗೆ ಜೀವ ಬೆದರಿಕೆ ಕರೆ ಬರುತ್ತದೆ ಎಂದ ಅವರು ಹಲವು ಬಾರಿಯ ಚುನಾವಣೆಗಳಲ್ಲಿ ಆಡಿದ್ದನ್ನು ನಾವೆಲ್ಲ ನೋಡಿದ್ದೇವೆ. ಚುನಾವಣೆ ಮುಗಿದಾದ ಮೇಲೆ ಅದು ಏನು? ಯಾರು ಬೆದರಿಕೆ ಹಾಕಿದ್ದರು ಯಾವುದರ ಬಗ್ಗೆಯೂ ಒಂದು ಸಣ್ಣ ತನಿಖೆಯನ್ನು ನಡೆಸುವುದಿಲ್ಲ. ಈಗ ಪಂಚಾಬ್ ಟ್ರಾಫಿಕ್ ಘಟನೆ ಅನುಕಂಪ ಗಿಟ್ಟಿಸಲು ಮಾಡಿದ ನಾಟಕ ಎನ್ನಲಾಗುತ್ತಿದೆ.

ದಲಿತ ಸಿಎಂ ಹೆಸರು ಕೆಡಿಸಲು ಹೂಡಿದ ತಂತ್ರ?: ಪಂಜಾಬ್ ಸಿಎಂ ಚರಣಜಿತ್ ಸಿಂಗ್ ದಲಿತರಾಗಿದ್ದು, ಅವರ ಮೇಲೆ ಕೆಟ್ಟ ಹೆಸರು ಬರುವುದಕ್ಕಾಗಿ ಈ ರೀತಿಯ ಅಪಪ್ರಚಾರ ಮಾಡಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿರುವ ಅಂಶವು ಮುಖ್ಯವಾಗಿದೆ. ಇತ್ತಿಚೆಗೆ ಸ್ಥಳೀಯ ಚುನಾವಣೆಯಲ್ಲೂ ಬಿಜೆಪಿಗೆ ಅಲ್ಲಿ ಹಿನ್ನಡೆಯಾಗಿತ್ತು. ಆ ವಿಚಾರವನ್ನು ತಿರುಗಿಸಲು ಪ್ರಧಾನಿ ಭದ್ರತೆ ವೈಫಲ್ಯದ ಅಸ್ತ್ರವನ್ನು ಬಳಸಿದ್ದಾರಂತೆ.

ಪ್ರಧಾನಿ ಮೋದಿ ಕುಳಿತು ಕೊಳ್ಳುವ ಖುರ್ಚಿಯನ್ನು, ಭಾಷಣ ಮಾಡುವ ಪೋಡಿಯಂನ್ನು ಹತ್ತಾರು ಬಾರಿ ತಪಾಸಣೆ ಮಾಡುವ ಅವರ ಬೆಂಗಾವಲು ರಕ್ಷಕರು, ಈ ರಸ್ತೆಯಲ್ಲಿ ಪ್ರತಿಭಟನೆ ನಡೆಯುತ್ತಿದೆ. ಬದಲಿ ಮಾರ್ಗದಲ್ಲಿ ಹೋಗಲು ಸೂಚನೆ ನೀಡಬಹುದಿತ್ತು. ಒಂದೇ ಕ್ಲಿಕ್ ನಲ್ಲಿ ಮೋದಿ ಜಗತ್ತನ್ನು ನೋಡುತ್ತಾರೆ ಎಂದು ಕೊಂಡಾಡಲಾಗಿತ್ತು. ಈ ಡಿಜಿಟಲ್ ಯುಗದಲ್ಲಿ ಟ್ರಾಫಿಕ್ ಎಲ್ಲಿದೆ ಎಂಬುದನ್ನು ಗೂಗಲ್ ತೋರಿಸಿ ಬಿಡುತ್ತದೆ. ಆದರೆ ಡಿಜಿಟಲ್ ಡಿಜಿಟಲ್ ಎಂದು ಹೇಳಿದ ಪ್ರಧಾನಿಗೆ ಇದು ಕಾಣಲೇ ಇಲ್ಲವಾ? ಆಯ್ತು, ಟ್ರಾಫಿಕ್ ಇದ್ದದ್ದು ನಿಜ, ಆದರೆ ಪ್ರತಿಭಟನೆ ಮಾಡುತ್ತಿದ್ದದ್ದು ರೈತರು. ರೈತರು ಯಾಕೆ ಪ್ರತಿಭಟನೆ ಮಾಡುತ್ತಿದ್ದಾರೆ? ಅವರ ಬೇಡಿಕೆಗಳೇನು ಎಂದು ಕೇಳಬಹುದಿತ್ತು ಅಲ್ಲವೆ? ಅವರ ಹೋರಾಟವನ್ನು ಭದ್ರತಾ ವೈಫಲ್ಯ ಎಂದು ಅಣುಕಿಸಿದ್ದು ಸರಿಯೇ? ಅನ್ನದಾತನಿಗೆ ಮೋದಿಯವರು ಅವಮಾನಿಸಿದ್ದು ಸರಿಯೇ? ದೇಶದ ಪ್ರಧಾನ ಸೇವಕ ಎಂದು ಹೇಳಿಕೊಳ್ಳುವವರಿಗೆ ಜನರ ಮೇಲೆ ನಂಬಿಕೆ ಇಲ್ಲದಿರುವುದು ಏನನ್ನು ತೋರಿಸುತ್ತದೆ? ಪ್ರಧಾನಿಗಳು ಈ ಘಟನೆಯನ್ನು ಅನುಕಂಪ ಗಿಟ್ಟಿಸಲು ಬಳಸಿ ರಾಜಕೀಯದ ಲಾಭ ಪಡೆಯಲು ಬಳಸಿದ್ದಾರೆಯೇ ಎಂದೆಲ್ಲ ಪ್ರಶ್ನೆಗಳು ಸಾಮಾಜಿಕ ಮಾಧ್ಯಮಗಳಲ್ಲಿ ಕೇಳಬಂದಿವೆ.

ಈ ನಡುವೆ ಸುಪ್ರಿಂ ಕೋರ್ಟ್ ತನ್ನದೇ ತನಿಖೆಗೆ ಆದೇಶ ನೀಡಿದೆ.

–ಜಿ.ಡಿ.



"ಅಬ್ಬಾ! ಹೇಗೋ ಜೀವಂತ ಬಂದಿದ್ದೇನೆ!"
–ವ್ಯಂಗ್ಯಚಿತ್ರ: ಸತೀಶ ಆಚಾರ್ಯ

(ಈ ಮಾತು ಈ ಹಿಂದೆ ಹಲವು ಬಾರಿ ಕೇಳಬಂದಿದೆಯಲ್ಲವೇ? * ಲಾಕ್‌ಡೌನ್ ನಂತರ ಊರಿಗೆ ಮರಳಿದ ವಲಸೆ ಕಾರ್ಮಿಕ ಕುಟುಂಬದವರಿಂದ
* ಎರಡನೇ ಅಲೆಯಲ್ಲಿ ಆಕ್ಸಿಜನ್ ಹೇಗೋ ಸಿಲಿಂಡರ್ ದೊರಕಿಸಿಕೊಂಡವರಿಂದ
* ಮಂತ್ರಿಯ ಕಾರಿನಿಂದ ಬಚಾವಾದ ರೈತ ಪ್ರತಿಭಟನಾಕಾರರಿಂದ
* 'ನೈತಿಕ ಪೋಲೀಸ್' ನಿಮದ ತಪ್ಪಸಿಕೊಂಡ ಅಲ್ಪಸಂಖ್ಯಾತರಿಂದ!)

ಕೊರಗ ತನಿಯ ದೇವರು ಅಲ್ಲ, ದೈವವೂ ಅಲ್ಲ? ಧರ್ಮದ ರಾಜಕೀಯ ನಿಲ್ಲಿಸಿ–ಶ್ರೀಧರ ನಾಡ

ಕೊರಗ ತನಿಯನಿಗೆ ಸಂಬಂಧಿಸದೆ ಇರುವ ವೇಷವನ್ನು ಕೊರಗ ತನಿಯನ ವೇಷವೆಂದು ಬಣ್ಣಿಸಿ ಜನರ ನಂಬಿಕೆಯನ್ನು ದುರುಪಯೋಗ ಮಾಡಿಕೊಂಡು ಪದೇ ಪದೇ ಕೊರಗಜ್ಜ ಮತ್ತು ಕೊರಗ ಸಮುದಾಯವನ್ನು ಅಪಮಾನ ಮಾಡಲಾಗುತ್ತಿದೆ ಎಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಉಡುಪಿ ಜಿಲ್ಲಾ ಸಂಚಾಲಕ ಶ್ರೀಧರ ನಾಡ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕೊರಗ ತನಿಯ ಯಾವತ್ತೂ ಕೂಡ ಹಿಂದು ಧರ್ಮದ ಸಂಕೇತವಲ್ಲ. ಆತನನ್ನು ಕರಾವಳಿ ಜಿಲ್ಲೆಗಳ ಕೊರಗ ಸಮುದಾಯ ಮತ್ತು ಆದಿಮ ಸಂಸ್ಕೃತಿಯ ಪ್ರತೀಕ. ಕೊರಗರು ಆಗಲಿ ಕೊರಗ ತನಿಯನ ಕುರಿತು ಮಾತನಾಡುವ ಮೊದಲು ನಿಮ್ಮವರು ಹಾಗೂ ನೀವು ಮಾಡಿದ, ಮಾಡುತ್ತಿರುವ ಮಹಾ ಮೋಸಗಳ ಬಗ್ಗೆ ಒಮ್ಮೆ ಆತ್ಮ ವಿಮರ್ಶೆ ಮಾಡಿಕೊಳ್ಳಿ ಎಂದು ಆಕ್ರೋಶ ಹೊರಹಾಕಿದ್ದಾರೆ.

ಕೊರಗ ತನಿಯ ದೇವರು ಅಲ್ಲ, ದೈವವೂ ಅಲ್ಲ. ನಮ್ಮ ಸಮುದಾಯದ ಒಬ್ಬ ಗುರಿಕಾರ. ನಿಮ್ಮ ಮಡಿವಂತಿಕೆಯ ಮೋಸ ಕುತಂತ್ರಕ್ಕೆ ಬಲಿಯಾದವನು. ಕೊರಗ ತನಿಯ ಸಾಮಾಜಿಕ ನ್ಯಾಯದ ಪ್ರತಿಕಾ. ಹುಭಾಶಿಕನ್ನು ನೇರವಾಗಿ ಎದುರಿಸಲು ಸಾಧ್ಯವಾಗದೆ ಮೊಸದಿಂದ ಸಾಯಿಸಿ ಇಡೀ ಸಮುದಾಯವನ್ನು ನಿರ್ಗತಿಕ ಪರಿಸ್ಥಿತಿಗೆ ದೂಡಲಾಗಿದೆ. ಹಾಗೆ ಕೊರಗ ತನಿಯನ ಬದುಕು ಸಹ ದುರಂತ ಕಥೆಯಾಗಿದೆ ಎಂದು ಅವರು ಹೇಳಿಕೆಯಲ್ಲಿ ದೂರಿದ್ದಾರೆ.

ಕೊರಗ ತನಿಯನಿಗೆ ಸಂಬಂಧಿಸದೆ ಇರುವ ವೇಷವನ್ನು ಕೊರಗ ತನಿಯನ ವೇಷವೆಂದು ಬಣ್ಣಿಸಿ ಜನರ ನಂಬಿಕೆಯನ್ನು ದುರುಪಯೋಗ ಮಾಡಿಕೊಂಡು ಪದೇ ಪದೇ ಕೊರಗಜ್ಜ ಮತ್ತು ಕೊರಗ ಸಮುದಾಯವನ್ನು ಅಪಮಾನ ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

ಹಿಂದೂ ಇರಲಿ ಮುಸ್ಲಿಂ ಇರಲಿ ಮದುವೆ, ಜಾತ್ರೆ, ತಂಬಿಲದಲ್ಲಿ ನಮ್ಮ ಗುರಿಕಾರ ಕೊರಗ ತನಿಯನ ವೇಷ ಹಾಕಲು ನಿಮಗೆ ಒಪ್ಪಿಗೆ ಕೊಟ್ಟವರು ಯಾರು. ಕೊರಗರ ವೇಷದಲ್ಲಿ ಕೊರಗ ಸಮುದಾಯದ ಘನತೆ ಗೌರವದ ಬದುಕಿಗೆ ಅವಮಾನ ಮಾಡಿ ಪದ ಪ್ರಯೋಗ ಮಾಡುವುದು ಎಷ್ಟು ಸರಿ ಎಂದು ಅವರು ಪ್ರಶ್ನಿಸಿದ್ದಾರೆ.

ಯಕ್ಷಗಾನದಲ್ಲಿ ಬ್ರಾಹ್ಮಣ ವೇಷ, ಮುಸ್ಲಿಂ ವೇಷ ಹಾಕಿದಕ್ಕೆ ತಾವೆಲ್ಲರೂ ಬಹಳ ಪ್ರತಿಕ್ರಿಯೆ ನೀಡುವವರು, ವಿರೋಧಿಸುವವರು, ಕೊರಗರ ವೇಷ ಹಾಕಿ ನಮ್ಮನ್ನು ಹಿಯಾಳಿಸುವಿರಲ್ಲ ಆಗ ನಿಮ್ಮ ಹಿಂದೂ ಧರ್ಮದಲ್ಲಿ ಮತ್ತು ಈ ಪ್ರಜಾಪ್ರಭುತ್ವದ ನ್ಯಾಯಯುತ ಸಮಾಜದಲ್ಲಿ ಕೊರಗರು ಇರುವುದಿಲ್ಲವೇ ಎಂದು ಅವರು ಪ್ರಶ್ನಿಸಿದ್ದಾರೆ.

ಇಡೀ ಕೊರಗ ಸಮುದಾಯದ ಅಸ್ತಿತ್ವವನ್ನು ಬುಡಮೇಲು ಮಾಡಿದವರು ಕೊರಗ ತನಿಯನನ್ನು ದೈವ, ದೇವರ ಹೆಸರಿನಲ್ಲಿ ರಾಜಕೀಯ ಮಾಡುವುದನ್ನು ನಿಲ್ಲಿಸಬೇಕು. ವಿನಾಶದಂಚಿಗೆ ಬಂದಿರುವ ಕೊರಗ ಸಮುದಾಯದ ಉಳಿಯುವಿಗೆ ನಿಮ್ಮ ಕೊಡುಗೆ ಏನು ಎಂಬುದು ತಿಳಿಸಬೇಕು. ಕೊರಗ ತನಿಯ ಮತ್ತು ಕೊರಗ ಸಮುದಾಯವನ್ನು ರಾಜಕೀಯಕ್ಕೆ ಬಳಸಿ ಅಪಮಾನ ಮಾಡಿರುವುದನ್ನು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಖಂಡಿಸುತ್ತದೆ. ಹಾಗೆ ಎಲ್ಲರೂ ಸಾಲೆತ್ತೂರಿನ ಕೊರಗಜ್ಜ ವೇಷದ ವಿವಾದಕ್ಕೆ ಸಂಬಂಧಿಸಿದಂತೆ ದ್ವೇಷ ಹರಡಲು ಮಾಡಿರುವ ಹುನ್ನಾರಗಳನ್ನು ವಿಫಲಗೊಳಿಸಿ ಶಾಂತಿ ಸೌಹಾರ್ದತೆ ಕಾಪಾಡಬೇಕು ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.


'ಒಂದು ಪಾಡ್ದಾನದ ಪ್ರಕಾರ ಮೈರಕ್ಕನ ಆಶ್ರಮದಲ್ಲಿ ಬೆಳೆದ ತನಿಯ ದೊಡ್ಡವನಾದ ಬಳಿಕ ಎಣಸೂರು ಬಾಳಿಕೆಯ ರಾಜ ದೈವಗಳ ನೇಮಕ್ಕೆ ತೆಂಗಿನ ಎಳೆ ಗರಿ, ಸೀಯಾಳ, ಬಾಳೆದಿಂಡು, ಸಿಂಗಾರ ಇತ್ಯಾದಿ ಹೊರೆಯನ್ನು ಹೊರಲು ಏಳು ಮಂದಿ ಕೆಲಸದವರು ಬರದೆ ಇದ್ದಾಗ ತನಿಯ ಒಬ್ಬನೇ ತಂದು ಕೊಡುತ್ತಾನೆ. ಆದರೆ ಕಾಡು ಕೊರಗ ಎನ್ನುವ ಕಾರಣಕ್ಕೆ ಅವನನ್ನು ದೇವಸ್ಥಾನದ ಒಳಗೆ ಬರಲು ನಿರಾಕರಿಸಲಾಗಿದೆ. ಇದನ್ನು ತನಿಯ ಪ್ರತಿಭಟಿಸುತ್ತಾನೆ. ತಾನು ತಂದ ವಸ್ತುಗಳು ಆಗುತ್ತದೆ, ಆದರೆ ನಾನು ಆಗುವುದಿಲ್ಲವೆ ಎಂದು ಪ್ರಶ್ನಿಸುತ್ತಾನೆ. ಅಲೆ ಪಕ್ಕದಲ್ಲಿ ಇರುವ ಮರದಿಂದ ತನ್ನ ಹೆಂಡತಿಗೆ ಮಾಪಲ ಹಣ್ಣು ಕೊಯ್ಯುತ್ತಾನೆ. ಆಗ ಅಲ್ಲಿನ ಮೈಸಂದಾ ಮತ್ತು ಕೊಡಂಗೆನಾರ್ ದೈವಗಳ ಕೆಂಗಣ್ಣಿಗೆ ಗುರಿಯಾಗಿ ಮಾಯವಾದನು. ಈಗಲೂ ಆ ದೈವಗಳು ಶ್ರೇಣೀಕಣದಲ್ಲಿ ಕೊರಗ ತನಿಯನಿಗಿಂತ ಮೇಲಿವೆ ಎಂಬುದನ್ನು ಗಮನಿಸಬೇಕು. ಹಾಗೆ ಇನ್ನೊಂದು ಪಾಡ್ದಾನದಲ್ಲಿ ದೇವಸ್ಥಾನದ ಪ್ರಾಂಗಣದಲ್ಲಿ ಇರುವ ಮಾಫಲ ಹುಳಿ ಕೊಯ್ಯಲು ಹೋಗುವಾಗ ಆತನನ್ನು ಬ್ರಾಹ್ಮಣರು ಕಡಿದು ಕೊಲ್ಲುತ್ತಾರೆ' ಎಂದು ಶ್ರೀಧರ ನಾಡ ತಿಳಿಸಿದ್ದಾರೆ.

ಉಡುಪಿಯಲ್ಲಿ ಅಂಗನವಾಡಿ ನೌಕರರಿಂದ ಧರಣಿ:

ವಿವಿಧ ಬೇಡಿಕೆಗಳನ್ನು ಈಡೇರಿಸವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ರಾಜ್ಯಾದ್ಯಂತ ಕರೆ ನೀಡಿದ ಮೇರೆಗೆ ಉಡುಪಿ ಜಿಲ್ಲಾಧಿಕಾರಿ ಕಚೇರಿ ಹಾಗೂ ಬ್ರಹ್ಮಾವರ ತಾಲೂಕು ಕಚೇರಿಗಳ ಎದುರು ಜನವರಿ 10 ರಂದು ಪ್ರತಿಭಟನಾ ಧರಣಿ ನಡೆಯಿತು.

ಉಡುಪಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲಾ ಸಮಿತಿ ಅಧ್ಯಕ್ಷೆ ಭಾರತಿ, ಕಾರ್ಯದರ್ಶಿ ಸುಶೀಲಾ ನಾಡ, ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಸಿಐಟಿಯು ಉಡುಪಿ ತಾಲೂಕು ಕಾರ್ಯದರ್ಶಿ ಕವಿರಾಜ್ ಉಪಸ್ಥಿತರಿದ್ದರು.

ಎಸ್‌ಬಿಐ–ಅದಾನಿ ‘ಜತೆ ಸಾಲನೀಡಿಕೆ’ ಒಪ್ಪಂದ: ತಿರಸ್ಕರಿಸಿದ ಕೃಷಿ ಕಾಯ್ದೆಗಳ ಪರೋಕ್ಷ ಹೇರಿಕೆ



ಕೇವಲ 60 ಶಾಖೆಗಳಿರುವ ಅದಾನಿ ಕ್ಯಾಪಿಟಲ್ ಎಂಬ ಒಂದು ‘ಬ್ಯಾಂಕೇತರ ಹಣಕಾಸು ಕಂಪನಿ’ (ಎನ್‌ಬಿಎಫ್‌ಸಿ) ಮತ್ತು 22,000 ಶಾಖೆಗಳನ್ನು ಹೊಂದಿರುವ, ದೇಶದ ಅತಿ ದೊಡ್ಡ ಬ್ಯಾಂಕಾದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನಡುವೆ ಇತ್ತೀಚೆಗೆ ಏರ್ಪಟ್ಟ ಒಂದು ಒಪ್ಪಂದದ ಪ್ರಕಾರ, ಇವರಿಬ್ಬರೂ ಜತೆಗೂಡಿ ಸಾಲ ವಿತರಿಸುವ ಒಂದು ವ್ಯವಸ್ಥೆ ಜಾರಿಯಾಗಲಿದೆ -ಸಾಲದ 80% ಭಾಗವನ್ನು ಸ್ಟೇಟ್ ಬ್ಯಾಂಕ್ ಮತ್ತು 20% ಭಾಗವನ್ನು ಅದಾನಿ ಕ್ಯಾಪಿಟಲ್ ಕೊಡುತ್ತವೆ. ಯಾರಿಗೆ ಎಷ್ಟು ಸಾಲ ಕೊಡಬೇಕು ಎಂಬುದನ್ನು ಅದಾನಿ ಕ್ಯಾಪಿಟಲ್ ನಿರ್ಧರಿಸುತ್ತದೆ. ಅದನ್ನು ತೀರ್ಮಾನಿಸುವ ಯಾವ ಅಧಿಕಾರವನ್ನೂ ಹೊಂದಿಲ್ಲದ ಬ್ಯಾಂಕ್, ಆ ಸಾಲದಿಂದ ಉಂಟಾಗಬಹುದಾದ ರಿಸ್ಕಿನ ಬಹು ಭಾಗವನ್ನು ಹೊರಬೇಕಾಗುತ್ತದೆ. ಮೋದಿ ಸರ್ಕಾರವು ತನ್ನ ಬಂಟ ಬಂಡವಾಳಶಾಹಿಗೆ ಅನುಗ್ರಹಿಸುತ್ತಿರುವ ಅನುಕೂಲಗಳ ಭಾಗವಾಗಿರುವ ಈ ಎಸ್‌ಬಿಐ-ಅದಾನಿ ಒಪ್ಪಂದವು ಭೂ ಬಳಕೆಯ ವಿಧಾನವನ್ನು ಬದಲಾಯಿಸುವ ಒಂದು ನವೀನ ಮಾರ್ಗ. ಸರ್ಕಾರವು ಏನನ್ನು ಮೂರು ಕೃಷಿ ಕಾನೂನುಗಳ ಮೂಲಕ ಸಾಧಿಸಲು ಸಾಧ್ಯವಾಗಲಿಲ್ಲವೋ ಅದನ್ನೇ ಸಾಧಿಸಲು ಮತ್ತೊಮ್ಮೆ ಪ್ರಯತ್ನಿಸುತ್ತಿದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ವಸಾಹತುಶಾಹಿ ಕಾಲದಲ್ಲಿ ರೈತರು ಸಾಲವನ್ನು ಖಾಸಗಿ ಲೇವಾದೇವಿಗಾರರಿಂದ ಪಡೆಯುತ್ತಿದ್ದರು. ಈ ಲೇವಾದೇವಿಗಾರರು ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆಯುತ್ತಿದ್ದರು ಮತ್ತು ಅದನ್ನು ದುಬಾರಿ ಬಡ್ಡಿ ದರದಲ್ಲಿ ರೈತರಿಗೆ ಸಾಲ ಕೊಡುತ್ತಿದ್ದರು. ಲೇವಾದೇವಿಗಾರರಿಂದ ಪಡೆದ ಸಾಲವನ್ನು ರೈತರು ಮರುಪಾವತಿಸದಿದ್ದರೆ ಅದರಿಂದ ಆಗಬಹುದಾದ ಹಾನಿಯನ್ನು(ರಿಸ್ಕ್) ಪೂರ್ಣವಾಗಿ ಲೇವಾದೇವಿಗಾರನೇ ಹೊರಬೇಕಿತ್ತು. ಈ ಬಗ್ಗೆ ಬ್ಯಾಂಕ್ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ, ಏಕೆಂದರೆ, ರೈತರ ಮತ್ತು ಬ್ಯಾಂಕ್ ನಡುವೆ ಯಾವ ಸಂಬಂಧವೂ ಇರಲಿಲ್ಲ ಎಂಬ ಸಂಗತಿಯನ್ನು ಪ್ರಾಂತೀಯ ಬ್ಯಾಂಕಿಂಗ್ ವಿಚಾರಣಾ ಸಮಿತಿಯ ವರದಿಗಳು ತಿಳಿಸುತ್ತವೆ.

ವಸಾಹತು ಕಾಲದ ಈ ಸಂಗತಿಯನ್ನು ಬ್ಯಾಂಕುಗಳು ಮತ್ತು ಬ್ಯಾಂಕೇತರ ಹಣಕಾಸು ಕಂಪನಿಗಳು ಜತೆಗೂಡಿ ಸಾಲ ಕೊಡುವ ಒಂದು ಹೊಸ ವ್ಯವಸ್ಥೆಯನ್ನು ಜಾರಿಗೆ ತರುತ್ತಿರುವ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾಗಿ ಬಂತು. ಅದಾನಿ ಕ್ಯಾಪಿಟಲ್ ಎಂಬ ಒಂದು ‘ಬ್ಯಾಂಕೇತರ ಹಣಕಾಸು ಕಂಪನಿ’ (ಎನ್‌ಬಿಎಫ್‌ಸಿ) ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನಡುವೆ ಇತ್ತೀಚೆಗೆ ಏರ್ಪಟ್ಟ ಒಂದು ಒಪ್ಪಂದ ಪ್ರಕಾರ, ಸಾಲದಾತರು (ಬ್ಯಾಂಕ್ ಮತ್ತು ಎನ್‌ಬಿಎಫ್‌ಸಿ) ಜತೆಗೂಡಿ ಸಾಲ ವಿತರಿಸುವ ಒಂದು ವ್ಯವಸ್ಥೆ ಜಾರಿಯಾಗಲಿದೆ. ಈ ಏರ್ಪಾಟಿನ ಪ್ರಕಾರ, ಸಾಲದ ಶೇಕಡಾ 80 ಭಾಗವನ್ನು ಸ್ಟೇಟ್ ಬ್ಯಾಂಕ್ ಮತ್ತು ಶೇಕಡಾ 20 ಭಾಗವನ್ನು ಅದಾನಿ ಕ್ಯಾಪಿಟಲ್ ಕೊಡುತ್ತವೆ. ಇಲ್ಲಿರುವ ಒಂದು ಮುಖ್ಯವಾದ ಅಂಶವೆಂದರೆ, ಯಾರಿಗೆ ಎಷ್ಟು ಸಾಲ ಕೊಡಬೇಕು ಎಂಬುದನ್ನು ಈ ಎನ್‌ಬಿಎಫ್‌ಸಿಯೇ ನಿರ್ಧರಿಸುತ್ತದೆ. ಈ ಸಂಬಂಧವಾಗಿ ಮಾರ್ಗಸೂಚಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಜಾರಿ ಮಾಡಲಿದೆ ಎಂಬುದನ್ನು ಊಹಿಸಿಕೊಳ್ಳಬೇಕಿದೆ. ಈ ಏರ್ಪಾಟಿನಲ್ಲಿರುವ ಇನ್ನೊಂದು ಪ್ರಮುಖ ಅಂಶವೆಂದರೆ, ಸಾಲಗಾರನು ಸಾಲ ತೀರಿಸುವಲ್ಲಿ ಒಂದೊಮ್ಮೆ ವಿಫಲನಾದರೆ, ಅದರಿಂದಾಗುವ ನಷ್ಟವನ್ನು ಬ್ಯಾಂಕ್ ಮತ್ತು ಎನ್‌ಬಿಎಫ್‌ಸಿ ಎರಡೂ ಹೊರಬೇಕಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಯಾರಿಗೆ ಸಾಲ ಕೊಡಬೇಕು ಎಂಬುದನ್ನು ತೀರ್ಮಾನಿಸುವ ಯಾವ ಅಧಿಕಾರವನ್ನೂ ಹೊಂದಿಲ್ಲದ ಬ್ಯಾಂಕ್, ಸಾಲದಿಂದ ಉಂಟಾಗಬಹುದಾದ ರಿಸ್ಕನ್ನು ಹೊರಬೇಕಾಗುತ್ತದೆ. ಯಾರಿಗೆ ಮತ್ತು ಎಷ್ಟು ಸಾಲ ಕೊಡಬೇಕು ಎಂಬುದನ್ನು ಬ್ಯಾಂಕ್ ನಿರ್ಧರಿಸಿದ್ದರೆ, ಆಗ, ಅದರ ರಿಸ್ಕನ್ನು ಬ್ಯಾಂಕ್ ಹೊರಬೇಕಾಗುತ್ತಿತ್ತು ಮತ್ತು ಆ ವ್ಯವಹಾರವು ಸಾಲಗಾರ ಮತ್ತು ಬ್ಯಾಂಕ್ ನಡುವಿನ ನೇರಾ ನೇರಾ ದ್ವಿಪಕ್ಷೀಯ ಸಂಬಂಧವಾಗುತ್ತಿತ್ತು ಹಾಗೂ ಆ ಸಾಲವನ್ನು ಮತ್ತೊಬ್ಬರ ಜತೆಗೂಡಿ ನೀಡುವ ಅಗತ್ಯವೇ ಇರುತ್ತಿರಲಿಲ್ಲ.

ಹಾಗೆ ನೋಡಿದರೆ, ವಸಾಹತುಶಾಹಿ ಕಾಲದ ಲೇವಾದೇವಿದಾರರಿಗೆ ಹೋಲಿಸಿದರೆ, ಇಂದಿನ ಎನ್‌ಬಿಎಫ್‌ಸಿಗಳು ಉತ್ತಮ ಸ್ಥಿತಿಯಲ್ಲಿವೆ ಎಂದೇ ಹೇಳಬಹುದು. ಯಾರಿಗೆ ಎಷ್ಟು ಸಾಲ ನೀಡಬೇಕು ಮತ್ತು ಯಾವ ಷರತ್ತುಗಳ ಮೇಲೆ ಎಂಬುದನ್ನು ಇಂದಿನ ಎನ್‌ಬಿಎಫ್‌ಸಿಗಳು ನಿರ್ಧರಿಸುತ್ತವೆ. ಆದರೆ, ವಸಾಹತುಶಾಹಿ ಕಾಲದ ಲೇವಾದೇವಿಗಾರರು ಎದುರಿಸುತ್ತಿದ್ದ ರಿಸ್ಕ್, ಇಂದಿನ ಎನ್‌ಬಿಎಫ್‌ಸಿಗಳಿಗಿಲ್ಲ. ಅದೇ ಸಮಯದಲ್ಲಿ, ಇಂದಿನ ಬ್ಯಾಂಕ್‌ಗಳ ಪರಿಸ್ಥಿತಿ, ವಸಾಹತುಶಾಹಿ ಕಾಲದಲ್ಲಿ ಬ್ಯಾಂಕ್‌ಗಳು ಎದುರಿಸುತ್ತಿದ್ದುದಕ್ಕಿಂತಲೂ ಕೆಟ್ಟದಾಗಿದೆ. ಯಾರಿಗೆ ಸಾಲ ಕೊಡಬೇಕು ಎಂಬುದನ್ನು ತೀರ್ಮಾನಿಸುವ ಅಧಿಕಾರವನ್ನೂ ಹೊಂದಿಲ್ಲದ ಅಥವಾ ಸಾಲಗಾರನ ಬಗ್ಗೆ ಹೆಚ್ಚಿನ ಮಾಹಿತಿ ಹೊಂದಿಲ್ಲದ ಬ್ಯಾಂಕ್, ಆ ಸಾಲದಿಂದ ಉಂಟಾಗಬಹುದಾದ ರಿಸ್ಕ್‌ಅನ್ನು ಹೊರಬೇಕಾಗುತ್ತದೆ. ಮೋದಿ ಸರ್ಕಾರವು ತನ್ನ ಬಂಟ ಬಂಡವಾಳಶಾಹಿಗಳಿಗೆ (ಅಂದರೆ, ಎನ್‌ಬಿಎಫ್‌ಸಿಗಳ ಮಾಲೀಕರಿಗೆ) ಅನುಕೂಲಗಳ ಮಳೆಗರೆದಿದೆ. ಅವರ ವ್ಯವಹಾರ–ವಹಿವಾಟುಗಳು ವೇಗವಾಗಿ ವಿಸ್ತರಿಸಬಹುದು ಮತ್ತು ಲಾಭಗಳು ಯಥೇಚ್ಛವಾಗಬಹುದು. ಅದಕ್ಕಾಗಿ ಅವರು ರಿಸ್ಕ್ ತೆಗೆದುಕೊಳ್ಳಬೇಕಾಗಿಲ್ಲ. ಅದನ್ನೆಲ್ಲಾ ನೆಲಕ್ಕೆ ಬೀಳುತ್ತಿರುವ ರಾಷ್ಟ್ರೀಕೃತ ಬ್ಯಾಂಕುಗಳ ತಲೆಗೆ ಕಟ್ಟುವ ವ್ಯವಸ್ಥೆಯನ್ನು ಎನ್‌ಬಿಎಫ್‌ಸಿಗಳಿಗೆ ಸರಕಾರ ಅನುಗ್ರಹಿಸಿದೆ. ಈ ಬಗ್ಗೆ ಅದಕ್ಕೆ ಸ್ವಲ್ಪವೂ ಅಳುಕಿಲ್ಲ. ರಾಷ್ಟ್ರೀಕೃತ ಬ್ಯಾಂಕ್‌ಗಳ ರಿಸ್ಕನ್ನು ಠೇವಣಿದಾರರು ಭರಿಸುವಂತೆ ಮಾಡುವ ಯೋಜನೆಗಳು ಈಗಾಗಲೇ ತಯಾರಾಗುತ್ತಿವೆ. ರಾಷ್ಟ್ರೀಕೃತ ಬ್ಯಾಂಕ್‌ಗಳು ರಿಸ್ಕ್‌ಗೆ ಒಳಗಾದ ಸಂದರ್ಭದಲ್ಲಿ ಅಂತಹ ನಷ್ಟವನ್ನು ಸರಿದೂಗಿಸಲು ಸರ್ಕಾರವು ಬಜೆಟ್‌ನಿಂದ ಹಣ ಒದಗಿಸಬೇಕಾಗಿಲ್ಲ. ಅಷ್ಟಕ್ಕೂ ನಷ್ಟಗಳು ಹೆಚ್ಚಾದರೆ, ಈ ಬ್ಯಾಂಕ್‌ಗಳನ್ನು ಕುರುಡು ಕಾಸಿಗೆ ಮಾರಬಹುದು. ಹೇಗಾದರೂ ಸರಿ ಅವುಗಳನ್ನು ಖಾಸಗಿಯವರಿಗೆ ಒಪ್ಪಿಸಲೇಬೇಕು ಎಂಬ ಹಠಕ್ಕೆ ಬಿದ್ದಿರುವ ಸರ್ಕಾರಕ್ಕೆ ಅವುಗಳನ್ನು ಮಾರಲು ನಷ್ಟದ ಒಂದು ನೆಪವೂ ಒದಗುತ್ತದೆ.

ಈ ಎಲ್ಲವನ್ನೂ ಮಾಡುತ್ತಿರುವಾಗ, ಒಂದು ಪ್ರಶ್ನೆಗೆ ಉತ್ತರವಿಲ್ಲ: ಈ ಏರ್ಪಾಟನ್ನು ಮಾಡುತ್ತಿರುವುದಾದರೂ ಏಕೆ? ಈ ಏರ್ಪಾಟಿನಿಂದ ರೈತರಿಗೆ ಅಥವಾ ಮಧ್ಯಮ, ಸಣ್ಣ ಮತ್ತು ಕಿರು ಕೈಗಾರಿಕಾ ವಲಯಕ್ಕೆ, ಅಥವಾ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಅಥವಾ ಎನ್‌ಬಿಎಫ್‌ಸಿಗಳ ಮಾಲೀಕರನ್ನು ಹೊರತುಪಡಿಸಿ ಬೇರೆ ಯಾರಿಗಾದರೂ ಒಂದು ಸಣ್ಣ ಪ್ರಯೋಜನವಾದರೂ ಇದೆಯೇ? “ಇಲ್ಲ” ಎಂಬದೇ ಘಂಟಾಘೋಷ ಉತ್ತರ. ಈ “ಇಲ್ಲ” ಉತ್ತರವನ್ನು ಒಂದು ಸಮಂಜಸ ವಾದದೊಂದಿಗೆ ಅಲ್ಲಗಳೆಯುವ ಒಬ್ಬ ಸರ್ಕಾರಿ ವಕ್ತಾರನನ್ನಾದರೂ ಕಾಣಲಾಗದು.

ಅದಾನಿ ಕ್ಯಾಪಿಟಲ್ ಎಂಬ ಎನ್‌ಬಿಎಫ್‌ಸಿಯೊಂದಿಗೆ ಜತೆಗೂಡಿ ಕೊಡುವ ಸಾಲಗಳ ಸಂಬಂಧವಾಗಿ ಮಾಡಿಕೊಂಡಿರುವ ಒಪ್ಪಂದವನ್ನು ಸಮರ್ಥಿಸಿಕೊಳ್ಳಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕೃತ ಹೇಳಿಕೆ ಏನೆಂದರೆ, ಈ ಏರ್ಪಾಟು “ಗ್ರಾಹಕ ನೆಲೆಯನ್ನು ವಿಸ್ತರಿಸಲು ಮತ್ತು ದೇಶದ ಸೌಲಭ್ಯ–ರಹಿತ ಕೃಷಿ ವಿಭಾಗದೊಂದಿಗೆ ಸಂಪರ್ಕ ಸಾಧಿಸಲು ಮತ್ತು ಭಾರತದ ಕೃಷಿ ಬೆಳವಣಿಗೆಗೆ ಇನ್ನೂ ಹೆಚ್ಚಿನ ಕೊಡುಗೆ ನೀಡಲು” ಸಹಾಯ ಮಾಡುತ್ತದೆ. ಈ ವಾದವನ್ನು ಕೇಳಿ ನಗಬಹುದು, ಅಷ್ಟೇ. ಎಸ್‌ಬಿಐ ಒಂದು ದೈತ್ಯ ಬ್ಯಾಂಕ್. ಭಾರತದಾದ್ಯಂತ 22,000 ಶಾಖೆಗಳನ್ನು ಹೊಂದಿದೆ. ಒಂದು ಕೋಟಿ ನಲವತ್ತು ಲಕ್ಷ ರೈತ ಸಾಲ ಖಾತೆಗಳನ್ನು ಹೊಂದಿದೆ. ರೈತರಿಗೆ ಎರಡು ಲಕ್ಷ ಕೋಟಿ ರೂ.ಗಳ ಸಾಲ ನೀಡಿದೆ. ದೇಶದ ಈ ಅತಿ ದೊಡ್ಡ ಬ್ಯಾಂಕ್‌ನ್ನು ಆನೆಗೆ ಹೋಲಿಸಿದರೆ, ದೇಶಾದ್ಯಂತ 60 ಶಾಖೆಗಳನ್ನು ಹೊಂದಿದ ಮತ್ತು 28,000 ಗ್ರಾಹಕರಿಗೆ 1,300 ಕೋಟಿ ರೂ ಸಾಲ ನೀಡಿರುವ ಅದಾನಿ ಕ್ಯಾಪಿಟಲ್ ಒಂದು ಆಡಿನ ಗಾತ್ರದ್ದೂ ಅಲ್ಲ. ಹಾಗಾಗಿ, ಅದಾನಿ ಕ್ಯಾಪಿಟಲ್ “ಎಸ್‌ಬಿಐನ ಗ್ರಾಹಕರ ನೆಲೆಯನ್ನು ವಿಸ್ತರಿಸಲು ಸಹಾಯ ಮಾಡುತ್ತದೆ” ಎಂದು ಹೇಳಿರುವುದು ಎಷ್ಟು ತಮಾಷೆಯಾಗಿ ಕಾಣುತ್ತದೆ ಎಂದರೆ, ನಮ್ಮ ಪ್ರತಿಷ್ಠಿತ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಐಎಸ್‌ಆರ್‌ಒ ತನ್ನ ರಾಕೆಟ್ ಉಡಾವಣಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಪಟಾಕಿ ತಯಾರಿಸುವ ಶಿವಕಾಶಿಯ ಯಾವುದಾದರೂ ಒಂದು ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ ಎಂದು ಹೇಳಿದಂತಾಗುತ್ತದೆ!

ವಾಸ್ತವವಾಗಿ, ಈ ಒಪ್ಪಂದವನ್ನು ಸಾರ್ವಜನಿಕ–ಖಾಸಗಿ ಪಾಲುದಾರಿಕೆ ಎಂದು ಕರೆಯಲೂ ಸಹ, ವ್ಯಾಖ್ಯಾನವನ್ನು ಹಿಗ್ಗಾ ಮುಗ್ಗಾ ಎಳೆದಾಡಬೇಕಾಗುತ್ತದೆ. ಸಾರ್ವಜನಿಕ–ಖಾಸಗಿ ಪಾಲುದಾರಿಕೆಯಲ್ಲಿ, ಖಾಸಗಿ ವಲಯವು ಲಾಭವನ್ನು ಜೇಬಿಗಿಳಿಸುತ್ತದೆ ಮತ್ತು ನಷ್ಟವನ್ನು ಸಾರ್ವಜನಿಕ ವಲಯದ ತಲೆಗೆ ಕಟ್ಟುತ್ತದೆ. ಸಾರ್ವಜನಿಕ–ಖಾಸಗಿ ಪಾಲುದಾರಿಕೆಯಲ್ಲಿ ಈ ಅಪಾಯವಿದ್ದರೂ ಸಹ, ಖಾಸಗಿ ವಲಯದ ಕೊಡುಗೆ ಅಲ್ಪ–ಸ್ವಲ್ಪವಾದರೂ ಇರುತ್ತದೆ. ಅದರ ಕೊಡುಗೆಯ ಬಗ್ಗೆ ಹೆಚ್ಚು ನಿರೀಕ್ಷಿಸದಿದ್ದರೂ ಅದು ಬರಿಗೈಯಲ್ಲಂತೂ ಬರುವುದಿಲ್ಲ. ಆದರೆ, ಈ ಪಾಲುದಾರಿಕೆಯ ವಿಷಯ ಹಾಗಲ್ಲ. ಈ ಒಪ್ಪಂದದಲ್ಲಿ, ಅದಾನಿ ಕ್ಯಾಪಿಟಲ್ ಏನನ್ನೂ ತರುವುದಿಲ್ಲ. ಎಸ್‌ಬಿಐ ಸಾಲಕೊಡಲು ಹಣವನ್ನೂ ತರಬೇಕಾಗುತ್ತದೆ ಮತ್ತು ಸಾಲದಾತನ ರಿಸ್ಕ್‌ಅನ್ನೂ ಪೂರ್ಣವಾಗಿ ಹೊರಬೇಕಾಗುತ್ತದೆ. ಚಾಟಿ ಇಲ್ಲದೆ ಬುಗುರಿ ಆಡಿಸುವ ಅದಾನಿ ಕ್ಯಾಪಿಟಲ್, ರಿಸ್ಕನ್ನು ಎಸ್‌ಬಿಐ ತಲೆಗೆ ಕಟ್ಟಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತದೆ. ಇದು ಉಂಡೂ ಹೋದ ಕೊಂಡೂ ಹೋದ ಪ್ರಕರಣವಾಗುತ್ತದೆ.

ಸ್ವಜನ ಪಕ್ಷಪಾತದ ಒಂದು ಲಜ್ಜೆಗೆಟ್ಟ ಉದ್ದೇಶಕ್ಕಾಗಿ ಸಾರ್ವಜನಿಕ ವಲಯದ ಒಂದು ದೊಡ್ಡ ಬ್ಯಾಂಕ್‌ಅನ್ನು ಅದು ಸರ್ಕಾರದ ಜಾಗೀರ್‌ನ ಒಂದು ಭಾಗವೆಂಬಂತೆ ಬಳಸಲಾಗುತ್ತಿದೆ. ಈ ಪಕ್ಷಪಾತಕ್ಕೆ ತಲೆಬಾಗಿದ ಎಸ್‌ಬಿಐನ ವರ್ತನೆಯೂ ಅವಮಾನಕರವಾಗಿದೆ. ದೇಶದ ಬ್ಯಾಂಕಿಂಗ್ ವಲಯದ ಮೇಲೆ ಮೇಲುಸ್ತುವಾರಿ ಪಾತ್ರವನ್ನು ನಿರ್ವಹಿಸುವ ಭಾರತೀಯ ರಿಸರ್ವ್ ಬ್ಯಾಂಕ್ ಇಂತಹ ಒಂದು ಒಪ್ಪಂದಕ್ಕೆ ಸಮ್ಮತಿಸುವುದೂ ಸಹ ಸಂಪೂರ್ಣವಾಗಿ ಅವಮಾನಕರವೇ. ಆದರೆ, ಅಂಬಾನಿಯವರ ಕಂಪನಿಗೆ ಸಂಪೂರ್ಣವಾಗಿ ಅನುಕೂಲ ಮಾಡಿಕೊಡುವಂಥಹ ಒಂದು ಒಪ್ಪಂದಕ್ಕೆ ಎಸ್‌ಬಿಐಅನ್ನು ಕಟ್ಟಿಹಾಕಿದ ಅದರ ಅಧ್ಯಕ್ಷರೊಬ್ಬರು ತಾವು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಅಂಬಾನಿಗಳೊಂದಿಗೆ ಕೆಲಸಕ್ಕೆ ಸೇರಿಕೊಳ್ಳವಂತಹ ವ್ಯಕ್ತಿಗಳನ್ನು ತನ್ನ ಆಡಳಿತ ಮಂಡಳಿಯಲ್ಲಿ ಹೊಂದಿರುವ ಎಸ್‌ಬಿಐನಿಂದ ಏನಾದರೂ ಬೇರೆಯದನ್ನು ನಿರೀಕ್ಷಿಸಬಹುದೇ?

ಜತೆಗೂಡಿ ಕೊಡುವ ಸಾಲ ಏರ್ಪಾಟು, ಕಾರ್ಪೊರೇಟ್ ದೈತ್ಯರ ಒಡೆತನದ ಎನ್‌ಬಿಎಫ್‌ಸಿಗಳಿಗೆ ಅನುಕೂಲ ಮಾಡಿಕೊಡುವುದಕ್ಕಿಂತ ಮಿಗಿಲಾದ ಒಂದು ದೂರದ ಆಲೋಚನೆಯಿಂದ ಕೂಡಿದೆ. ಈಗ ರದ್ದುಗೊಳಿಸಲಾದ ಕೃಷಿ ಕಾನೂನುಗಳ ಉದ್ದೇಶಗಳಲ್ಲಿ ಅತಿ ಮುಖ್ಯವಾದದ್ದೆಂದರೆ, ಆಹಾರ ಧಾನ್ಯಗಳ ಉತ್ಪಾದನೆಯಿಂದ ದೂರ ಸರಿದು ದೇಶದಲ್ಲಿ ಭೂ ಬಳಕೆಯ ಮಾದರಿಯನ್ನು ಬದಲಾಯಿಸುವುದು (ಅಂದರೆ, ಧಾನ್ಯಗಳನ್ನು ಬೆಳೆಯುವ ಭೂಮಿಯಲ್ಲಿ ಹಣ್ಣು ಹಂಪಲುಗಳನ್ನು ಬೆಳೆವುದು). ಮೆಟ್ರೋಪಾಲಿಟನ್ ದೇಶಗಳು ಬಹಳ ದಿನಗಳಿಂದಲೂ ಈ ಬಗ್ಗೆ ಒತ್ತಾಯಿಸುತ್ತಲೇ ಇದ್ದವು. ಕಾರ್ಪೊರೇಟ್–ಹಣಕಾಸು ಕುಳಗಳ ಮತ್ತು ಸಾಮ್ರಾಜ್ಯಶಾಹಿ–ಪರ ಅರ್ಥಶಾಸ್ತ್ರಜ್ಞರು ಈ ಉದ್ದೇಶವನ್ನು ಹಾಡಿ ಹೊಗಳಿದರು. ಮೆಟ್ರೋಪಾಲಿಟನ್ ದೇಶಗಳ ಈ ಬೇಡಿಕೆಗೆ ಕಾರಣವೆಂದರೆ, ಆಹಾರ ಧಾನ್ಯಗಳನ್ನು ಬೆಳೆಯುತ್ತಿರುವ ಭೂಮಿಯನ್ನು ಈ ದೇಶಗಳು ಬಯಸುವ ಆದರೆ ಅವರು ಉತ್ಪಾದಿಸಲು ಸಾಧ್ಯವಾಗದ ಬೆಳೆಗಳನ್ನು ಉತ್ಪಾದಿಸಲು ಬಳಕೆ ಮಾಡಿಕೊಳ್ಳಬೇಕು ಎಂಬುದು. ಏಕೆಂದರೆ, ಈ ದೇಶಗಳು ಆಹಾರ ಧಾನ್ಯಗಳ ಹೆಚ್ಚುವರಿಯನ್ನು ಹೊಂದಿವೆ. ಈ ಹೆಚ್ಚುವರಿಯನ್ನು ಮೂರನೇ ಜಗತ್ತಿನ ದೇಶಗಳಿಗೆ ಮಾರಾಟ ಮಾಡುವ ಉದ್ದೇಶ ಹೊಂದಿವೆ ಮತ್ತು ಅದಕ್ಕೆ ಬದಲಾಗಿ ತಾವು ಬೆಳೆಯಲಾಗದ ಹಣ್ಣು ಹಂಪಲುಗಳನ್ನು ಕೊಳ್ಳಲು ಬಯಸುತ್ತವೆ. ಎಲ್ಲಿಯವರೆಗೆ ಸರ್ಕಾರವು ಮೊದಲೇ ಘೋಷಿಸಿದ ಬೆಲೆಗಳಲ್ಲಿ ಧಾನ್ಯಗಳನ್ನು ರೈತರಿಂದ ಖರೀದಿಸಿ ಅವುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ವಿತರಿಸುತ್ತದೆಯೊ ಅಲ್ಲಿಯವರೆಗೆ ರೈತರು ಧಾನ್ಯಗಳನ್ನು ಬೆಳೆಯುವುದು ನಿಲ್ಲದು. ಹಾಗಾಗಿ, ದೇಶೀಯ ಕಾರ್ಪೊರೇಟ್–ಹಣಕಾಸು ಕುಳಗಳಿಗೆ ಕೃಷಿ ವಲಯದಲ್ಲಿ ಅತಿಕ್ರಮಣಗಳ ಮೂಲಕ ಲಾಭ ದೋಚುವ ಅವಕಾಶಗಳು ಸಂಕುಚಿತವಾಗಿರುತ್ತವೆ.

ಪುಟ 14 ನೋಡಿ



ಆಡಿನ ಗಾತ್ರದ್ದೂ ಅಲ್ಲದ ಅದಾನಿ ಕ್ಯಾಪಿಟಲ್ ಆನೆಗಾತ್ರದ “ಎಸ್‌ಬಿಐನ ಗ್ರಾಹಕರ ನೆಲೆಯನ್ನು ವಿಸ್ತರಿಸಲು ಸಹಾಯ ಮಾಡುತ್ತದೆ” ಎಂದು ಹೇಳಿರುವುದು ಎಷ್ಟು ತಮಾಷೆಯಾಗಿ ಕಾಣುತ್ತದೆ ಎಂದರೆ, ನಮ್ಮ ಪ್ರತಿಷ್ಠಿತ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಐಎಸ್‌ಆರ್‌ಒ ತನ್ನ ರಾಕೆಟ್ ಉಡಾವಣಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಪಟಾಕಿ ತಯಾರಿಸುವ ಶಿವಕಾಶಿಯ ಯಾವುದಾದರೂ ಒಂದು ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ ಎಂದು ಹೇಳಿದಂತಾಗುತ್ತದೆ! ವಾಸ್ತವವಾಗಿ, ಈ ಒಪ್ಪಂದವನ್ನು ಸಾರ್ವಜನಿಕ-ಖಾಸಗಿ ಪಾಲುದಾರಿಕೆ ಎಂದು ಕರೆಯಲೂ ಸಾಧ್ಯವಿಲ್ಲ.

ಉತ್ತರ ಪ್ರದೇಶ ಈಗ ಪಕ್ಷಾಂತರ ಪ್ರದೇಶ–ಬಿಜೆಪಿಗೆ ಭಾರೀ ಆಘಾತ

ಗುರುರಾಜ ದೇಸಾಯಿ

ಮುಂಬರುವ ವಿಧಾನಸಭಾ ಚುನಾವಣೆಗೆ ಮುನ್ನವೇ ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಶಾಕ್ ಮೇಲೆ ಶಾಕ್ ಎದುರಾಗುತ್ತಿದೆ. ಮೂವರು ಸಚಿವರು, ನಾಲ್ವರು ಶಾಸಕರು ಬಿಜೆಪಿಗೆ ರಾಜೀನಾಮೆ ನೀಡಿದ್ದಾರೆ. ಯೋಗಿ ಆಧಿತ್ಯನಾಥ್ ಮತ್ತು ಬಿಜೆಪಿ ಹೇಳಿದಂತೆ ನಡೆದುಕೊಳ್ಳಲಿಲ್ಲ ಎಂದು ಆರೋಪಿಸಿ ರಾಜೀನಾಮೆ ನೀಡಿದ್ದಾರೆ. ಜನವರಿ 20 ರವರೆಗೆ ದಿನಕ್ಕೊಬ್ಬ ಸಚಿವ, ಇಬ್ಬರೂ ಶಾಸಕರು ಸೇರಿದಂತೆ 20 ಕ್ಕೂ ಹೆಚ್ಚುಜನ ರಾಜೀನಾಮೆ ನೀಡುವ ಸಾಧ್ಯತೆ ಇದೆ. ಇನ್ನೊಂದೆಡೆ ಬಿಜೆಪಿ ಕೂಡ ಇತರೆ ಪಕ್ಷಗಳ ಶಾಸಕರನ್ನು ತನ್ನತ್ತ ಸೆಳೆಯುವ ಪ್ರಯತ್ನ ಮಾಡುತ್ತಿದೆ. ಚೆಕ್ ಮತ್ತು ಬಿಟ್ ಆಟದ ಮೂಲಕ ಈಗ ಅಲ್ಲಿ ರಾಜಕೀಯ ರಂಗೇರತೊಡಗಿದೆ. ಹಾಗಾಗಿ ಉತ್ತರ ಪ್ರದೇಶ ಈಗ ಪಕ್ಷಾಂತರ ಪ್ರದೇಶವಾಗಿ ಮಾರ್ಪಟ್ಟಿದೆ.

ಬಿಜೆಪಿ ಪಾಲಿಗೆ ಅತ್ಯಂತ ಮಹತ್ವದ್ದಾಗಿರುವ ಉತ್ತರ ವಿಧಾನಸಭಾ ಚುನಾವಣೆ ಇನ್ನೇನು ಕೆಲವೇ ದಿನಗಳು ಬಾಕಿ ಇರುವಾಗ ಪಕ್ಷ ತೊರೆಯುತ್ತಿರುವ ಸಚಿವರು ಮತ್ತು ಶಾಸಕರು ಬಿಜೆಪಿ ಹೈಕಮಾಂಡ್‌ಗೆ ತಲೆನೋವಾಗಿ ಪರಿಣಮಿಸಿದ್ದಾರೆ. ಹಲವು ಬಿಜೆಪಿ ನಾಯಕರು ಮತ್ತು ಶಾಸಕರು ಸಮಾಜವಾದಿ ಪಕ್ಷದ ಮುಖಂಡರೊಂದಿಗೆ ಸಂಪರ್ಕದಲ್ಲಿದ್ದಾರೆ. ಮುಂದಿನ ದಿನಗಳಲ್ಲಿ ಬಿಜೆಪಿಯಿಂದ ಎಸ್ಪಿಯತ್ತ ಬಹಳ ಮಂದಿ ವಲಸೆ ಹೋಗುವ ನಿರೀಕ್ಷೆ ಇದೆ ಎಂದು ಮೂಲಗಳು ಹೇಳುತ್ತಿವೆ.

ಸ್ವಾಮಿ ಪ್ರಸಾದ್ ಮೌರ್ಯ: ಉತ್ತರ ಪ್ರದೇಶ ಕಾರ್ಮಿಕ ಇಲಾಖೆ ಸಚಿವರಾಗಿದ್ದ ಸ್ವಾಮಿ ಪ್ರಸಾದ್ ಮೌರ್ಯ ಬಿಜೆಪಿಯನ್ನು ಬಿಟ್ಟು ಸಮಾಜವಾದಿ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಅವರು ಹಿಂದುಳಿದ ವರ್ಗಗಳ ಪ್ರಮುಖ ನಾಯಕರಾಗಿದ್ದು, ಯೋಗಿ ಸರ್ಕಾರ ದಲಿತರು, ಹಿಂದುಳಿದ ರೈತರು, ನಿರುದ್ಯೋಗಿ ಯುವಕರು ಮತ್ತು ಸಣ್ಣ ಮತ್ತು ಮಧ್ಯಮ ಪ್ರಮಾಣದ ವ್ಯಾಪಾರಿಗಳ ಬಗೆಗೆ ನಿರ್ಲಕ್ಷ್ಯ ತೋರುವುದನ್ನು ನನಗೆ ಸಹಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ರಾಜೀನಾಮೆ ನೀಡುತ್ತೇನೆ ಎಂದು ಹೇಳಿ ರಾಜೀನಾಮೆ ಪತ್ರದಲ್ಲಿ ಬರೆದಿದ್ದಾರೆ. 'ವಿಭಿನ್ನ ಸಿದ್ಧಾಂತ ಹೊಂದಿದ್ದರೂ, ನಾನು ಯೋಗಿ ಆದಿತ್ಯನಾಥ್ ಸಂಪುಟದಲ್ಲಿ ಬದ್ಧತೆಯಿಂದ ಕೆಲಸ ಮಾಡಿದ್ದೇನೆ. ಆದರೆ ದಲಿತರು, ಒಬಿಸಿಗಳು, ರೈತರು, ನಿರುದ್ಯೋಗಿಗಳು ಮತ್ತು ಸಣ್ಣ ಉದ್ಯಮಿಗಳ ಅತೀವ ಶೋಷಣೆಯ ಕಾರಣದಿಂದ ನಾನು ರಾಜೀನಾಮೆ ನೀಡುತ್ತಿದ್ದೇನೆ' ಎಂದು ರಾಜೀನಾಮೆ ಪತ್ರದಲ್ಲಿ ಸ್ವಾಮಿ ಪ್ರಸಾದ್ ಮೌರ್ಯ ಹೇಳಿದ್ದಾರೆ. ಪ್ರಬಲ ಒಬಿಸಿ (ಇತರ ಹಿಂದುಳಿದ ವರ್ಗ) ನಾಯಕ ಹಾಗೂ ಹಲವು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಮೌರ್ಯ ಅವರು ಮಾಯಾವತಿಯವರ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ತೊರೆದ ನಂತರ 2016 ರಲ್ಲಿ ಬಿಜೆಪಿ ಸೇರಿದ್ದರು.

ದಾರಾ ಸಿಂಗ್ ಚೌಹಾಣ್: ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಸಂಪುಟದಲ್ಲಿ ಅರಣ್ಯ ಪರಿಸರ ಮತ್ತು ಪ್ರಾಣಿಶಾಸ್ತ್ರ ಸಚಿವನಾಗಿ ಕಾರ್ಯನಿರ್ವಹಿಸಿದ್ದ ದಾರಾ ಸಿಂಗ್, ಹಿಂದುಳಿದ ವರ್ಗಗಳ ಪ್ರಭಾವಿ ನಾಯಕ. "ನಾನು ನನ್ನ ಇಲಾಖೆಯ ಅಭಿವೃದ್ಧಿಗಾಗಿ ಪೂರ್ಣ ಹೃದಯದಿಂದ ಕೆಲಸ ಮಾಡಿದ್ದೇನೆ. ದಲಿತರು, ಹಿಂದುಳಿದ ಸಮುದಾಯಗಳ ಬೆಂಬಲದೊಂದಿಗೆ ಬಿಜೆಪಿ ಸರ್ಕಾರ ರಚನೆ ಮಾಡಿದೆ. ಆದರೆ ಅವರಿಗೆ ಉತ್ತಮ ಸೇವೆ ನೀಡಲಿಲ್ಲ", ಅದಕ್ಕಾಗಿಯೇ ರಾಜೀನಾಮೆ ನೀಡಿದ್ದೇನೆ ಎಂದು ತಿಳಿಸಿದ್ದಾರೆ. ನಾನು ಸಮರ್ಪಣಾ ಭಾವದಿಂದ ಕೆಲಸ ಮಾಡಿದ್ದೇನೆ ಆದರೆ ಹಿಂದುಳಿದ, ವಂಚಿತ ವರ್ಗಗಳು, ದಲಿತರು, ರೈತರು ಮತ್ತು ನಿರುದ್ಯೋಗಿ ಯುವಕರ ಮೇಲಿನ ಈ ಸರ್ಕಾರದ ದಬ್ಬಾಳಿಕೆಯ ಧೋರಣೆ ಮತ್ತು ಹಿಂದುಳಿದವರು ಮತ್ತು ದಲಿತರ ಕೋಟಾವನ್ನು ನಿರ್ಲಕ್ಷಿಸಿದ್ದರಿಂದ ನನಗೆ ನೋವಾಗಿ ನಾನು ರಾಜೀನಾಮೆ ನೀಡುತ್ತಿದ್ದೇನೆ ಎಂದು ಚೌಹಾಣ್ ತಮ್ಮ ರಾಜೀನಾಮೆ ಪತ್ರದಲ್ಲಿ ಬರೆದಿದ್ದಾರೆ. ಸ್ವಾಮಿ ಪ್ರಸಾದ್ ಮೌರ್ಯ ಅವರಂತೆಯೇ ಬಹುತೇಕ ಅದೇ ದಾಟಿಯಲ್ಲಿ ಚೌಹಾಣ್ ರಾಜೀನಾಮೆ ಪತ್ರವಿದೆ.. ದಾರಾ ಸಿಂಗ್ ಚೌಹಾಣ್ ಬಿಎಸ್ಪಿ ಮತ್ತು ಎಸ್ಪಿಯಲ್ಲಿ ನೆಲೆಸಿದ್ದಾರೆ. ಮೊದಲು ಬಿಎಸ್‌ಪಿಯಿಂದ ಎಂಎಲ್‌ಸಿ, ನಂತರ ರಾಜ್ಯಸಭೆಗೆ ಹೋದರು. ನಂತರ ಬಿಎಸ್‌ಪಿ ತೊರೆದು ಎಸ್‌ಪಿ ಸೇರಿ ಘೋಸಿ ಕ್ಷೇತ್ರದಿಂದ ಸಂಸದರಾದರು. 2014 ರಲ್ಲಿ ಲೋಕಸಭೆ ಚುನಾವಣೆಯಲ್ಲಿ ಸೋತ ನಂತರ, ಅವರು 2017 ರಲ್ಲಿ ಬಿಜೆಪಿ ಸೇರಿದರು ಮತ್ತು ಮೌ ಜಿಲ್ಲೆಯ ಮಧುಬನ್ ಕ್ಷೇತ್ರದಿಂದ ಸ್ಪರ್ಧಿಸಿ, ವಿಜೇತರಾಗಿ ಸಚಿವರಾದರು.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

ಧರಂ ಸಿಂಗ್ ಸೈನಿ: ಉತ್ತರ ಪ್ರದೇಶದ ಸಚಿವ ಧರಂ ಸಿಂಗ್ ಸೈನಿ ಇಂದು ಬಿಜೆಪಿಗೆ ರಾಜೀನಾಮೆ ನೀಡಿದ್ದು, ರಾಜ್ಯ ವಿಧಾನಸಭಾ ಚುನಾವಣೆಗೆ ಕೆಲವೇ ದಿನಗಳಿರುವಾಗ ಬಿಜೆಪಿ ತೊರೆಯುವ ಮೂಲಕ ಕಮಲ ಪಾಳಯಕ್ಕೆ ಶಾಕ್ ನೀಡಿದ್ದಾರೆ. "ದಲಿತರು, ಹಿಂದುಳಿದವರು, ರೈತರು, ನಿರುದ್ಯೋಗಿ ಯುವಕರು ಮತ್ತು ಸಣ್ಣ ವ್ಯಾಪಾರಿಗಳ ಬಗ್ಗೆ ತೀವ್ರ ನಿರ್ಲಕ್ಷ್ಯ ತೋರುತ್ತಿರುವ ಯೋಗಿ ಆದಿತ್ಯನಾಥ್ ಸರ್ಕಾರಕ್ಕೆ ನಾನು ರಾಜೀನಾಮೆ ನೀಡುತ್ತಿದ್ದೇನೆ ಎಂದು ಹೇಳಿದ್ದಾರೆ. ಅಷ್ಟೆ ಅಲ್ಲದೆ ಜನವರಿ 20 ವರೆಗೆ ಪ್ರತಿ ದಿನವೂ ಯೋಗಿ ಆದಿತ್ಯನಾಥ್ ಸರ್ಕಾರದ ಒಬ್ಬರು ಸಚಿವ ಹಾಗೂ ಬಿಜೆಪಿಯ ಓರ್ವ ಶಾಸಕ ಬಿಜೆಪಿಗೆ ರಾಜೀನಾಮೆ ನೀಡಲಿದ್ದಾರೆ ಎಂದಿದ್ದಾರೆ.

ಕಲಮ ತೊರೆದವರು ಸೈಕಲ್ ಏರಿದರು: ಮೂವರು ಸಚಿವರು ಆರು ಜನ, ಆರು ಜನ ಶಾಸಕರು ಈಗಾಗಲೇ ರಾಜೀನಾಮೆ ನೀಡಿದ ತಕ್ಷಣವೇ ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವರನ್ನು ಸಂಪರ್ಕಿಸಿದ್ದಾರೆ. 'ಸಾಮಾಜಿಕ ನ್ಯಾಯ'ದ ಹೋರಾಟದ ಅವಿರತ ಹೋರಾಟಗಾರ, ಶ್ರೀ ದಾರಾ ಸಿಂಗ್ ಚೌಹಾಣ್ ಜಿ ಅವರನ್ನು ಎಸ್‌ಪಿಯಲ್ಲಿ ಹೃತ್ಪೂರ್ವಕವಾಗಿ ಸ್ವಾಗತಿಸಲಾಗುತ್ತದೆ ಮತ್ತು ಸ್ವಾಗತಿಸುತ್ತೇವೆ ಎಂದು ಹೇಳಿದ್ದಾರೆ! SP ಮತ್ತು ಅದರ ಮಿತ್ರಪಕ್ಷಗಳು ಒಂದಾಗುತ್ತವೆ ಮತ್ತು ಸಮಾನತೆ ಮತ್ತು ಸಮಾನತೆಯ ಚಳುವಳಿಯನ್ನು ತೀವ್ರತೆಗೆ ಕೊಂಡೊಯ್ಯುತ್ತವೆ. ತಾರತಮ್ಯವನ್ನು ನಿವಾರಿಸಿ! ಇದು ನಮ್ಮ ಸಾಮೂಹಿಕ ಸಂಕಲ್ಪ! ಎಲ್ಲರನ್ನೂ ಗೌರವಿಸಿ~ ಎಲ್ಲರಿಗೂ ಜಾಗ! ಎಂದು ಬರುವವರನ್ನು ಕೈಬೀಸಿ ಕರೆದು ಅಪ್ಪಿಕೊಳ್ಳುತ್ತಿದ್ದಾರೆ.

ಒಂದೆಡೆ ಬಿಜೆಪಿಯ ಪ್ರಮುಖ ಮಂತ್ರಿಗಳು ಶಾಸಕರು ಪಕ್ಷ ತೊರೆಯುತ್ತಿದ್ದರೆ, ಬಿಜೆಪಿಗೆ ಇನ್ನಿಲದ ಚಿಂತೆಯಾಗಿದೆ. ಎರಡನೇ ಬಾರಿ ಅಧಿಕಾರಕ್ಕೆರುವ ಕನಸು ಕಂಡಿದ್ದ ಕಮಲ ಪಾಳಯದಲ್ಲಿ ಡವಡವ ಆರಂಭವಾಗಿದೆ. ಹೈಕಮಾಂಡ್‌ಗಂತೂ ಇನ್ನಿಲ್ಲದ ಹೈ ಟೆನ್ಷನ್ ಶುರುವಾಗಿದೆ. ಉತ್ತರ ಪ್ರದೇಶದಲ್ಲಿ 403 ವಿಧಾನಸಭೆ ಕ್ಷೇತ್ರಗಳಿದ್ದು, ಒಟ್ಟು ಏಳು ಹಂತಗಳಲ್ಲಿ ಮತದಾನ ನಡೆಯಲಿದೆ. ಫೆಬ್ರವರಿ 10 ರಿಂದ ಮಾರ್ಚ್ 7ರವರೆಗೂ ಚುನಾವಣೆ ನಡೆಯಲಿದೆ. ಮಾರ್ಚ್ 10ರಂದು ಫಲಿತಾಂಶ ಪ್ರಕಟವಾಗಲಿದೆ. ಅಲ್ಲಿಯವರೆಗೆ ಕಾದು ನೋಡಬೇಕಷ್ಟೆ.

ಎಸ್‌ಬಿಐ–ಅದಾನಿ 'ಜತೆ ಸಾಲನೀಡಿಕೆ' ಒಪ್ಪಂದ

ಪುಟ 13 ರಿಂದ

ಇಲ್ಲಿ, ಸಾಮ್ರಾಜ್ಯಶಾಹಿಯ ಮತ್ತು ದೇಶೀಯ ಕಾರ್ಪೊರೇಟ್–ಕುಳಗಳ ಹಿತಾಸಕ್ತಿಗಳು ಸಂಧಿಸುತ್ತವೆ. ಇದರಲ್ಲಿ ಆಶ್ಚರ್ಯವೇನಿಲ್ಲ. ಆದರೆ, ಅವರ ಈ ಉದ್ದೇಶಗಳನ್ನು ಆರ್ಥಿಕ ಪರಿಭಾಷೆಯಲ್ಲಿ ಹಾಡಿ ಹೊಗಳಿ ಅವುಗಳನ್ನು ಜನರು ನಂಬುವಂತೆ ಮಾತನಾಡುವ ಅರ್ಥಶಾಸ್ತ್ರಜ್ಞರಿಗೇನೂ ಕೊರತೆ ಇಲ್ಲ. ಕನಿಷ್ಠ ಬೆಂಬಲ ಬೆಲೆಯಲ್ಲಿ ಸರ್ಕಾರ ಖರೀದಿ ಮಾಡುವ ವ್ಯವಸ್ಥೆಯನ್ನು ಕೊನೆಗೊಳಿಸುವುದನ್ನು ಒಪ್ಪಿಕೊಳ್ಳುವಂತೆ ಮತ್ತು ಆಹಾರ ಧಾನ್ಯಗಳನ್ನು ಉತ್ಪಾದಿಸುವುದನ್ನು ನಿಲ್ಲಿಸಿ ಅದರಿಂದ ದೂರ ಸರಿಯುವಂತೆ ರೈತರಿಗೆ ಅವರು "ಸಲಹೆ" ನೀಡುತ್ತಾರೆ.

ಈಗಿರುವ ಕೃಷಿ ವ್ಯವಸ್ಥೆಯು ದೇಶದ ಆಹಾರ ಭದ್ರತೆಯನ್ನು ಖಚಿತಪಡಿಸಿದೆ. ಆದಾಗ್ಯೂ, ಈ ವ್ಯವಸ್ಥೆಯನ್ನು ಬದಲಾಯಿಸುವ ಉದ್ದೇಶದಿಂದ ಮೋದಿ ಸರ್ಕಾರವು ಮೂರು ಕೃಷಿ ಕಾನೂನುಗಳನ್ನು ಜಾರಿಗೊಳಿಸುವ ನಾಚಿಕೆಗೇಡಿನ ಪ್ರಯತ್ನ ಮಾಡಿತು. ರೈತರ ಅಚಲ ಮತ್ತು ಪ್ರಶಂಸನೀಯ ಪ್ರತಿರೋಧದ ಹಿನ್ನೆಲೆಯಲ್ಲಿ ಆ ಕಾನೂನುಗಳನ್ನು ರದ್ದುಗೊಳಿಸಬೇಕಾಗಿ ಬಂತು. ಇದು ಅಂತಾರಾಷ್ಟ್ರೀಯ ಕೃಷಿ ಉದ್ದಿಮೆ ಮತ್ತು ದೇಶೀಯ ಕಾರ್ಪೊರೇಟ್ ಬೆಂಬಲಿಗರಿಗೆ ನಿರಾಸೆ ಮೂಡಿದೆ. ಹಾಗಾಗಿ, ಸರ್ಕಾರವು ಕಸಿವಿಸಿಗೊಂಡಿದೆ. ಬೆಳೆ ಮಾದರಿಯನ್ನು ಬದಲಾಯಿಸುವುದು ಮತ್ತು ಆ ಮೂಲಕ ಭೂ–ಬಳಕೆಯನ್ನು ಬದಲಿಸುವುದು ಸರ್ಕಾರದ ಬಯಕೆಯಾಗಿತ್ತು. ಯಾವ ಬಗೆಯಲ್ಲಾದರೂ ಸರಿ ಅದನ್ನು ಸಾಧಿಸಲೇಬೇಕು ಎಂಬುದು ಸರ್ಕಾರದ ಹಠ. ಸರ್ಕಾರದ ಸಾಂಸ್ಥಿಕ ಸಾಲವನ್ನು ಕಾರ್ಪೊರೇಟ್ ದೈತ್ಯರ ಒಡೆತನದ ಎನ್‌ಬಿಎಫ್‌ಸಿಗಳ ಮೂಲಕ ಹರಿಸುವುದು ಅಂತಹ ಒಂದು ಬಗೆ ಆಗಿದೆ.

ಸಾಂಸ್ಥಿಕ ಸಾಲವನ್ನು ಎನ್‌ಬಿಎಫ್‌ಸಿ ಮತ್ತು ಬ್ಯಾಂಕ್‌ಗಳು ಜತೆಗೂಡಿ ಕೊಡುವ ಸಾಲಗಳ ಮೂಲಕ ಹರಿಸುವ ಈ ಪ್ರಯತ್ನದಲ್ಲಿಯೂ ಸಹ, ವಸಾಹತುಶಾಹಿ–ಶೈಲಿ ಆಡಳಿತದ ಅನುಕರಣೆಯನ್ನು ಕಾಣಬಹುದು. ವಸಾಹತುಶಾಹಿ ಆಡಳಿತದ ಕಾಲದಲ್ಲಿ, ಭೂ ಕಂದಾಯವನ್ನು ನಿರ್ದಿಷ್ಟ ದಿನಾಂಕ–ಸಮಯದೊಳಗೆ ಪಾವತಿಸಬೇಕಾಗಿತ್ತು. ಕಟ್ಟುನಿಟ್ಟಿನ ಈ ನಿಯಮವನ್ನು ಪಾಲಿಸುವ ಸಲುವಾಗಿ ರೈತರು ವ್ಯಾಪಾರಿಗಳಿಂದ ಮತ್ತು ಈಸ್ಟ್ ಇಂಡಿಯಾ ಕಂಪನಿಯ ಏಜೆಂಟರಿಂದ ಸಾಲ ಪಡೆಯುತ್ತಿದ್ದರು. ಈ ಸಾಲದಾತರು, ಇಂತಿಂತಹ ಬೆಳೆಗಳನ್ನೇ ಬೆಳೆಯಬೇಕು ಮತ್ತು ಅವುಗಳನ್ನು ಇಂತಿಷ್ಟೇ ಬೆಲೆಗೆ ತಮಗೇ ಮಾರಾಟ ಮಾಡಬೇಕೆಂಬ ಷರತ್ತಿನ ಮೇಲೆ ಮುಂಗಡ ಕೊಡುತ್ತಿದ್ದರು. ಈ ವಿಧಾನದ ಮೂಲಕವೇ ಭಾರತದಲ್ಲಿ ಅಫೀಮು ಮತ್ತು ಇಂಡಿಗೊದಂತಹ ಬೆಳೆಗಳನ್ನು ಬೆಳೆಯಲೇ ಬೇಕೆಂಬ ಒತ್ತಾಯವನ್ನು ಮಾಡಲಾಗಿತ್ತು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಭೂ ಬಳಕೆಯ ವಿಧಾನವನ್ನು ಬದಲಾಯಿಸುವ ಉದ್ದೇಶದಿಂದ ಸಾಂಸ್ಥಿಕ ಸಾಲವನ್ನು ಒಂದು ಪ್ರಬಲ ಸಾಧನವಾಗಿ ಬಳಸಲಾಗುತ್ತದೆ. ಎಸ್‌ಬಿಐ–ಅದಾನಿ ಒಪ್ಪಂದವು ಭೂ ಬಳಕೆಯ ವಿಧಾನವನ್ನು ಬದಲಾಯಿಸುವ ಒಂದು ನವೀನ ಮಾರ್ಗ. ಈ ಅಂಶವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಇಂತಹ "ರಾಷ್ಟ್ರೀಕೃತ ಬ್ಯಾಂಕ್–ಎನ್‌ಬಿಎಫ್‌ಸಿ" ಒಪ್ಪಂದಗಳ ಮೂಲಕ ಸರ್ಕಾರವು ಏನನ್ನು ಮೂರು ಕೃಷಿ ಕಾನೂನುಗಳ ಮೂಲಕ ಸಾಧಿಸಲು ಸಾಧ್ಯವಾಗಲಿಲ್ಲವೊ ಅದನ್ನೇ ಸಾಧಿಸಲು ಮತ್ತೊಮ್ಮೆ ಪ್ರಯತ್ನಿಸುತ್ತಿದೆ. ಅಂತಹ ಒಪ್ಪಂದ–ಪ್ರಯತ್ನಗಳನ್ನು, ಕೃಷಿ ಕಾನೂನುಗಳನ್ನು ವಿರೋಧಿಸಿದ ತೀವ್ರತೆಯಿಂದ ಮತ್ತು ಏಕ–ಮನಸ್ಸಿನಿಂದ ವಿರೋಧಿಸಬೇಕು, ಏಕೆಂದರೆ, ಇದೂ ಸಹ ಅದೇ ಹೋರಾಟದ ಭಾಗವೇ.

ಸಾಮ್ರಾಜ್ಯಶಾಹಿ–ವಿರೋಧಿ ಹೋರಾಟ ಮತ್ತು ಚುನಾವಣಾ ಪರ್ಯಾಯ

ಪುಟ 8 ರಿಂದ

ಕೋಮುವಾದಿ ಹಾಗೂ ಜಾತಿಯಾಧಾರಿತ ಚುನಾವಣಾ ತಂತ್ರವನ್ನು ಹಿಮ್ಮೆಟ್ಟಿಸಲು ವರ್ಗಾಧಾರಿತ ಹೋರಾಟಗಳನ್ನು ಮುನ್ನಡೆಸುವುದೇ ಮುಂದಿನ ದಿನಗಳಲ್ಲಿ ರಾಷ್ಟ್ರ ಮಟ್ಟದಲ್ಲಿ ಕೈಗೊಳ್ಳಬೇಕಾದ ಕಾರ್ಯವಿಧಾನವಾಗಬೇಕು. ಶೋಷಿತ ವರ್ಗಗಳನ್ನು ವಿಭಜಿಸುವುದರ ಮೂಲಕ ತಮ್ಮ ಸುಲಿಗೆಯನ್ನು ಮುಂದುವರಿಸಲು ಕೋಮುವಾದಿ ರಾಜಕೀಯದ ಮೇಲೆ ಅವಲಂಬಿತರಾಗಿರುವ ಕಾರ್ಪೊರೇಟ್ ಶಕ್ತಿಗಳಿಗೆ ಈ ಐಕ್ಯ ಹೋರಾಟವು ದೊಡ್ಡ ಹೊಡೆತವನ್ನು ನೀಡಲಿದೆ. ರಾಜಕೀಯ ಲಾಭಕ್ಕಾಗಿ ಉಗ್ರ ಹಾಗೂ ಮೃದು ಕೋಮುವಾದ ಎರಡನ್ನೂ ಬಳಸುವ ಬಲಪಂಥೀಯ ರಾಜಕೀಯ ಪಕ್ಷಗಳನ್ನು ಹಿಮ್ಮೆಟಿಸಲು ಈಗ ಹೊರಹೊಮ್ಮುತ್ತಿರುವ ವಿಷಯಾಧಾರಿತ ವರ್ಗ ಹೋರಾಟಗಳಿಂದ ಮಾತ್ರ ಸಾಧ್ಯ.

ವರ್ಗಾಧಾರಿತ ಪರ್ಯಾಯ

ಕಾರ್ಪೊರೇಟ್ ಶಕ್ತಿಗಳ ವಿರುದ್ಧ ರೈತರು ಹಾಗೂ ಕಾರ್ಮಿಕರ ಒಗ್ಗಟ್ಟು, ಜನಸಮುದಾಯದ ಒಗ್ಗಟ್ಟು ಮತ್ತು ಕಾರ್ಪೊರೇಟ್ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ಎಡ, ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ಶಕ್ತಿಗಳ ವಿಶಾಲ ಐಕ್ಯತೆಯು ಇವತ್ತು ಭಾರತದ ರಾಷ್ಟ್ರೀಯ ರಾಜಕಾರಣದ ಆಧಾರಸ್ಥಂಭವಾಗಲಿದೆ. ಈ ಹೊಸದಾಗಿ ಹೊರಹೊಮ್ಮುತ್ತಿರುವ ಸನ್ನಿವೇಶಕ್ಕೆ ವಿವಿಧ ರಾಜಕೀಯ ಪಕ್ಷಗಳು ಹೇಗೆ ಸ್ಪಂದಿಸುತ್ತವೆ ಎನ್ನುವುದೇ ಅತ್ಯಂತ ನಿರ್ಣಾಯಕ ಅಂಶವಾಗಿದೆ. ದೇಶದ ತೀವ್ರ ಆರ್ಥಿಕ ಬಿಕ್ಕಟ್ಟು ಹಾಗೂ ರಾಜಕೀಯವಾಗಿ ಏಕಾಂಗಿಯಾಗುವ ಸ್ಥಿತಿಯು ಬಿಜೆಪಿಯನ್ನು ಚುನಾವಣಾ ಸೋಲಿನತ್ತ ತಳ್ಳಲಿದೆ. ಸಂಪತ್ತನ್ನು ಸೃಷ್ಟಿಸುವ ಶಕ್ತಿಗಳ ಬೆಳೆಯುತ್ತಿರುವ ಹೋರಾಟಗಳ ಆಧಾರದಲ್ಲಿ ಬಿಜೆಪಿ ವಿರುದ್ಧದ ಪರ್ಯಾಯವೊಂದು ರಾಷ್ಟ್ರ ಮಟ್ಟದಲ್ಲಿ ರೂಪುಗೊಳ್ಳಲಿದೆ. ಆದ್ದರಿಂದ ರಾಷ್ಟ್ರೀಯ ರಾಜಕಾರಣದಲ್ಲಿ ಬಿಜೆಪಿಗೊಂದು ಪರ್ಯಾಯವನ್ನು ಚುನಾವಣಾ ಸಮರಕ್ಕಿಂತಲೂ ಹೆಚ್ಚಾಗಿ ಸಂಸದಿಯೇತರ ಹೋರಾಟಗಳಿಂದ ಕಟ್ಟಲು ಸಾಧ್ಯವಾಗುತ್ತದೆ.

ಈ ನಿಟ್ಟಿನಲ್ಲಿ, ಕಾರ್ಮಿಕ ವರ್ಗ ಹಾಗೂ ರೈತರು ಆತ್ಮವಿಶ್ವಾಸದೊಂದಿಗೆ ಇನ್ನೂ ಒಟ್ಟಾಗಿ ಸಂಘಟಿತರಾಗಬೇಕಿದೆ ಮತ್ತು ಸಾಮ್ರಾಜ್ಯಶಾಹಿ ಸುಲಿಗೆಯಿಂದ ಎಲ್ಲಾ ವಿಭಾಗದ ಜನರ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ದೊಡ್ಡ, ಬಲಿಷ್ಠ ಹೋರಾಟಗಳನ್ನು ನಡೆಸಲು ಯೋಜಿಸಬೇಕಿದೆ. ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಕೇಂದ್ರ ಕಾರ್ಮಿಕ ಸಂಘಟನೆಗಳ ನಡುವಿನ ಸಮನ್ವಯತೆಯನ್ನು ಭಾರತದ ಎಲ್ಲಾ ರಾಜ್ಯ ಹಾಗೂ ಜಿಲ್ಲಾ ಮಟ್ಟದವರೆಗೂ ಮತ್ತು ಆ ಮೂಲಕ ಆರು ಲಕ್ಷ ಹಳ್ಳಿಗಳಿಗೂ ಹಾಗೂ ಪಟ್ಟಣಗಳಿಗೂ ವಿಸ್ತರಿಸಬೇಕು; ಅದು ರೈತ–ಕಾರ್ಮಿಕರ ಒಗ್ಗಟ್ಟನ್ನು ಮುಂದೆ ಕೊಂಡೊಯ್ಯುತ್ತದೆ ಮತ್ತು ಕಾರ್ಪೊರೇಟ್ ಶಕ್ತಿಗಳು ಹಾಗೂ ಸಾಮ್ರಾಜ್ಯಶಾಹಿಯ ವಿರುದ್ಧ ಜನರ ವಿಶಾಲ ಐಕ್ಯತೆಯನ್ನು ಬೆಸೆಯುವ ಉದ್ದೇಶವನ್ನು ಈಡೇರಿಸುತ್ತದೆ. ಇದು, ಸಾಮ್ರಾಜಶಾಹಿ–ನಿರ್ದೇಶಿತ ನವ–ಉದಾರವಾದಿ ವ್ಯವಸ್ಥೆಗೆ ವಿರುದ್ಧದ ಪ್ರಮುಖ ಹೋರಾಟದ ಕೇಂದ್ರವನ್ನಾಗಿ ಭಾರತವನ್ನು ಮಾರ್ಪಡಿಸಲಿದೆ. ಈಗ ಮುಂದುವರಿಯುತ್ತಿರುವ ಆಂದೋಲನವು ಸಾಮ್ರಾಜ್ಯಶಾಹಿ ಶೋಷಣೆಯ ವಿರುದ್ಧ ಕಾರ್ಪೊರೇಟ್–ನಿರ್ದೇಶಿತ ನವ–ಉದಾರವಾದಿ ವ್ಯವಸ್ಥೆಯ ವಿರುದ್ಧ ಭಾರತದ ಒಂದು ಮಹತ್ವದ ಹೊಸ ಘಟ್ಟವಾಗಿ ಪರಿಣಮಿಸಲಿದೆ.



ಚಂಪಾ ಎಂಬ ಎಚ್ಚರ....

ಪುಟ 16 ರಿಂದ

ತೊಡಗಿಸಿದ್ದು, ಬೂಸಾ ಚಳುವಳಿಗೆ ಬೆಂಬಲ, ಸಮಾಜವಾದಿ ಯುವಜನ ಸಭಾದ, ನವನಿರ್ಮಾಣ ಸಮಿತಿಯ ಹಾಗೂ ಜೆಪಿ ಚಳುವಳಿ. ತುರ್ತುಪರಿಸ್ಥಿತಿ ವಿರುದ್ಧ ಚಳುವಳಿ, ಜೈಲುವಾಸ, ಬಂಡಾಯ ಸಾಹಿತ್ಯ ಚಳುವಳಿ, ಗೋಕಾಕ್ ಚಳವಳಿ, ಕನ್ನಡ ಮಾಧ್ಯಮ, ಮಂಡಲ್ ಪರ ಚಳುವಳಿ, ಕೋಮುವಾದದ ವಿರುದ್ಧ ಹಲವಾರು ಪ್ರತಿಭಟನೆಗಳು ಇತ್ಯಾದಿ, ಇತ್ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ದೌರ್ಜನ್ಯ, ಅನ್ಯಾಯ ನಡೆದಾಗ ಅಲ್ಲಿಗೆ ಪ್ರತಿಭಟನೆಗಳಿಗೆ ನೇತೃತ್ವ ನೀಡಿದ್ದು ಎಷ್ಟು ಬಾರಿಯೋ!

ಬರಹ ಮತ್ತು ಹೋರಾಟದ ಐಕ್ಯತೆ

ಈ ಅವಧಿಯಲ್ಲಿ ಅಂಕಣ ಬರಹ, ಸಂಕ್ರಮಣ ಸಂಪಾದಕತ್ವ ಮಾತ್ರ ಅವರ ಈ ಚಳುವಳಿಗಳ ಅಗತ್ಯ ಅಂಗವಾಗಿ, ಅವರ ಸಾಹಿತ್ಯ ರಚನೆಯ ಕುರುಹಾಗಿ ಉಳಿದುಕೊಂಡಿತು. ಹಾಗೆಂದ ಕೂಡಲೇ ಅವರ ಸಾಹಿತ್ಯ ಮುಖ್ಯವಲ್ಲ ಎಂದಲ್ಲ. ಅವರ ಸಾಹಿತ್ಯಕ ಕ್ರಿಯಾಶೀಲತೆಯ ಮುಂದುವರಿಕೆಯೇ ಹೋರಾಟಗಳಾಗಿ ಮೂಡಿವೆ ಎಂಬುದು ಗಮನಾರ್ಹ. ಬಹಳ ಸಾಹಿತಿಗಳಂತೆ ಕೇವಲ ಟೀಕಿಸಿ ಬರೆದು ನನ್ನ ಕೆಲಸ ಮುಗಿಯಿತು ಎಂದು ಭಾವಿಸಿ ಸುಮ್ಮನಾಗುವುದು ಅವರ ಜಾಯಮಾನವಾಗಲಿಲ್ಲ. ಅವರೇ ಹೇಳಿದಂತೆ, "ಇಂಥ ಕವನಗಳು ನಮ್ಮ ಅಕ್ಷರ ಪ್ರಪಂಚದಲ್ಲಿ ಐತಿಹಾಸಿಕ ದಾಖಲೆಗಳಾಗಿ ಮಾತ್ರ ಉಳಿಯ"ವುದರಲ್ಲಿ ಆಸಕ್ತಿ ಇರಲಿಲ್ಲ. 'ಬದಲಾಗಿ ಕ್ರಿಯಾರೂಪದ ವಾಸ್ತವ ಪ್ರಪಂಚದ ಇತಿಹಾಸ'ವನ್ನು ಕಿಂಚಿತ್ತಾದರೂ ಬದಲಾಯಿಸುವದರಲ್ಲಿ ಅವರ ಆಸಕ್ತಿ. "ಸಾಹಿತ್ಯ ಬದುಕಿಗೆ ಹತ್ತಿರವಾಗುವುದು, ಬದುಕಿನ ಅವಿಭಾಜ್ಯ ಅಂಗವಾಗುವುದು ಈ ಅರ್ಥದಲ್ಲಿಯೇ." ಎನ್ನುತ್ತಾರೆ ತುರ್ತು ಪರಿಸ್ಥಿತಿಯ ಕಾಲದ ಜೈಲುವಾಸದಿಂದ ಹೊರಬಂದ ತರುಣದಲ್ಲಿ ಗಾಂಧಿ ಸ್ಮರಣೆ ಕವನ ಸಂಕಲನದ ಮುನ್ನುಡಿಯಲ್ಲಿ.

ಮುಂದೆ ಅವರು ಜಾಗತೀಕರಣ ಸಂದರ್ಭದಲ್ಲಿ ಸಾಹಿತಿಯ ಹೊಣೆಗಾರಿಕೆಯ ಬಗ್ಗೆ ಬರೆಯುತ್ತಾ ಅದರ ವಿವಿಧ ಪರಿಣಾಮಗಳನ್ನು ವಿವರಿಸಿ ಹೇಳುತ್ತಾರೆ "ನಮ್ಮ ನಮ್ಮ ವೈಯಕ್ತಿಕ ಅನುಭವದ ನೆಲೆಗಳಲ್ಲಿ ಅವುಗಳಿಗೆ ಕಲಾತ್ಮಕ ವಿನ್ಯಾಸ ನೀಡುತ್ತಲೇ ಬದಲಾವಣೆಗಾಗಿ ಹೋರಾಡುತ್ತಿರುವ ಜನ ಸಮುದಾಯದ ಮಹಾ ಆಂದೋಲನದಲ್ಲಿ ಪಾಲುಗೊಳ್ಳಬೇಕಾಗಿದೆ."

ಅರಿವು, ಬರಹ, ಕ್ರಿಯೆಯ ಈ ಮಿಳನದ ಬಗ್ಗೆ ಅವರ ಬದ್ಧತೆ ಆಧುನಿಕ ಸಾಹಿತಿಗಳಲ್ಲಿ ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ. ಈ ಅರಿವು ಕೇವಲ ಮಾತುಗಳಾಗಿ ಉಳಿಯದೆ ಮೀಸಲಾತಿ, ಲಿಂಗಾಯತ ಧರ್ಮ, ಕೋಮುವಾದ, ಕಂದಾಚಾರ, ಕನ್ನಡ ಮಾಧ್ಯಮ ಮೊದಲಾದ ಮುಖ್ಯ ಪ್ರಶ್ನೆಗಳಲ್ಲಿ ಎದ್ದು ಕಾಣುತ್ತದೆ.

ಅವರ ಮತ್ತೊಂದು ಮುಖ್ಯ ಗುಣವೆಂದರೆ ತಮ್ಮದೇ ಜಾತಿಯ ಪುರೋಹಿತಶಾಹಿಯನ್ನು, ಅದರ ವಿರೂಪಗಳನ್ನು ಸೆಣಸುವುದು, ಆ ಮೂಲಕ ಜಾತಿವಾದ,ಪುರೋಹಿತಶಾಹಿಯ ವಿರುದ್ಧ ಮಾಡಿದ ಎಲ್ಲಾ ಹೋರಾಟಗಳಿಗೆ ನೈತಿಕತೆಯನ್ನು ಸ್ಥಾಪಿಸುವುದು. ಇದನ್ನು ಜಾತಿ ವಿರೋಧದ ಮಾತಾಡುವವರೆಲ್ಲರಿಂದಲೂ ನಿರೀಕ್ಷಿಸಿದರು.

ಬಸವ ಚಳುವಳಿ –

ಬಸವಣ್ಣನವರ ವಿಚಾರ, ತತ್ವಗಳನ್ನು ಮೆಚ್ಚಿ ಬರೆದಷ್ಟೇ ವೀರಶೈವ– ಲಿಂಗಾಯತ ಪುರೋಹಿತಶಾಹಿ ಬಸವಣ್ಣನವರ ವಿಚಾರಗಳಿಗೆ ಎಸಗಿದ ಅಪಚಾರವನ್ನು ತಮ್ಮ ಕವನಗಳಲ್ಲಿ ಖಂಡತುಂಡವಾಗಿ ಖಂಡಿಸಿದ್ದಾರೆ.:

ಸುರಲೋಕ ಭೂಲೋಕ ಬೇರಿಲ್ಲ ಕಾಣಿರೋ/
ಅಂದ ನಿನ ಬೇರಿಗೇ ಕೈ ಹಾಕಿ ಬಸವಾ //
ಶಿವನ ಒಡ್ಡೋಲಗಕೆ ಪಾರ್ಸಲ್ಲು ಮಾಡಿದೆವು /
ಶಿವನಿಂದಲೇ ಶಾಪ ಕೊಡಿಸಿದೆವು ಬಸವಾ //
ನಮ್ಮ ಹಾಗೇ ಎರಡು ಕಾಲು,ಕೈ ಇದ್ದ ನೀ /
ನಾಲ್ಕು ಕಾಲಿನ ಪ್ರಾಣಿಯಾದಿ ಬಸವಾ //

ಹಲವು ಭಾಷಣಗಳಲ್ಲಿ ಮಠಗಳ ಸ್ವಾಮೀಜಿಗಳ ಎದುರಿಗೇ ಟೀಕಿಸಿದ್ದಾರೆ. ದೊಡ್ಡ ಮಠವಾದ ಮೂರು ಸಾವಿರ ಶ್ರೀಗಳಿಗೆ ಥ್ರೀ ಥೌಸಂಡೇಶ್ವರ ಎಂದು ಹಂಗಿಸಿದ್ದಾರೆ. ಬಸವ ಚಳುವಳಿ ಎಂದು ಬರೆದ ಲೇಖನ ಮಠಾಧಿಪತಿಗಳು ಲಿಂಗಾಯತವನ್ನು ವಿರೂಪಗೊಳಿಸುವುದರ ಬಗ್ಗೆ ಮಾತ್ರವೇ ಅಲ್ಲದೆ ಬಸವಣ್ಣನವರ ಮೂಲ ವಿಚಾರಗಳಲ್ಲಿಯೇ ಕೊರತೆ ಇದ್ದುದರಿಂದಲೇ ಆ ವಿಚಾರಗಳು ದೊಡ್ಡ ಪ್ರಮಾಣದ ಸಾಮಾಜಿಕ ಬದಲಾವಣೆ ತರಲಿಲ್ಲ ಮತ್ತು ನಂತರದ ಕಾಲದಲ್ಲಿ ಪುರೋಹಿತಶಾಹಿಗಳಿಂದ ವಿರೂಪಕ್ಕೆ ಒಳಗಾದವು ಎಂದು ವಿಶ್ಲೇಷಿಸುತ್ತಾರೆ. ವಚನ ಚಳುವಳಿಯನ್ನು ಅಧ್ಯಯನ ಮಾಡಿದ ಸಾವಿರಾರು ಸಾಹಿತಿ, ವಿದ್ವಾಂಸರುಗಳಲ್ಲಿ ಈ ವಿಶ್ಲೇಷಣೆ ಕಾಣಲಾಗುವುದಿಲ್ಲ. ಹೀಗೇ ಮೂಲಕ್ಕೇ ಕೈ ಹಾಕುವುದಕ್ಕೆ ಬಹಳ ಗಟ್ಟಿ ಗುಂಡಿಗೆ ಬೇಕು. ಅದನ್ನು ಚಂಪಾನಂತಹವರು ಮಾತ್ರ ಮಾಡಿ ಜೈಸಿಕೊಳ್ಳಬಲ್ಲರು.

ಇಂತಹ ಕವನ,ಲೇಖನಗಳ ಮುಂದುವರಿಕೆಯಾಗಿ ವೀರಶೈವ ಎಂಬುದನ್ನು, ಹಿಂದೂ ಧರ್ಮದ ಒಂದು ಭಾಗವಾಗಿ ಬಿಂಬಿಸುವುದನ್ನು ವಿರೋಧಿಸಿದರು. ಲಿಂಗಾಯತ ಧರ್ಮದ ಹೋರಾಟಗಳಲ್ಲಿ ಭಾಗವಹಿಸಿದರು. ಅಕಸ್ಮಾತ್ ಏನಾದರೂ ಲಿಂಗಾಯತ ಧರ್ಮ ಹಿಂದೂ ಧರ್ಮದ ಭಾಗವೆಂದಾಗಿಬಿಟ್ಟರೆ ನಾನು ಲಿಂಗಾಯತ ಧರ್ಮವನ್ನು ತ್ಯಜಿಸುತ್ತೇನೆಂದು ದಿಟ್ಟತನದಿಂದ ಘೋಷಿಸಿದರು.

ಅಡಿಗರು ಮತ್ತು ನವ್ಯರ ಕಟು ಟೀಕೆ:

ನವ್ಯದ ಸೆಳೆತಕ್ಕೆ ಚಂಪಾ ಒಳಗಾಗಿ ಮುಖ್ಯ ಕವನ, ಅಸಂಗತವೆನ್ನುವ ನಾಟಕಗಳನ್ನು ಬರೆದರು. ಪ್ರಮುಖ ನವ್ಯ ಸಾಹಿತಿಗಳಲ್ಲೊಬ್ಬರೆಂದು ಪರಿಗಣಿತವಾದರು. ಆದರೆ ತಮ್ಮ ಹೋರಾಟಗಳ ಬೆಳಕಿನಲ್ಲಿ ಮೂಡಿದ ಅರಿವಿನಿಂದಾಗಿ ಬಹಳ ಬೇಗ ಹೊರಬಂದರು. ಅಡಿಗರನ್ನು ಶ್ಲಾಘಿಸಿ ಅವರು ಬರೆದ ಐವತ್ತರ ಅಡಿಗರು ಎಂಬ ಕವನ, ನಂತರ 60 ರ ಅಡಿಗರ ಅಡಿಗೆ ಎಂದು ಅಡಿಗರು ಮತ್ತವರ ಬಳಗವನ್ನೆಲ್ಲ ವಿಡಂಬಿಸುತ್ತಾರೆ.

"ಈ ಅರಳು ಮರಳಿನ ಕತೆ ಹೇಳಲೆರ ಸ್ವಾಮಿ?
ಕೇಳುವಂತವರಾಗಿರಿ:
ಪರಾಕುಗಳ ಪ್ರತಿಬಿಂಬ
ತುಂಬಿದ ಬೋಳು ತಲೆ
ಬರುಬರುತ್ತ
ಪೂರ್ಣ ಕುಂಭ
ಗಳ ಭೋ
ಜನಸಂಘದ ಪಾಕಶಾಲೆಯಾದದ್ದು"
...
ಒಂದು ಜನಾಂಗದ ಕಣ್ಣು ತೆರೆಸಿ
ಮಣ್ಣಿನ ವಾಸನೆ ತುಂಬಿದಾಸ್ವಾಮಿ
ಮತ್ತೊಂದು ಜನಾಂಗದ ಬಾಯಿ ತೆರೆಸಿ
ಶ್ರೀರಾಮ ನವಮಿಯ ದಿವಸ
ಸುರಿಯುತ್ತಿದ್ದಾನೆ ಮಂತ್ರದ ವಾಸನೆಯ
ಸಾವಯವ ಸಂಬಂಧದ ಪಾಕದಡಿಗೆ."

ಇನ್ನೂ ಹಲ ಹಲವು ಕವನಗಳಲ್ಲಿ ಅನಂತಮೂರ್ತಿ, ರಾಮಚಂದ್ರ ಶರ್ಮ, ಮಾ. ಕುಲಕರ್ಣಿ, ದೇಶ ಕುಲಕರ್ಣಿ ಕಂಬಾರರು ಮತ್ತಿತರರನ್ನೂ ವ್ಯಂಗ್ಯ ಮಾಡುತ್ತಾರೆ. ಜನರ ಬದುಕಿನ ಸಮಸ್ಯೆಗಳ ಹೋರಾಟಗಳಲ್ಲಿ ಎಲ್ಲಿದ್ದೀರಿ ಸ್ವಾಮಿ ಎಲ್ಲಿದ್ದೀರಿ ಎಂದು ಚಾವಟಿಯಿಂದ ಬಾರಿಸುತ್ತಾರೆ.

ಇನ್ನು ಬಂಡಾಯ ಸಾಹಿತ್ಯ ಚಳುವಳಿ ಹುಟ್ಟಲು ಕಾರಣವಾದ ಅಡಿಗ ಅಧ್ಯಕ್ಷತೆಯ ಸಾಹಿತ್ಯ ಸಮ್ಮೇಳನದ ಪ್ರಸಂಗವಂತೂ 'ನಳ ಕವಿಯ ಮಹಾಮಸ್ತಕಾಭಿಷೇಕ' ಎಂಬ ಬೀದಿ ನಾಟಕವಾಗಿ ಅಂದಿನ ದಿನಗಳಲ್ಲಿ ಬಹಳ ಫೇಮಸ್ಸು.

ಗಾಂಧೀಜಿಯವರ ದುರುಪಯೋಗದ ಬಗ್ಗೆ ಹಲ ಹಲವು ಕವನ ಬರೆದು ತಮ್ಮ ಒಳತೋಟಿಯನ್ನು ತೋಡಿಕೊಂಡಿದ್ದಾರೆ.

ತುರ್ತು ಪರಿಸ್ಥಿತಿಯ ಬಗ್ಗೆ ಅವರು ಬರೆದ ಕವನಗಳು ಹಲವಾರು. ಜಗದಂಬೆಯ ಬೀದಿ ನಾಟಕ ಎಂಬುದಂತೂ ತುರ್ತುಪರಿಸ್ಥಿತಿಯ ಮೊದಲೇ ಬರೆದು ನಟಿಸಲ್ಪಟ್ಟು ಜನರನ್ನು ಎಚ್ಚರಿಸಿದ ನಾಟಕ. ಚಂಪಾರಿಗೆ ಜೈಲು ತೋರಿಸಿದ ನಾಟಕ. ಹಾಗೆಯೇ ಒಂದು ಅಧ್ಯಯನಕ್ಕೊಳಪಡಿಸಬೇಕಾದ ವಿಷಯ ಕನ್ನಡದಲ್ಲಿ ಈ ನಾಟಕವೇ ಮೊದಲ ಬೀದಿ ನಾಟಕವೇ?

ಇದೇ ರೀತಿ ಬುರುಡೇ ಬಾಬಾನ ಲಕ್ಷ್ಮಾಪಹರಣ ಪವಾಡ ಕೂಡಾ ಎಚ್ಚೆನ್‌ರವರ ಹೋರಾಟದ ಜೊತೆ ನಿಂತು ಜನರನ್ನು ಎಚ್ಚರಿಸಿತು.

ಅವರ ಅನೇಕ ಕವನಗಳಲ್ಲಿ ಹಾಗೂ ಬೀದಿ ನಾಟಕಗಳಲ್ಲಿ ಯಾವ ಮುಖ ಮುಲಾಜಿಲ್ಲದೆ ರಾಷ್ಟ್ರಪತಿ ಜತ್ತಿ, ಪ್ರಧಾನಿ ಮೊರಾರ್ಜಿ ದೇಸಾಯಿ, ಜಗಜೀವನರಾಂ, ಚರಣ ಸಿಂಗ್ ಮೊದಲಾದವರನ್ನು ಹಂಗಿಸುತ್ತಾರೆ. ಅವರು ಬಹಳ ಗೌರವ ಕೊಡುತ್ತಿದ್ದ ಗೋಕಾಕರಂತಹ ಗುರುಗಳು, ಬೇಂದ್ರೆ, ರಾಜರತ್ನಂ, ಕಸ್ತೂರಿ ಮೊದಲಾದವರು ತುರ್ತು ಪರಿಸ್ಥಿತಿಯ ಬಗ್ಗೆ ಸೊಲ್ಲೆತ್ತದಿದ್ದಾಗ, ಸಾಯಿಬಾಬಾನ ಭಕ್ತರಾಗಿ ಹೋದಾಗ ಇವರ ಚಾಟಿಯೇಟಿಗೆ ಸಿಕ್ಕಿದ್ದಾರೆ.

ಇವರು ಬಂಡಾಯ ಸಾಹಿತ್ಯ ಚಳುವಳಿಯ ಮನೋಧರ್ಮವನ್ನು ಬಿತ್ತಿ ಬೆಳೆಸಲು ನಾಡಿನಾದ್ಯಂತ ತಿರುಗಾಡಿದ್ದು, ಸಂಕ್ರಮಣದ ಮೂಲಕ ಬಂಡಾಯದ ಬಗ್ಗೆ ಮಾತ್ರವಲ್ಲ ಮಂಡೇಲಾ, ಪ್ಯಾಲೆಸ್ಟೈನ್, ಅಂಬೇಡ್ಕರ್‌ರವರ ವಿಚಾರಗಳು, ಮೀಸಲಾತಿ, ಡಂಕೆಲ್ ಡ್ರಾಫ್ಟ್ ಮೊದಲಾದವುಗಳ ಬಗ್ಗೆ ತಿಳಿವು ಮೂಡಿಸಲು ಪ್ರಯತ್ನಿಸಿದ್ದು ಒಂದು ಪ್ರತ್ಯೇಕ ಲೇಖನ ಬೇಡುವಂತಹ ವಿಷಯ. ಸಂಕ್ರಮಣ ಹಳ್ಳಿಗಾಡಿನ ಸಾಹಿತಿಗಳ ಮೊದಲ ಬರಹಗಳಿಗೆ ಆದ್ಯತೆ ನೀಡಿ ನೂರಾರು ದಲಿತ, ಹಿಂದುಳಿದ, ಮಹಿಳಾ ಲೇಖಕರನ್ನು ಬೆಳೆಸಿದ್ದು ಅದರ ಮತ್ತೊಂದು ಮುಖ್ಯ ಕೊಡುಗೆ. ಲಂಕೇಶರ ಪಾಳೆಗಾರಿಕೆಯ ಬೆಳವಣಿಗೆ, ಅದರ ಅಪಾಯ, ನಂಜುಂಡಸ್ವಾಮಿಯವರ ಮಾಸ್ತರ್‌ಗಾರಿಕೆ ಚಳುವಳಿಗೆ ಒಡ್ಡುವ ಸಮಸ್ಯೆ ಇವುಗಳನ್ನು ಆರಂಭದ ಕಾಲದಲ್ಲಿಯೇ ಗುರುತಿಸುತ್ತಾರೆ. ಬರೆಯುತ್ತಾರೆ.

ಐಡೆಂಟಿಟಿ ಪಾಲಿಟಿಕ್ಸ್‌ನ ಅಪಾಯ, ದಲಿತ ಪ್ರತ್ಯೇಕತೆ ಕೊನೆಗೆ ಎಡಗೈ ಬಲಗೈ ಮಾತ್ರವಲ್ಲದೆ ಆ ಕೈಗಳ ಬೆರಳುಗಳ ನಡುವೆಯೂ ಜಗಳ ತರುವಂತ ಸ್ಥಿತಿ ಮುಟ್ಟಬಲ್ಲುದು ಎಂಬ ಕಾಣ್ಕೆ ಕೂಡಾ ಎರಡೂವರೆ ದಶಕಗಳ ಹಿಂದೆಯೇ ಎಚ್ಚರಿಸಿದ್ದಾರೆ ಎಂಬುದು ಅವರ ಚಳುವಳಿಗಳ ಬಗೆಗಿನ ಕಾಳಜಿಯ ಗಮನ ಮತ್ತು ಸಮಸ್ಯೆಯನ್ನು ಗುರುತು ಹಿಡಿಯುವ ಚುರುಕುತನವನ್ನೂ ಎತ್ತಿ ತೋರಿಸುತ್ತದೆ.

ಹೀಗೆಲ್ಲ ಗುಣಗಾನ ಮಾಡಿದ ಮಾತ್ರಕ್ಕೆ ಅವರಲ್ಲೇನೂ ದೋಷ, ಕೊರತೆ ಇರಲಿಲ್ಲವೆಂದಲ್ಲ. ಬಹು ಮುಖ್ಯ ಕೊರತೆಗಳೂ ಇದ್ದವು. ಆ ಕೊರತೆಗಳ ಕಾರಣ ಅವರು ತಮ್ಮೆಲ್ಲ ಸಾಮರ್ಥ್ಯವನ್ನು ಕರ್ನಾಟಕದ ಸಾಮಾಜಿಕ ಬದಲಾವಣೆಯಲ್ಲಿ ತೊಡಗಿಸಲು ತೊಡಕಾದವು.

ಆದರೆ ಅವರ ನಿಧನದ ಈ ಸಂದರ್ಭದಲ್ಲಿ ಅವರನ್ನು ಕಳಕೊಂಡ ನಿರ್ವಾತ ಪರಿಸ್ಥಿತಿ ಕೊರತೆಗಳ ವಿವರ ವಿಶ್ಲೇಷಣೆಯ ಸಮಯವಲ್ಲ. ಆದರೆ ಮೇಲೆ ಹೇಳಿದ ಐವರೂ ಸಮಾಜವಾದಿ ಪಂಚಕರು ಅವರ ಒಟ್ಟಾರೆ ಮತ್ತು ಪ್ರತ್ಯೇಕ ವ್ಯಕ್ತಿಗತ ಸಾಧನೆಗಳು ಮತ್ತು ಸಮಸ್ಯೆಗಳನ್ನು ಅಧ್ಯಯನ ಮಾಡಿ ಅವುಗಳಿಂದ ಕರ್ನಾಟಕ ಪಾಠ ಕಲಿಯಬೇಕಾದ ತುರ್ತಂತೂ ಇದೆ. ●

ಈ ಶತಮಾನದ ಕವಿಗಳು........

ಪುಟ 16 ರಿಂದ

ಕ್ಯಾಂಟೀನೊಂದರಲ್ಲಿ ಅಡಿಗೆಗೆಲಸಕ್ಕೆ ನಿಂತಿದ್ದಾರೆ. 1999ರ ಓಣಂ ಹಬ್ಬದಂದು ಹೆಂಡತಿ ಹಾಗೂ ಇಬ್ಬರು ಮಕ್ಕಳಿಗೆ ಊಟಕ್ಕಿಲ್ಲದ ಸ್ಥಿತಿ ಉಂಟಾದದ್ದನ್ನು ಪವಿತ್ರನ್ ಸದಾ ನೆನೆಯುತ್ತಾರೆ. ಅಂದುಸಕುಟುಂಬ ರೈಲಿಗೆ ತಲೆಯಿಕ್ಕಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನ ನಡೆಸಿ ವಿಫಲರಾದರು. ಬದುಕಿನ ತುಂಬ ಇಂಥ ಸಂಘರ್ಷಗಳು ಇದಿರಾದಾಗಲೂ ಕಾವ್ಯ ರಚನೆಯಲ್ಲಿ ಅದಮ್ಯ ಹುಮ್ಮಸ್ಸನ್ನು ತೋರುತ್ತ ಬಂದಿದ್ದಾರೆ. "ಮುರಿವುಗಳುಡೆ ವಸಂತಂ" (ಗಾಯಗಳ ವಸಂತ), "ರಕ್ತಕಾಂಡಂ" (ರಕ್ತಕಾಂಡ), "ಕತ್ತುನ್ನ ಪಚ್ಚಮ ರಂಗಳ್ಕಿಡಯಿಲ್" (ಉರಿವ ಹಸಿರು ಮರಗಳ ನಡುವೆ), "ಭೂಪಟಂಗಳಿಲ್ ಚೋರ ಪೆಯ್ಯುನ್ನು" (ಭೂಪಟಗಳಲ್ಲಿ ರಕ್ತ ಸುರಿದಿದೆ), "ವೀಟ್ಟಿಲೇಕ್ಕುಳ್ಳ ವಳಿಗಳ್" (ಮನೆಗೆ ಹೋಗುವ ದಾರಿಗಳು) ಮೊದಲಾದ ಅನೇಕ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಕೃತಿಗಳು ತಮ್ಮ ಪ್ರಾಮಾಣಿಕತೆ ಹಾಗೂ ಅನುಭವಗಳ ತೀವ್ರತೆಯಿಂದಾಗಿ ಮಲಯಾಳಂ ಸಾಹಿತ್ಯದ ದೊಡ್ಡ ಮೈಲಿಗಲ್ಲುಗಳಾಗಿವೆ. ಕೇರಳದ ಕಾವ್ಯಪ್ರಜ್ಞೆಯ ಮೇಲೆ ನಿರ್ಣಾಯಕವಾದ ಪ್ರಭಾವ ಬೀರಿದೆ.

ಇತ್ತೀಚಿನ ವರ್ಷಗಳಲ್ಲಿ ಪ್ರೋತ್ಸಾಹ ಸಿಗದ ಕಾರಣ ಇನ್ನೂ ಬೆಳಕಿಗೆ ಬಾರದೆ ಉಳಿದಿರುವ ಕವಿಗಳನ್ನು ಗುರುತಿಸಿ ಅವರ ಕೃತಿಗಳನ್ನು ಪ್ರಕಟಪಡಿಸುವ ಕಾರ್ಯವನ್ನು ತಮ್ಮ ಬದುಕಿನ ಗುರಿಯಾಗಿಸಿಕೊಂಡಿದ್ದಾರೆ ಪವಿತ್ರನ್. ಈ ರೀತಿ ಅವರ ಪ್ರಯತ್ನದಿಂದ ಓದುಗರ ಗಮನ ಸೆಳೆಯುವಲ್ಲಿ ಯಶಸ್ವಿಯಾದ ಕವಿಗಳಲ್ಲಿ ಒಬ್ಬರು ಶರತ್ ಬಾಬು ಪೇರಾವೂರ್. "ಪರದೇಶಿಯುಡೆ ಸುವಿಶೇಷಂಗಳ್" (ಪರದೇಶಿಯ ಸುವಾರ್ತೆಗಳು), "ಉನ್ಮಾದಂಗಳಿಲೇಕ್ಕು ತುರನ್ನಿಟ್ಟ ವಾದಿಲುಗಳ್" (ಉನ್ಮಾದಗಳ ಕಡೆಗೆತೆರೆದಿಟ್ಟ ಬಾಗಿಲುಗಳು) ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ ಶರತ್ ಬಾಬು. ಪವಿತ್ರನ್ 2021ರಲ್ಲಿ ಆರಂಭಿಸಿದ ಎರಡು ವಾಟ್ಸ್ ಆಪ್ ಗ್ರೂಪ್‌ಗಳಲ್ಲಿ ತಮ್ಮ ಕಾವ್ಯ ಎಂದಾದರೊಮ್ಮೆ ಪ್ರಕಟವಾಗಬಹುದೆಂಬ ಅಭಿಲಾಶೆ ಹೊಂದಿರುವ ನಾನೂರಕ್ಕೂ ಹೆಚ್ಚು ಕವಿಗಳಿದ್ದಾರೆ. ದುಡಿಯುವ ವರ್ಗದಿಂದ ಬಂದ ಕಾರಣವೋ ಏನೋ, ಇವರೆಲ್ಲ ಪ್ರಗತಿಶೀಲ ಹಾಗೂ ಎಡಪಂಥಿ ವಿಚಾರಧಾರೆಯ ಜೊತೆ ತಮ್ಮನ್ನು ಗುರುತಿಸಿಕೊಂಡವರು. ಶರತ್ ಬಾಬುವಿನಂತ ಕೆಲವರು ಸಿಪಿಐ(ಎಂ) ಪಕ್ಷದ ಸದಸ್ಯರೂ ಆಗಿದ್ದಾರೆ.

ಪುಸ್ತಕ ಪ್ರಕಟಣೆಗೆ ಬೇಕಾದ ಹಣವನ್ನು ಪವಿತ್ರನ್ ಸ್ನೇಹಿತರಿಂದ ಹಾಗೂ ಹಿತೈಷಿಗಳಿಂದ ಸಂಗ್ರಹಿಸುತ್ತಾರೆ. ಜಸ್ಸಿನ್‌ರ ಪುಸ್ತಕ ಪ್ರಕಟವಾದದ್ದೂ ಈ ರೀತಿಯಲ್ಲಿಯೇ. ಸಹೃದಯರಾದ ಸ್ನೇಹಿತರು ತಮ್ಮ ಶಕ್ತ್ಯಾನುಸಾರ ನೀಡಿದ ಹಣದಿಂದ ಮುದ್ರಣಕ್ಕೆ ಖರ್ಚಾದ 18,000 ರೂ.ಗಳನ್ನು ಸಂಗ್ರಹಿಸಲಾಯಿತು. ಪವಿತ್ರನ್ ಪತ್ತೆ ಹಚ್ಚಿದ ಕವಿಗಳ ಪೈಕಿ ಬಹುಶಃ ಅತ್ಯಂತ ಸೃಜನಶೀಲ ಹಾಗೂ ಪ್ರಭಾವಶಾಲಿಯಾದ ಶಬ್ದ ಜಸ್ಸಿನ್‌ರದು. ಮುಂದಿನ ದಿನಮಾನಗಳಲ್ಲಿ ಪವಿತ್ರನ್‌ರ ಹಾಗೆ ಮಲಯಾಳಂ ಕಾವ್ಯದಲ್ಲಿ ಹೊಸ ಸೌಂದರ್ಯ ಪ್ರಜ್ಞೆಯನ್ನು ಕಟ್ಟಿಕೊಡಬಲ್ಲ ಸಾಮರ್ಥ್ಯ ಹೊಂದಿರುವ ಕವಿ ಇವರು ಎಂದರೆ ಅತಿಶಯೋಕ್ತಿಯಾಗಲಾರದು.

ಇರಟ್ಟಿಯಲ್ಲಿ ನಡೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿದವರ ಸಂಖ್ಯೆ ಹದಿನೈದಕ್ಕೂ ಕಡಿಮೆ. ಆದರೆ ಅಲ್ಲಿ ಅನಾವರಣಗೊಂಡದ್ದು ನಮ್ಮ ಯುಗದ ಸಾರಭೂತ ಚಾರಿತ್ರಿಕ ಪಲ್ಲಟವೊಂದರ ಮಹತ್ವದ ದೃಶ್ಯಗಳಲ್ಲಿ ಒಂದು. ●

JANASHAKTHI KANNADA VARA PATRIKE JANUARY 17-23, 2022 Price: Rs. 10/- Date of Publication: 14 JANUARY 2022 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate**

ಚಂಪಾ ಎಂಬ ಎಚ್ಚರ



ಜಿ.ಎನ್. ನಾಗರಾಜ

ಚಂಪಾ ಕರ್ನಾಟಕದ ಸಾಂಸ್ಕೃತಿಕ, ಸಾಹಿತ್ಯಿಕ ಲೋಕ ಪ್ರಧಾನವಾಗಿ ಪ್ರಜಾಪ್ರಭುತ್ವ ಹಾಗೂ ಮತಾತೀತ (ಸೆಕ್ಯುಲರ್)ವಾಗಿ ಆರೋಗ್ಯಕರ ಸ್ಥಿತಿಯನ್ನು ಕಾಪಾಡಿಕೊಳ್ಳುವುದಕ್ಕೆ ಮಹತ್ವದ ಕೊಡುಗೆ ನೀಡಿದವರು. ಅಲ್ಲಿಲ್ಲಿ ಇಣುಕುವ ಕೋಮು ದ್ವೇಷದ ಚಾಲಕರು, ಪ್ರಚಾರಕರು ಬಾಲ ಬಿಚ್ಚಲು ಅಂಜುವ ಪರಿಸ್ಥಿತಿ ನಿರ್ಮಿಸಿದುದರಲ್ಲಂತೂ ಮುಖ್ಯ ಪಾತ್ರ ವಹಿಸಿದವರು. ಅವರು ಬೀಸುವ ಚಾಟಿಯೇಟಿನಂತಹ ಮಾತುಗಳು, ನೇರವಾಗಿ ಕೋಮುವಾದದ ವಿರುದ್ಧ ಚಳುವಳಿಗಳಲ್ಲಿ ಭಾಗವಹಿಸುವಿಕೆ, ತಮ್ಮ ಸಾಹಿತ್ಯಿಕ ಪ್ರಭಾವ, ರಾಜ್ಯಾದ್ಯಂತ ಸುತ್ತಾಟದಲ್ಲಿ ಮೂಡಿಸಿದ ಎಚ್ಚರ, ಸಂಕ್ರಮಣ ಪತ್ರಿಕೆಯ ಮೂಲಕ ಬೆಳೆಸಿದ ಸಾಹಿತಿ ಮತ್ತು ಓದುಗ ವಲಯ ಸಾಂಸ್ಕೃತಿಕ ಆರೋಗ್ಯಕ್ಕೆ ಅವರು ಐದು ದಶಕಗಳ ದೀರ್ಘ ಕಾಲ ಕರ್ನಾಟಕದ ಸಾಂಸ್ಕೃತಿಕ ಆರೋಗ್ಯಕ್ಕೆ ನೀಡಿದ ಕೊಡುಗೆಯ ತೊಲೆ ಕಂಬಗಳು.

ಚಂಪಾರವರು ಒಬ್ಬ ಮುಖ್ಯ ನವ್ಯ ಕವಿ, ನಾಟಕಕಾರ, ಬಂಡಾಯ ಸಾಹಿತ್ಯ ಚಳುವಳಿಯ ಮುಖ್ಯ ನೇತಾರ, ಅಂಕಣಕಾರ, ಭಾಷಣಕಾರ, ಸಂಪಾದಕ, ನಿರಂತರ ಹೋರಾಟಗಾರ, ಸಂಘಟಕ, ಎಂದೆಲ್ಲ ಬೇರೆ ಬೇರೆ ಪತ್ರಿಕೆ, ಮಾಧ್ಯಮಗಳು ವರ್ಣಿಸಿವೆ. ಈ ಬಹುಮುಖೀ ಆಯಾಮಗಳಲ್ಲಿ ಪ್ರತಿಯೊಂದರಲ್ಲೂ ಅವರು ತಮ್ಮದೇ ಅನನ್ಯತೆಯ ಛಾಪು ಮೂಡಿಸಿ ಪ್ರಸಿದ್ಧರಾಗಿದ್ದಾರೆ. ಚಂಪಾ ಎಂದರೆ ಈ ಎಲ್ಲ ಆಯಾಮಗಳೂ ಸೇರಿ ಸಮಗ್ರ ವ್ಯಕ್ತಿತ್ವವಾಗಿದ್ದರು, ಒಂದು ಸಂಸ್ಥೆಯಾಗಿ ಮಾರ್ಪಟ್ಟಿದ್ದರು.

ಸಮಾಜವಾದಿ ಪಂಚಕ

ಚಂಪಾರವರ ವ್ಯಕ್ತಿತ್ವ ಮತ್ತು ಕೊಡುಗೆಯನ್ನು ವಿಶ್ಲೇಷಿಸುವಾಗ ಅವರು ಅನಂತಮೂರ್ತಿ, ನಂಜುಂಡಸ್ವಾಮಿ, ಲಂಕೇಶ್, ತೇಜಸ್ವಿಯವರು ಸೇರಿದ ಮೂವತ್ತರ ದಶಕದಲ್ಲಿ ಜನಿಸಿ ಸ್ವಾತಂತ್ರ್ಯ ಬರುವ ವೇಳೆಗೆ ಅದರ ಫಲವನ್ನುಂಡ ಯುವಕರಾಗಿ ಸಮಾಜವಾದಿ ಪಂಚಕದ ಭಾಗವಾಗಿದ್ದರು ಎಂಬುದನ್ನು ಮರೆಯಬಾರದು. ಈ ಪಂಚಕರಲ್ಲಿ ಪ್ರತಿಯೊಬ್ಬರೂ ಕೂಡಾ ಕರ್ನಾಟಕದ ಸಾಮಾಜಿಕ, ಸಾಂಸ್ಕೃತಿಕ ರಂಗಗಳಿಗೆ ಮರೆಯಲಾಗದ ಕೊಡುಗೆಗಳನ್ನು ನೀಡಿದವರು. (ಶಾಂತವೇರಿ ಗೋಪಾಲಗೌಡರು ಇವರ ಹಿರಿಯರಾಗಿದ್ದರಿಂದ ಈ ಸಮಕಾಲೀನರಲ್ಲಿ ಸೇರಿಸಿಲ್ಲ)

70 ರ ದಶಕದಲ್ಲಿ ಈ ಪಂಚಕರು ಕೂಡಿ ಕ್ರಿಯಾಶೀಲರಾದರು. ಮತ್ತಷ್ಟು ಜನರನ್ನು ಸೆಳೆದರು. ಪರಸ್ಪರ ಪ್ರಭಾವಿಸಿದರು. ಬೆಳೆದರು. ಪರಸ್ಪರ ಆರೋಗ್ಯಕರವಾಗಿ ಸ್ಪರ್ಧಿಸಿದರು. ಬೇರೆ ಬೇರೆಯಾದರು. ಅನಾರೋಗ್ಯಕರವಾಗಿ ಕಿತ್ತಾಡಿದರು. ಕರ್ನಾಟಕಕ್ಕೆ ದೊರಕಬಹುದಾಗಿದ್ದ ಮತ್ತಷ್ಟು ಮಹತ್ವದ ಬೆಳವಣಿಗೆಯಿಂದ ವಂಚಿಸಿದರು. ಅವರು ಕೂಡಿ ಕ್ರಿಯಾಶೀಲರಾಗಿದ್ದ ಲೋಹಿಯವಾದಿ ಚಿಂತನೆಯ ಸಮಾಜವಾದಿ ಯುವಜನ ಸಭಾ, ನವನಿರ್ಮಾಣ ವೇದಿಕೆ, ಜೆಪಿ ಚಳುವಳಿ ಅವರ ಚಿಂತನೆಯನ್ನು ಬೆಳೆಸಿ ಅವರೆಲ್ಲರೂ ನೀಡಿದ ಕೊಡುಗೆಗೆ ಕಾರಣವಾಗಿದೆ. ಅದೇ ಸಮಯದಲ್ಲಿ ಅವರ ಕಿತ್ತಾಟ, ಕೊರತೆಗಳಿಗೂ ತನ್ನದೇ ಕೊಡುಗೆ ನೀಡಿದೆ.

ಈ ಪಂಚಕದ ಭಾಗವಾಗಿ ಬೆಳೆದ ಚಂಪಾ ಅವರ ನಡುವೆಯೂ ತಮ್ಮ ವೈಶಿಷ್ಟ್ಯ ಉಳಿಸಿಕೊಂಡಿದ್ದಾರೆ. ಈ ಐದು ಜನರಲ್ಲಿ ನಂಜುಂಡಸ್ವಾಮಿ ಸಾಹಿತ್ಯದಿಂದ ದೂರ ಉಳಿದು ಚಳುವಳಿಗಾರರಾಗಿಯೇ ಪ್ರಸಿದ್ಧರಾದರೆ ಉಳಿದ ನಾಲ್ಕು ಜನವೂ ಸಾಹಿತಿಗಳಾದ್ದರಿಂದ ಇವರ ನಡುವೆ ಪರಸ್ಪರ ಹೆಚ್ಚು ಕೊಡು ಕೊಳೆ, ಈರ್ಷೆ ಕಾಣಬಹುದು.

ಹೋರಾಟ, ಹೋರಾಟ, ಹೋರಾಟ

ಚಂಪಾರ ವೈಶಿಷ್ಟ್ಯವೆಂದರೆ ಈ ನಾಲ್ವರಲ್ಲಿ ಮಾತ್ರವಲ್ಲ ಕನ್ನಡದ ಯಾವುದೇ ಸಾಹಿತಿಗಿಂತಲೂ ಅತ್ಯಂತ ಹೆಚ್ಚು ಚಳುವಳಿಗಳಲ್ಲಿ ತೊಡಗಿಸಿಕೊಂಡದ್ದು. 70 ರ ದಶಕದಿಂದ ಆರಂಭವಾದ ಅವರ ಈ ತೊಡಗುವಿಕೆ ಒಂದು ದಶಕ ಕಾಲ ಸಾಹಿತ್ಯ ರಚನೆಯ ಜೊತೆ ಜೊತೆಗೆ ಸಾಗಿತು. 80 ರ ನಂತರ ಅವರ ವ್ಯಕ್ತಿತ್ವದ ಪ್ರಧಾನ ಅಭಿವ್ಯಕ್ತಿ ಹೋರಾಟಗಳ ಮೂಲಕವೇ. ಅವರು ಭಾಗವಹಿಸಿದ, ನೇತೃತ್ವ ನೀಡಿದ, ಹುಟ್ಟುಹಾಕಿದ ಚಳುವಳಿಗಳು ಒಂದೇ ಎರಡೇ. 70 ರ ದಶಕದ ಆರಂಭದಲ್ಲಿಯೇ ಜಾತಿ ವಿನಾಶ ಚಳುವಳಿ, ಅದರಲ್ಲಿ ಕುವೆಂಪುರವರನ್ನು

ಪುಟ 15 ನೋಡಿ

ಬಾವುಟ, ಬ್ಯಾನರ್ ಬಿದಿರು ಕೋಲುಗಳನ್ನು ಹಿಡಿದುಕೊಂಡು ಬರುತ್ತಿದ್ದ ಪ್ರೊಫೆಸರ್

ಧಾರವಾಡದಲ್ಲಿ ಯಾವುದೇ ಚಳುವಳಿಯನ್ನು ಅವರು ರೂಪಿಸಿದರೂ ಕೂಡಾ ಚಳುವಳಿಯ ಸಮಯಕ್ಕೆ ಬರುವಾಗ ಅವರ ಸ್ಕೂಟರ್‌ನಲ್ಲಿ ಅದಕ್ಕೆ ಸಂಬಂಧಿಸಿದ ಬ್ಯಾನರ್, ಬಿದಿರುಗಳನ್ನು ಇಟ್ಟುಕೊಂಡೇ ಬರುತ್ತಿದ್ದ ಈ ಪ್ರೊಫೆಸರರನ್ನು ನೋಡಿ ಅಲ್ಲಿಯ ವಿದ್ಯಾರ್ಥಿಗಳು, ಜನರೂ ದಂಗು ಬಡೆಯುತ್ತಿದ್ದರು. ಧಾರವಾಡ ಸೀಮೆಯಲ್ಲಿ ಕಾಲೇಜು ಲೆಕ್ಚರರ್ ಆದರೆ ಸಾಕು ಪ್ರೊಫೆಸರ್ ಎಂದು ಕರೆಯುವುದು ವಾಡಿಕೆ. ಅವರೂ ಕೂಡಾ ಹಾಗೆಯೇ ಕಾಲರ್ ಮೇಲೇರಿಸಿಕೊಂಡೇ ತಿರುಗುತ್ತಾರೆ. ಆದರೆ ಈ ನಿಜ ಪ್ರೊಫೆಸರ್ ನಡೆ ಹೀಗೆ.

ಅಷ್ಟೇ ಅಲ್ಲ, ಮಂಡಲ್ ವಿರೋಧಿ ಚಳುವಳಿ ಕರ್ನಾಟಕ ವಿವಿ ಮತ್ತು ಧಾರವಾಡ ಹುಬ್ಬಳ್ಳಿ ನಗರಗಳಲ್ಲಿ ಜೋರಾಗಿ ಬೆಳೆದು ಪತ್ರಿಕೆಗಳು ವಾರಗಟ್ಟಲೇ ಅವುಗಳಿಗೆ ಪ್ರಚಾರ ಕೊಡುತ್ತಿರುವಾಗ, ವಿವಿಯ ಪ್ರಾಧ್ಯಾಪಕರು, ಉಪನ್ಯಾಸಕರುಗಳಲ್ಲಿ ಬಹಳಷ್ಟು ಜನ ಮಂಡಲ್ ವಿರೋಧಿ ಮಾತಾಡುತ್ತಿರುವಾಗ ಚಂಪಾ ಮೀಸಲಾತಿ, ಮಂಡಲ್ ಪರ ಮಾತಾನಾಡುವುದಕ್ಕೆ ಸೀಮಿತವಾಗಲಿಲ್ಲ. ರಾತ್ರಿ 9–10 ಗಂಟೆಯ ವೇಳೆಗೆ ವಿದ್ಯಾರ್ಥಿಗಳ ಹಾಸ್ಟೆಲ್‌ಗೆ ಹೋಗಿ ಸಭೆಗಳನ್ನು ಮಾಡಿ ಅವರಿಗೆ ಮಂಡಲ್ ಬಗ್ಗೆ ವಿವರಿಸಿದರು. ಇದು ಹಲವು ರಾತ್ರಿಗಳ ದಿನಚರಿಯಾಗಿತ್ತು.

ವಿದ್ಯಾರ್ಥಿಗಳ ನೆರವಿನಿಂದ ಮೆರವಣಿಗೆ, ಪ್ರತಿಭಟನೆಗಳನ್ನು ಸಂಘಟಿಸಿದರು. ಇಂತಹ ಪ್ರತಿಭಟನೆಯೊಂದರಲ್ಲಿ ಮಂಡಲ್ ವಿರೋಧಿ ಪ್ರಚಾರ ಮಾಡುವ ಪತ್ರಿಕೆಗಳನ್ನು ಸುಟ್ಟರು.

ಈ ಶತಮಾನದ ಕವಿಗಳು



ಹಿರಿಯ ಕವಿ ಪವಿತ್ರನ್ ತೀಕ್ಕುನಿ ಪುಸ್ತಕ ಬಿಡುಗಡೆ ಮಾಡುತ್ತಿರುವುದು

11 ಜನವರಿ 2022 ರಂದು ಕೇರಳದ ಕಣ್ಣೂರು ಜಿಲ್ಲೆಯ ಇರಟ್ಟಿಯಲ್ಲಿ ವಿಶಿಷ್ಟ ಸಮಾರಂಭವೊಂದು ನಡೆಯಿತು. ಗಾರೆ ಗೆಲಸಕ್ಕೆ ಬಳಕೆಯಾಗುವ ಕೆಂಗಲ್ಲು ಕಡಿಯುವ ಕಾಯಕದ ಜಸ್ಟಿನ್ ಜೆಬಿನ್ ಎಂಬ ನಲವತ್ತು ವರ್ಷದ ಕಾರ್ಮಿಕನ ಕವನ ಸಂಕಲನ ಪ್ರಕಟವಾಯಿತು. ಕೋಝಿಕ್ಕೋಡಿನ ಧ್ವನಿ ಬುಕ್ಸ್ ಹೊರತಂದ "ಮುರಿವುಗಳುಡೆ ಪೋಷಕಂ" (ಗಾಯಗಳ ಪೋಷಣೆ) ಎಂಬ ಮಲಯಾಳಂ ಭಾಷೆಯ ಸಂಕಲನದ ಬಿಡುಗಡೆ ಜಸ್ಟಿನ್‌ರ ಮನೆಯಲ್ಲೇ ನಡೆಯಿತು. ಮಲಯಾಳಂನ ಹಿರಿಯ ಕವಿ ಪವಿತ್ರನ್ ತೀಕ್ಕುನಿ ಕೃತಿಯನ್ನು ಬಿಡುಗಡೆ ಮಾಡಿದರು. ಮೊದಲ ಪ್ರತಿಯನ್ನು ತೀಕ್ಕುನಿಯವರ ಕೈಯಿಂದ ಮೊದಲ ಪ್ರತಿ ಸ್ವೀಕರಿಸಿದ್ದು ಕವಿಯ ಮಗ ಜಸ್ಟಿನ್ ಜೈಸನ್ ಎಂಬ ಶಾಲಾ ವಿದ್ಯಾರ್ಥಿ. ಕುಟುಂಬದ ಸದಸ್ಯರಲ್ಲದೆ ತಮ್ಮ ಬಳಗದ ಏಳೆಂಟು ಮಂದಿ ಕವಿಗಳು ಮಾತ್ರ ಉಪಸ್ಥಿತರಿದ್ದ ಸಮಾರಂಭ ಇದಾಗಿತ್ತು. ಎಲ್ಲರ ಕಣ್ಣುಗಳೂ ತುಂಬಿಬಂದು ಮಾತು ಹೊರಡದೆ ಹೋದ ಮುಹೂರ್ತ.

1990ರ ದಶಕದಿಂದ ಈಚೆಗೆ ಭಾರತದ ವಿವಿಧ ಭಾಷೆಗಳ ಸಾರಸ್ವತ ಲೋಕಗಳಲ್ಲಿ ಜರುಗಿದ ಮಹತ್ವದ ಕ್ರಾಂತಿಯೊಂದರ ಸ್ಥಳೀಯ ಅಭಿವ್ಯಕ್ತಿಗಳಲ್ಲಿ ಒಂದು ಇದಾಗಿದೆ. ತಮಿಳು ಮುದ್ರಣ ಲೋಕದ ಚರಿತ್ರೆಯನ್ನು ಕಳೆದ ನಾಲ್ಕು ದಶಕಗಳಿಂದ ಸಮೀಕ್ಷಿಸುತ್ತ ಬಂದಿರುವ ಖ್ಯಾತ ಇತಿಹಾಸಕಾರ ಎ.ಆರ್. ವೆಂಕಟಾಚಲಪತಿಯವರು ಆಧುನಿಕ ತಮಿಳು ಸಾಹಿತ್ಯ ಕುರಿತು ಅನೇಕ ಸಂದರ್ಭದಲ್ಲಿ ಹೇಳಿರುವ ಮಾತೊಂದಿದೆ. ತಮಿಳಿನ ಸೃಜನಶೀಲ ಸಾಹಿತ್ಯವು ಮುದ್ರಣ ತಂತ್ರಜ್ಞಾನದ ಪ್ರವೇಶವಾದಾಗಿನಿಂದಲೂ ಬ್ರಾಹ್ಮಣ ಹಾಗೂ ಪುರುಷ ಕೇಂದ್ರಿತವಾಗಿತ್ತು. ಅಲ್ಲಿನ ದೊಡ್ಡ ಬರಹಗಾರರು ಬಹುತೇಕ ಬ್ರಾಹ್ಮಣರು ಹಾಗೂ ಗಂಡಸರು. ತಮಿಳಿನ ನವೋದಯ, ಪ್ರಗತಿಶೀಲ, ನವ್ಯ ಸಾಹಿತ್ಯಗಳ ರೂವಾರಿಗಳೆಲ್ಲರೂ ಇಂಥ ಹಿನ್ನೆಲೆಯಿಂದಲೇ ಬಂದವರು. ಈ ಅವಸ್ಥೆಯಲ್ಲಿ 1990ರ ನಂತರ ದೂರಗಾಮಿಯಾದ ಪಲ್ಲಟವುಂಟಾಗಿ ಬ್ರಾಹ್ಮಣೇತರ, ಅದರಲ್ಲೂ ವಿಶೇಷವಾಗಿ ದಲಿತ, ಬುಡಕಟ್ಟು, ಕ್ರೈಸ್ತ, ಮುಸ್ಲಿಮ್, ಮಹಿಳಾ ಹಾಗೂ ಲೈಂಗಿಕ ಅಲ್ಪಸಂಖ್ಯಾತ ಲೇಖಕರ ಪ್ರವೇಶವಾಯಿತು. ಆವರೆಗೆ ಮಧ್ಯಮ ವರ್ಗದ ಓದುಗರಿಗೆ ಅಪರಿಚಿತವಾಗಿದ್ದ ಬದುಕಿನ ಅನುಭವಗಳ ಹೊಸ ಪ್ರಪಂಚಗಳು ತೆರೆದುಕೊಳ್ಳಲು ಇದು ಕಾರಣವಾಯಿತು. ವೆಂಕಟಾಚಲಪತಿ ಹೇಳುವಂತೆ ತಮಿಳು ಸಾಹಿತ್ಯ ವೈವಿಧ್ಯಮಯ ಹಾಗೂ ಪ್ರಾತಿನಿಧಿಕವಾಗಿ ಮಾರ್ಪಟ್ಟಿತು.

ಮಲಯಾಳಂನಲ್ಲಿ ತಮಿಳಿನ ಹಾಗೆ ಬ್ರಾಹ್ಮಣರ ಮೇಲುಗೈ ಇರಲಿಲ್ಲ. ಆದರೆ ಅಲ್ಲಿಯೂ ಸಾಹಿತ್ಯವು ದೊಡ್ಡ ಪ್ರಮಾಣದಲ್ಲಿ ನಾಯರ್, ಈಳವ, ಸಿರಿಯನ್ ಕ್ರೈಸ್ತ ಲೇಖಕರ ನಿಯಂತ್ರಣದಲ್ಲಿದ್ದದ್ದು ವಾಸ್ತವ. ಕನ್ನಡ ಹಾಗೂ ಮರಾಠಿ ಭಾಷೆಗಳಲ್ಲಿ ಸಾಹಿತ್ಯವು 1970ರ ದಶಕದಲ್ಲಿಯೇ ಇಂಥ ಹಳೆಯ ಕಟ್ಟಳೆಗಳನ್ನು ಒಡೆಯುವಲ್ಲಿ ತಕ್ಕ ಮಟ್ಟಿಗೆ ಯಶಸ್ವಿಯಾಗಿದ್ದವು. ಆದರೆ ಇತರ ಭಾರತೀಯ ಭಾಷೆಗಳಲ್ಲಿ ಈ ಕ್ರಾಂತಿ ಉಂಟಾದದ್ದು 1990ರಿಂದ ಈಚೆಗೆ. ಜಸ್ಟಿನ್ ಜೇಬಿನ್‌ರ ಕವನ ಸಂಕಲನ ಈ ಐತಿಹಾಸಿಕ ಹಿನ್ನೆಲೆಯಲ್ಲಿ ಪ್ರಕಟವಾಗುತ್ತಿದೆ.

ಜಸ್ಟಿನ್ ತಮ್ಮ ಹನ್ನೆರಡನೆಯ ವಯಸ್ಸಿನಲ್ಲೇ ಕಾವ್ಯ ರಚನೆ ಆರಂಭಿಸಿದ್ದರು. ತಮ್ಮ ಶಾಲಾ ದಿನಗಳಲ್ಲಿ ತೀವ್ರ ಬಡತನವನ್ನು ಅನುಭವಿಸಿದವರು ಜಸ್ಟಿನ್. ತಂದೆಯದು ಕೆಂಗಲ್ಲು ಕಡಿಯುವ ಕೆಲಸ. ಇರಟ್ಟಿ ಸುತ್ತಮುತ್ತ ಅಂದು ಹೆಚ್ಚಿನ ಉದ್ಯೋಗಾವಕಾಶಗಳು ಇರಲಿಲ್ಲ. ಈಗಿನಂತೆ ಆಗಲೂ ಒಬ್ಬಾತ ಕೆಂಗಲ್ಲಿನ ಕೆಲಸದಿಂದ ಸಂಸಾರ ನಡೆಸುವುದು ಅಸಾಧ್ಯವೇ ಆಗಿತ್ತು. ಹೀಗಾಗಿ ಪ್ರತಿನಿತ್ಯ ಶಾಲೆ ಬಿಟ್ಟ ಕೂಡಲೆ ಹಾಗೂ ರಜಾದಿನಗಳಲ್ಲಿ ಜಸ್ಟಿನ್ ತಂದೆಯ ಜೊತೆ ಕಲ್ಲು ಕಡಿಯಲು ಹೋಗುತ್ತಿದ್ದರು. ಹೀಗಾಗಿ ಬಾಲ್ಯ ಹಾಗೂ ತಾರುಣ್ಯದ ಗೆಳೆತನಗಳಿಂದ ವಂಚಿತರಾದರು. ಇದರಿಂದ ಉಂಟಾದ ಒಂಟಿತನ ಅವರ ಬದುಕಿನ ಅನಿವಾರ್ಯ ಕೊಂಡಿಗಳಲ್ಲಿ ಒಂದಾಯಿತು. ಸಾಧ್ಯವಾದಾಗಲೆಲ್ಲಾ ಈ ವ್ಯಥೆಯಿಂದ ಪಾರಾಗಲು ಪುಸ್ತಕಗಳನ್ನು ಎರವಲು ಪಡೆದು ಓದ ತೊಡಗಿದರು. ತನ್ನ ಚಿಕ್ಕಂದಿನ ಬಡತನ ಹಾಗೂ ಒಂಟಿತನವೇ ಹರಳುಗಟ್ಟಿ ಕವಿತೆಯಾದದ್ದು ಎನ್ನುತ್ತಾರೆ ಜಸ್ಟಿನ್.

ಸಣ್ಣಂದಿನಲ್ಲೇ ಬರೆಯ ತೊಡಗಿದರೂ ಕಾವ್ಯ ರಚನೆ ನಿರ್ದಿಷ್ಟವಾದ ಗುರಿಯೊಂದನ್ನು ಪಡೆದುಕೊಂಡದ್ದೂ ಬರಹದ ತಂತ್ರತಮಗೆ ಸ್ವಾಯತ್ತವಾದದ್ದೂ ಪವಿತ್ರನ್ ತೀಕ್ಕುನಿಯವರ ಕಾವ್ಯವನ್ನು ಓದಿ ಅಧ್ಯಯನ ಮಾಡಿದ ಬಳಿಕ ಮಾತ್ರ ಎಂದು ಜಸ್ಟಿನ್ ಹೇಳುತ್ತಾರೆ. ಜಸ್ಟಿನ್‌ರಂತೆಯೇ ಅಪಾರ ಬಡತನ ಹಾಗೂ ನೋವುಗಳನ್ನು ಅನುಭವಿಸಿದ ಕವಿ ಪವಿತ್ರನ್. ಶಾಲೆಯ ದಿನಗಳಲ್ಲೇ ಕೂಲಿ ಕೆಲಸಕ್ಕೆ ಹೋಗುತ್ತಿದ್ದ ಪವಿತ್ರನ್ ಸ್ನಾತಕ ಶಿಕ್ಷಣವನ್ನು ಪೂರ್ಣಗೊಳಿಸದೆ ತಂಗಿಯ ಮದುವೆಗೆ ವರದಕ್ಷಿಣೆ ನೀಡಲು ಹಣಕ್ಕೆಂದು ಸ್ವತಃ ವರದಕ್ಷಿಣೆ ಪಡೆದು ವಿವಾಹವಾದರೂ. ಕೊನೆಗೂ ತಂಗಿಯ ವಿವಾಹ ಜೀವನ ಅತೃಪ್ತಿಕರವಾಗಿಯೇ ಉಳಿಯಿತು. ಪವಿತ್ರನ್ ಮೂರು ದಶಕಗಳ ಕಾಲ ಗಾರೆ ಗೆಲಸ, ಮೀನು ಮಾರಾಟ, ಹೆಂಡದಂಗಡಿಯ ಮಾಣಿ ಮೊದಲಾದ ಅನೇಕ ವೃತ್ತಿಗಳಲ್ಲಿ ನಿರತರಾಗಿ ಇದೀಗ

ಪುಟ 15 ನೋಡಿ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**